# ಅಧ್ಯಾಯ 13

# ಮುಕ್ತಾಯದ ಬುದ್ಧಿವಾದಗಳು

ಪ್ರಕರಣ ಗ್ರಂಥ, ಪ್ರಸಂಗ, ಮತ್ತು ಪತ್ರಿಕೆಯ ಮಿಶ್ರಣವಾಗಿದ್ದು, ಇಬ್ರಿಯರಿಗೆ ಪತ್ರಿಕೆಯು ಹೊಸ ಒಡಂಬಡಿಕೆಯಲ್ಲಿ ವಿಶಿಷ್ಟವಾಗಿರುತ್ತದೆ. ಮುಕ್ತಾಯವು ಒಂದು ಪ್ರಥಮ ಶತಮಾನದ ಪತ್ರಿಕೆಯ ಗುಣಗಳನ್ನು ಒಳಗೊಂಡಿರುತ್ತದೆ, ಆದರೆ ಇದೊಂದು ಸೂಕ್ತವಾದ ಮುಕ್ತಾಯಗೊಳಿಸುವಿಕೆ ಸಹ ಆಗಿರುತ್ತದೆ. ಈ ವಿಧವಾದ ಮುಕ್ತಾಯಗೊಳಿಸುವಿಕೆಗಿರುವ ತಾಂತ್ರಿಕ ಪದವು "ಸಮಾಪನ" ಎಂದಾಗಿದ್ದು, ಅದು ಲ್ಯಾಟಿನ್ ಪದವಾಗಿರುವ *peroratio*[1] ಎಂಬುದರಿಂದ ಬಂದದ್ದು. ಒಂದು ಸಮಾಪನದಲ್ಲಿ, ಒಬ್ಬ ಲೇಖಕ ಅಥವಾ ಭಾಷಣಕಾರನು ತನ್ನ ವಾದಗಳನ್ನು ಸಾರಾಂಶಗೊಳಿಸುತ್ತಾನೆ ಮತ್ತು ಭಾವಗಳಿಗೆ ಪ್ರಚೋದನೆಯನ್ನು ನೀಡುತ್ತಾನೆ. ಈ ಅಧ್ಯಾಯವು ಅನಂತರದಲ್ಲಿನ ಒಬ್ಬ ಲೇಖಕನಿಂದ ಸೇರ್ಪಡೆಗೊಳಿಸಲ್ಪಟ್ಟಿರುತ್ತದೆ ಎಂಬುದನ್ನು ನಂಬುವದಕ್ಕೆ ಯಾವ ಕಾರಣವೂ ಇರುವದಿಲ್ಲ.

ಪ್ರಾಚೀನ ಜಗತ್ತಿನಲ್ಲಿ ಈ ವಿಧವಾದ ಮುಕ್ತಾಯಗೊಳಿಸುವಿಕೆಯು ವಾಚಕರಿಗೆ ವಿಧೇಯರಾಗುವಂತೆ ಮನವಿ ಮಾಡಿಕೊಳ್ಳುವದಾಗಿತ್ತು. ಲೇಖಕನು ಬಾಧೆಗೊಳಗಾಗಿದ್ದ ಕ್ರೈಸ್ತರನ್ನು, ಗತಕಾಲದ ನಾಯಕರನ್ನು, ಮತ್ತು ಕ್ರಿಸ್ತನ ಬಾಧೆಗಳನ್ನು ಜ್ಞಾಪಕಮಾಡಿಕೊಳ್ಳುವ ಮೂಲಕವಾಗಿ ಇದನ್ನು ಸಾಧಿಸಿದನು (ವಚನಗಳು 3, 7, 12). ತನ್ನ ಸತ್ಯತೆಯು ಅಸಮರ್ಪಕವಾಗಿ ಪ್ರಶ್ನಿಸಲ್ಪಡುತ್ತಿದೆ ಎಂಬುದನ್ನು ಆತನು ಪರೋಕ್ಷವಾಗಿ ಸೂಚಿಸಿದನು (ವಚನಗಳು 18, 19). ಒಂದು ಉತ್ತಮವಾಗಿ ರಚಿಸಲ್ಪಟ್ಟಿರುವ ಮುಕ್ತಾಯವು ಸಹಪಾಠಿಗಳಿಂದ ಬರಬಹುದಾದಂಥ, ಹೊರಗಿನ ಅಪಾಯಗಳ ಕುರಿತು ಎಚ್ಚರಿಸುತ್ತದೆ, ಅವರು "ಗುಡಾರದಲ್ಲಿ ಸೇವೆಯನ್ನು ನಡಿಸುವವ[ರಾಗಿದ್ದರು]" ಆದರೆ ಪರಲೋಕದ ಅನ್ಯೋನ್ಯತೆಯಲ್ಲಿ ಯಾವ ಪಾಲು ಸಹ ಇಲ್ಲದವರಾಗಿದ್ದರು (ವ. 10). ಲೇಖಕನ ಅಂತಿಮ ಬುದ್ಧಿವಾದಗಳು ಪುಸ್ತಕದ ಉಳಿದ ಭಾಗದೊಂದಿಗೆ ಪರಿಪೂರ್ಣವಾಗಿ ಹೊಂದಾಣಿಕೆಯಾಗುತ್ತದೆ. ಪ್ರಕರಣ ಗ್ರಂಥ ವಾದಾತ್ಮಕ ಭಾಗವು ಮರೆತು ಹೋಗಿರುತ್ತದೆ, ಈ ಅಂಶಗಳನ್ನು ಪ್ರಸ್ತಾಪಿಸಿದ್ದು ವಾಚಕರಿಗೆ ಮಹತ್ವಪೂರ್ಣವಾದ ಸಂಗತಿಗಳನ್ನು ಜ್ಞಾಪಕಗೊಳಿಸಿತು ಹಾಗೂ ಪ್ರಮುಖ ಅಂಶಗಳನ್ನು ಸಾರಾಂಶಗೊಳಿಸಿತು. ಒಂದು ಉತ್ತಮವಾದ ಮುಕ್ತಾಯ ಭಾಗವು ಕ್ಲುಪ್ತವಾಗಿರಬೇಕೆಂದು ಗ್ರೀಕ್ ಭಾಷಣಕಾರರು ಭಾವಿಸಿದರು, ಮತ್ತು ಸಂದೇಶದ ಈ ಸಮಾಪನವು ಬಹುಶಃ ತಿಳಿಸುವದಕ್ಕೆ ಮೂರು ಅಥವಾ ನಾಲ್ಕು ನಿಮಿಷಗಳನ್ನು ತೆಗೆದುಕೊಳ್ಳುವ ಮೂಲಕ ಆ ಅಗತ್ಯತೆಯನ್ನು ಸಂಧಿಸುತ್ತದೆ.[2]

ತನ್ನ ಭಾಷಣವನ್ನು ಮುಕ್ತಾಯಗೊಳಿಸುವವನಾಗಿ, ಲೇಖಕನು ಅತಿಥಿಸತ್ಕಾರ್ಯ, ಸೆರೆಮನೆಯ ಸೇವೆ, ಮನೆವಾರ್ತೆತನ, ಸೇವೆ, ಸಭಾನಾಯಕರಿಗೆ ಅಧೀನರಾಗಿರುವದು, ಮತ್ತು ಪ್ರಾರ್ಥನೆಗಳಂತಹ ಸಭೆಯ ಮತ್ತು ವೈಯಕ್ತಿಕ ಕೆಲಸದ ವಿವಿಧ ಅಂಶಗಳ ವಿಷಯದಲ್ಲಿ ಪ್ರೋತ್ಸಾಹಿಸುತ್ತಾನೆ. ಆತನು ಯೆಹೂದಿಮತದ "ಪಾಳೆಯ[ದಿಂದ] . . . ಹೊರಟುಹೋಗೋಣ"

ಎಂದು ಅಂತಿಮ ಮನವಿಯನ್ನು ಮಾಡಿದನು ಮತ್ತು ಪತ್ರಿಕೆಯನ್ನು ಸ್ವೀಕರಿಸಿಕೊಂಡವರಿಗೆ ತನ್ನ "ಎಚ್ಚರಿಕೆಯ ಮಾತನ್ನು ಸಹಿಸಿಕೊಳ್ಳಬೇಕು" ಎಂದು ಸಹ ಹೇಳಿದನು (13:13, 22). ಇಂದು ಕ್ರೈಸ್ತರಿಗೆ ಈ ಅಧ್ಯಾಯಕ್ಕಿಂತಲೂ ಬೇರೆ ಇನ್ನಾವದೂ ಹೆಚ್ಚು ಪ್ರಸ್ತುತವಾಗಿರುವದಕ್ಕೆ ಸಾಧ್ಯವಿಲ್ಲ. ದೇವರಿಗೆ ಸೇವೆ ಮಾಡುವದಕ್ಕೆ ಕಾಣಿಕೆಗಳನ್ನು ಅರ್ಪಿಸುವದು ಮತ್ತು ಬೇರೆಯವರಿಗೆ ಸಹಾಯ ಮಾಡುವದು ಅಗತ್ಯವಿರುತ್ತದೆಂದು ಲೇಖಕನು ಖಂಡಿತವಾಗಿ ಹೇಳಿದನು. ಈ ಸಹೋದರರು ಅಂಥ ಕಳಕಳಿಯನ್ನು ಈಗಾಗಲೇ ತೋರ್ಪಡಿಸಿದ್ದರು (6:10).

## ಪ್ರೀತಿಸುವದಕ್ಕೆ ಜ್ಞಾಪಕಮಾಡಿಕೊಳ್ಳಿರಿ (13:1-6)

**13:1-3**

**[1]ಸಹೋದರ ಸ್ನೇಹವು ನೆಲೆಯಾಗಿರಲಿ. ಅತಿಥಿಸತ್ಕಾರಮಾಡುವದನ್ನು ಮರೆಯಬೇಡಿರಿ;**
**[2]ಅದನ್ನು ಮಾಡುವಲ್ಲಿ ಕೆಲವರು ತಿಳಿಯದೆ ದೇವದೂತರನ್ನೂ ಸತ್ಕರಿಸಿದ್ದಾರೆ. [3]ಸೆರೆಯವರ**
**ಸಂಗಡ ನೀವೂ ಜೊತೆ ಸೆರೆಯವರೆಂದು ಭಾವಿಸಿಕೊಂಡು ಅವರನ್ನು ಜ್ಞಾಪಕಮಾಡಿಕೊಳ್ಳಿರಿ. ನಿಮಗೂ ಅನ್ಯಾಯ ಸಂಭವಿಸೀತೆಂದು ತಿಳಿದು ಅನ್ಯಾಯ ಅನುಭವಿಸುವವರನ್ನು ನೆನಸಿರಿ. ದಾಂಪತ್ಯವು ಮಾನ್ಯವಾದದ್ದೆಂದು ಎಲ್ಲರೂ ಎಣಿಸಬೇಕು.**

**ವಚನ 1.** ಸಹೋದರ ಸ್ನೇಹ (ಪ್ರೀತಿಯು) φιλαδελφία (*philadelphia*, "ಸಹೋದರ ಪ್ರೀತಿ")[3] ಎಂಬ ಬಹಳ ಪರಿಚಿತವಾದ ಪದದಿಂದ ಅನುವಾದಿಸಲ್ಪಟ್ಟಿದೆ ಮತ್ತು ಸಹೋದರರು ಮತ್ತು ಸಹೋದರಿಯರು ಪರಸ್ಪರರ ಕಡೆಗೆ ಸಾಮಾನ್ಯವಾಗಿ ಹೊಂದಿರುವ ಸ್ವಾಭಾವಿಕವಾದ ಪ್ರೀತಿಯಾಗಿರುತ್ತದೆ. ಅಂಥ ಪ್ರೀತಿಯ ಅಗತ್ಯವಿರುತ್ತದೆಂಬುದು ಅನೇಕ ಸಾರಿ ಪೌಲನಿಂದ (ರೋಮಾ 12:10; 1 ಥೆಸಲೋನಿಕ 4:9) ಮತ್ತು ಪೇತ್ರನಿಂದ (1 ಪೇತ್ರ 2:17; 2 ಪೇತ್ರ 1:5–8) ಒತ್ತಿ ಹೇಳಲ್ಪಟ್ಟಿರುತ್ತದೆ.

ಯೇಸು ತನ್ನ ಪ್ರೀತಿಯ ಮಾದರಿಯ ಮೂಲಕವಾಗಿ ತನ್ನ ಜನರನ್ನು ನಿಜವಾದ ಸಹೋದರರು ಹಾಗೂ ಸಹೋದರಿಯರನ್ನಾಗಿ ಮಾಡಿದನು, ಅದು ಅವರೊಳಗೆ ಪ್ರೀತಿಯು ಅಭಿವೃದ್ಧಿಗೊಳ್ಳುವಂತೆ ಮಾಡಿತು (ಯೋಹಾನ 13:34, 35). ಆತನು ಹೀಗೆ ಹೇಳಿದನು, "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; *ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ* ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೇ. ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ *ಎಲ್ಲರೂ* ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು" (ಒತ್ತಿ ಹೇಳಿದ್ದು ನನ್ನದು). ಈಗ ಕ್ರಿಸ್ತನಲ್ಲಿ ಸಹೋದರರಾಗಿದ್ದ ಈ ಇಬ್ರಿಯ ಕ್ರೈಸ್ತರು ಸಹೋದರ ಪ್ರೀತಿಯನ್ನು ಹೊಂದಿದ್ದರು, ಆದರೆ ಅದನ್ನು ಮುಂದುವರೆಸುವದಕ್ಕಾಗಿ ಅವರು ಸಾಧನೆ ಮಾಡಬೇಕಿತ್ತು.

ಯೆರೂಸಲೇಮಿನ ವಿವಿಧ ಪಂಥಗಳ ನಡುವೆ ಕಚ್ಚಾಟಗಳು ಹೆಚ್ಚಾಗುತ್ತಿದ್ದವಾದರೂ, ಯೆಹೂದ್ಯರಾಗಿದ್ದ ಅವರು ಸ್ವಲ್ಪ ಮಟ್ಟಿಗೆ ಕುಟುಂಬ ಮನೋಭಾವವನ್ನು ಹೊಂದಿದ್ದರು. ಆ ಅಸಾಮರಸ್ಯವು ಕ್ರಿ.ಶ. 70ರಲ್ಲಿ ಭಯಾನಕವಾದ ದುಷ್ಪರಿಣಾಮಗಳಿಗೆ ನಡಿಸಿತು. ಯೆರೂಸಲೇಮಿನ ಯೆಹೂದ್ಯರ ಮಧ್ಯದಲ್ಲಿದ್ದ ತೀಕ್ಷ್ಣವಾದ ವಿಭಜನೆಯೇ ರೋಮನ್ ಸೈನ್ಯಕ್ಕೆ ಶರಣಾಗುವದಕ್ಕೆ ನಿರಾಕರಿಸುವಿಕೆಗೆ ನಿಜವಾದ ಕಾರಣವಾಗಿತ್ತು. ಯೆಹೂದಿ ಕ್ರೈಸ್ತರಲ್ಲಿ ಸಹ ಸಹೋದರ ಪ್ರೀತಿಯ ಕೊರತೆಯು ಹೆಚ್ಚಾಗುತ್ತಲೇ ಇದ್ದಿರಬಹುದಾಗಿದೆ.

ಹೇಗೂ, ಈ ದೇವಜನರು ತಂದೆಯೊಂದಿಗೆ ಒಂದೇ ಆಗಿದ್ದರಾದ್ದರಿಂದ ಯೇಸು ಅವರನ್ನು "ಸಹೋದರರು" ಎಂದು ಕರೆಯುವದಕ್ಕೆ ನಾಚಿಕೊಳ್ಳಲಿಲ್ಲ (ಇಬ್ರಿಯ 2:11). ಯೇಸು ಕ್ರಿಸ್ತನು ಮಹಾನ್ ಸಹೋದರತ್ವದ ಸಂಸ್ಥಾಪಕನಾಗಿದ್ದಾನೆ, ಅದು ಅದರ ಸದಸ್ಯರೆಲ್ಲರಿಂದಲೂ ಪ್ರೀತಿಸಲ್ಪಡಬೇಕಾಗಿತ್ತು (1 ಪೇತ್ರ 2:17). ಖಂಡಿತವಾಗಿಯೂ, ಇದರಲ್ಲಿ ಸಹೋದರತ್ವ ಏನೆಂಬುದನ್ನು ಅರ್ಥಮಾಡಿಕೊಳ್ಳುವದು ಸೇರಿರುತ್ತದೆ. ಅದನ್ನು ನಿರ್ಧರಿಸಿಕೊಂಡರೆ, ಅದರ ಭಾಗವಾಗಿರುವವರನ್ನು ಪ್ರೀತಿಸುವದಕ್ಕೆ ಶ್ರದ್ಧೆಯಿಂದ ಪ್ರಯಾಸ ಪಡಬೇಕು. ಈ ಕ್ರೈಸ್ತರೊಳಗೆ, ಒಬ್ಬನು ದೇವಾಲಯ, ಪರಿಶುದ್ಧ ಪಟ್ಟಣ, ಮತ್ತು ಧರ್ಮವನ್ನು ತೊರೆದು ಯೇಸುವಿನ ಶಿಷ್ಯರ ನಂಬಿಗಸ್ತರಾದ ವೃಂದವನ್ನು ಸೇರ್ಪಡೆಗೊಳ್ಳುವದಕ್ಕೆ ಮನಸ್ಸುಳ್ಳವರಾಗಿರುವದರಿಂದ ಸಹೋದರತ್ವವು ನಿರ್ಧರಿಸಲ್ಪಡುತ್ತಿತ್ತು.

ಪರಿವರ್ತನೆಗೊಂಡ ಯಾಜಕರು ಇಬ್ರಿಯರಿಗೆ ಪತ್ರಿಕೆಯನ್ನು ಸ್ವೀಕರಿಸಿಕೊಂಡ ಪ್ರಾಥಮಿಕ ಜನರಾಗಿದ್ದಲ್ಲಿ, ಧರ್ಮಶಾಸ್ತ್ರದ ಬೋಧಕರಾಗಿ ಅವರಿಗಿದ್ದ ಸ್ಥಾನವು ತಮ್ಮನ್ನು ಅವರ ಸಹೋದರರರಿಗಿಂತ ಉನ್ನತರೆಂಬ ರೀತಿಯಲ್ಲಿ ಭಾವಿಸಿಕೊಳ್ಳುವಂತೆ ಮಾಡಿರಬಹುದಾಗಿದೆ; ಅವರು ನಿಜವಾದ ಸಹೋದರ ಪ್ರೀತಿಯನ್ನು ಹೊಂದಬೇಕಾದರೆ ಅಂಥ ಮನೋಭಾವವನ್ನು ಜಯಿಸುವದು ಅಗತ್ಯವಿತ್ತು. ತಾತ್ವಿಕವಾಗಿ, ನಾವು ಯಾರಾರನ್ನು ಯೇಸು ದೇವರ ಮಕ್ಕಳನ್ನಾಗಿ ಅಂಗೀಕರಿಸಿಕೊಳ್ಳುತ್ತಾನೋ – ಕ್ರಿಸ್ತನಲ್ಲಿ ನಂಬಿಕೆಯಿಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೂಲಕ ದೇವರ ಮಕ್ಕಳಾಗಿರುವರೋ (ಗಲಾತ್ಯ 3:26, 27) – ಅವರನ್ನೆಲ್ಲರನ್ನು ಪ್ರೀತಿಸುತ್ತೇವೆ.

ನಾವು ನಮ್ಮ ಎಲ್ಲಾ ಸಹೋದರರನ್ನು ಮತ್ತು ಸಹೋದರಿಯರನ್ನು ಹೆಚ್ಚೆಚ್ಚಾದ ಪ್ರಮಾಣದಲ್ಲಿ ಪ್ರೀತಿಸುವದಕ್ಕೆ ಉತ್ಸುಕರಾಗಿರಬೇಕು, ನಂಬಿಕೆಯಲ್ಲಿ ಬಲಹೀನರಾಗಿ ರುವವರಿಗೆ ವಿಶೇಷ ಕಾಳಜಿಯನ್ನು ನೀಡಬೇಕು. ಗುಂಪುಗಾರಿಕೆಯನ್ನು ಹುಟ್ಟಿಸುವವನನ್ನು ಪ್ರೀತಿಸುವದು ಕಷ್ಟಕರವಾಗಿರುತ್ತದೆ; ಆದರೆ ಆತನಿಗೆ ಸಹ ಪ್ರೀತಿಯನ್ನು ತೋರಿಸಬೇಕು, ಆತನ ವಿಭಜಿಸುವಿಕೆಯನ್ನು ಖಂಡಿಸುವ ಅದೇ ವೇಳೆಯಲ್ಲಿ ಆತನನ್ನು ಒಂದು ಪ್ರೀತಿಯ ಅನ್ಯೋನ್ಯತೆಯೊಳಗೆ ಆಮಂತ್ರಿಸುವ ರೀತಿಯಲ್ಲಿ ಪ್ರೀತಿಯನ್ನು ತೋರಿಸತಕ್ಕದ್ದು (1 ಥೆಸಲೋನಿಕ 5:14, 15; ನೋಡಿರಿ 2 ಥೆಸಲೋನಿಕ 3:6). ನಾವು ಒಬ್ಬರಿಗೊಬ್ಬರು ಪ್ರಾಣವನ್ನು ಕೊಡುವಷ್ಟರ ಮಟ್ಟಿಗೆ ಸಹೋದರ ಪ್ರೀತಿಯು ಬಲಿಷ್ಠವಾಗಿರತಕ್ಕದ್ದು (1 ಯೋಹಾನ 3:16, 17). ಸಹೋದರರು ಐಕ್ಯತೆಯಲ್ಲಿ ಒಂದಾಗಿರುವದು ಎಷ್ಟು ಒಳ್ಳೇದು ಮತ್ತು ಮನೋಹರವಾದದ್ದು (ಕೀರ್ತನೆ 133:1)! ನಮ್ಮ ಅನ್ಯೋನ್ಯತೆಯಲ್ಲಿರುವ ದುರ್ಬಲರಿಗೆ ಸಹಾಯ ಮಾಡುವದಕ್ಕಾಗಿ ಅವಕಾಶಗಳನ್ನು ಹುಡುಕೋಣ (ರೋಮಾ 15:1, 2; ಗಲಾತ್ಯ 6:10).

ಸಹೋದರ ಪ್ರೀತಿಯು ಮಾಯೆಯಾಗುತ್ತಿರಬಹುದಾದ ಒಂದು ಗಂಭೀರವಾದ ಅಪಾಯವು ಇದ್ದಿರಬೇಕು, ಇಲ್ಲವಾದರೆ ಈ ಆಜ್ಞೆಯು ಕೊಡಲ್ಪಡುತ್ತಿರಲಿಲ್ಲ. ಜೊತೆಯ ಯೆಹೂದ್ಯರ ನಡುವೆ ಪ್ರೀತಿಯು ಹೆಚ್ಚುಕಡಿಮೆ ಪಂಗಡಗಳಿಂದಲೂ ಕ್ರಿ.ಶ. 70ರ ಮುತ್ತಿಗೆಯ ವೇಳೆಯಲ್ಲಿದ್ದ ವಿಭಜನೆಗಳಿಂದಲೂ ನಾಶಗೊಂಡಿರಬಹುದಾಗಿದೆ.

ಈ ಪತ್ರಿಕೆಯು ಯೂದಾಯದ ಆಯ್ದ ಕ್ರೈಸ್ತರ ಗುಂಪೊಂದಕ್ಕಾಗಿ ಓದಲ್ಪಟ್ಟಿರುವದಾದರೆ, ಅವರು ವಿಭಜನೆಗೊಳ್ಳುವಂತಹ ದಿನವು ಬರಲಿತ್ತು. ಕೆಲವರು ತಕ್ಷಣವೇ ಯಾವ ಅಪಾಯವೂ ಕಾಣಿಸದಿದ್ದಾಗ್ಯೂ ತಮ್ಮ ಮನೆಗಳನ್ನು ಬಿಟ್ಟು ಪಲಾಯನ ಮಾಡುವದಕ್ಕೆ ಮನಸ್ಸುಳ್ಳವರಾಗಿದ್ದರು, ಯಾಕೆಂದರೆ ಅವರು ಓಡಿ ಹೋಗತಕ್ಕದ್ದೆಂದು ಯೇಸು ಹೇಳಿದ ಮಾತುಗಳನ್ನು ಅವರು ನಂಬಿದ್ದರು (ಮತ್ತಾಯ 24:15-22; ಮಾರ್ಕ 13:14-20; ಲೂಕ 21:20-

24). ಅದು ನಿಜವಾಗಿಯೂ ಅನ್ಯೋನ್ಯತೆಯ ಒಂದು ಪರೀಕ್ಷೆಯಾಯಿತು ಮತ್ತು ಸಹೋದರ ಪ್ರೀತಿಗೆ ಅಡ್ಡಿಯುಂಟು ಮಾಡಿರಬಹುದಾಗಿದೆ.

**ವಚನ 2.** ಸಹೋದರ ಪ್ರೀತಿಯನ್ನು ತೋರ್ಪಡಿಸುವದಕ್ಕೆ ಒಂದು ಕಾರ್ಯರೂಪದ ಹೆಜ್ಜೆಯೆಂದರೆ ಅಪರಿಚಿತರಿಗೆ **ಅತಿಥಿಸತ್ಕಾರಮಾಡುವದು** ಆಗಿತ್ತು. ಮಧ್ಯಪೂರ್ವದ ಪ್ರಾಂತ್ಯದಲ್ಲಿ, "ಅತಿಥಿಸತ್ಕಾರ"ವು ಸ್ನೇಹದ ಒಂದು ವೈಶಿಷ್ಟ್ಯವಾದ ಸಂಕೇತವಾಗಿತ್ತು. ಇದು ಹಿಂಸೆಯ ಸಮಯಗಳಲ್ಲಿ ಗಂಭೀರವಾಗಿ ಅಗತ್ಯವಿದ್ದ ಒಂದು ಆಚಾರವಾಗಿತ್ತು, ಆದರೆ ಪರರಿಗೆ ಒಬ್ಬನ ಮನೆಯನ್ನು ತೆರೆಯಬೇಕೆಂಬ ಹೊಣೆಗಾರಿಕೆಯು ಕೆಲವರಿಗೆ ಬೇಸರವುಂಟು ಮಾಡುವದಾಗಿದ್ದಿರಬಹುದಾಗಿದೆ. ಅಂಥ ಪ್ರವೃತ್ತಿಯ ವಿರುದ್ಧ ಪೌಲನು ಎಚ್ಚರಿಸಿದನು ಮತ್ತು "ಗುಣಗುಟ್ಟದೆ" ಅತಿಥಿಸತ್ಕಾರ ಮಾಡಬೇಕೆಂದು ಸಹೋದರರನ್ನು ಬೇಡಿಕೊಂಡನು (1 ಪೇತ್ರ 4:9). "ಆದಿ ಕ್ರೈಸ್ತರು ಇದನ್ನು ಮಾಡುವದಕ್ಕೆ ಹೊಂದಿದ್ದ ಸಿದ್ಧ ಮನಸ್ಸು ಗಮನಿಸುತ್ತಿದ್ದ ಹೊರಗಿನ ಕ್ರೈಸ್ತೇತರ ಜನರಿಗೆ ಕುಚೋದ್ಯವಲ್ಲಿದ್ದರೂ ಆಶ್ಚರ್ಯಕರವಂತೂ ಆಗಿತ್ತು."[4] "ಅತಿಥಿಸತ್ಕಾರ್ಯ"ವು "ವಿಧವೆಯರ ಪಟ್ಟಿಯಲ್ಲಿ ಸೇರುವದಕ್ಕೆ" ಒಂದು ಅರ್ಹತೆಯಾಗಿತ್ತು (1 ತಿಮೊಥೆ 5:9, 10). ಈ ಸ್ತ್ರೀಯರು ತಮ್ಮನ್ನು ಅರ್ಹರೆಂದು ತೋರಿಸಿಕೊಂಡ ಧರ್ಮಕಾರ್ಯಗಳನ್ನು ಮಾಡುವದಕ್ಕೆ ಸಹಾಯ ಮಾಡಲ್ಪಡುತ್ತಿದ್ದರೆಂದು ತೋರುತ್ತದೆ. ರೋಮಾ 12:13ರಲ್ಲಿ ಪ್ರತಿಯೊಬ್ಬರು ಅತಿಥಿಸತ್ಕಾರವನ್ನು ಮಾಡುವವರಾಗಿರಬೇಕೆಂದು ಆಜ್ಞಾಪಿಸಿದನು.

ಕೆಲವರು ತಿಳಿಯದೆ **ದೇವದೂತರನ್ನೂ ಸತ್ಕರಿಸಿದ್ದಾರೆ** ಎಂದು ಲೇಖಕನು ಪ್ರಸ್ತಾಪಿಸಿದನು. ಆತನು ಆದಿಕಾಂಡ 18 ಮತ್ತು 19 ಅಧ್ಯಾಯಗಳಲ್ಲಿನ ಅಬ್ರಹಾಮ ಹಾಗೂ ಲೋಟರನ್ನು ಮನಸ್ಸಿನಕಲ್ಲಿಟ್ಟುಕೊಂಡು ಹೇಳಿದನೋ? ತಾನು ಕರ್ತನನ್ನು ಮತ್ತು ದೇವದೂತರನ್ನು ಸತ್ಕರಿಸುತ್ತಿದ್ದೇನೆಂಬುದನ್ನು ಅಬ್ರಹಾಮನು ಯಾವ ಸಮಯದಲ್ಲಿ ಗ್ರಹಿಸಿಕೊಂಡನೋ ಎಂಬುದು ಖಚಿತವಾಗಿರುವದಿಲ್ಲ, ಆದರೆ ಆತನು ಖಂಡಿತವಾಗಿಯೂ ಈ ಸಹಜವಾದ ಈ ಅತಿಥಿಗಳಿಗೆ ಸತ್ಕಾರ ಮಾಡಿದನ್ನು ಜ್ಞಾಪಕ ಮಾಡಿಕೊಂಡು ಅವುಗಳನ್ನು ತನ್ನ ಜೀವನದ ಅತ್ಯಂಥ ರೋಮಾಂಚಕಾರಿ ದಿನಗಳೆಂದು ಎಣಿಸಿಕೊಳ್ಳುವದಕ್ಕೆ ಶಕ್ತನಾಗಿದ್ದನು (ಅಲ್ಲದೆ ನ್ಯಾಯಸ್ಥಾಪಕರು 6:11-24; 13:2-21 ಸಹ ನೋಡಿರಿ). ಸುಮಾರು ಕ್ರಿ.ಶ. 95ರ ಹೊತ್ತಿಗೆ, ರೋಮಾಪುರದ Clementನು ಹೀಗೆ ಬರೆದನು, "ಆತನ ನಂಬಿಕೆ ಮತ್ತು ಅತಿಥಿಸತ್ಕಾರದ ಕಾರಣದಿಂದ ಅಬ್ರಹಾಮನಿಗೆ ಆತನ ಮುಪ್ಪಿನ ಪ್ರಾಯದಲ್ಲಿ ಒಬ್ಬ ಮಗನು ಕೊಡಲ್ಪಟ್ಟನು . . . ಲೋಟನು ತಾನು ಮಾಡಿದ ಅತಿಥಿಸತ್ಕಾರಕ್ಕಾಗಿ ಮತ್ತು ಭಕ್ತಿಗಾಗಿ ಸೊದೋಮಿನಿಂದ ಕಾಪಾಡಲ್ಪಟ್ಟನು . . ."[5] ಈ "ಅಪರಿಚಿತರನ್ನು" ಪ್ರೀತಿ ಮತ್ತು ದಯೆಯಿಂದ ನಡಿಸಿಕೊಳ್ಳುವ ತತ್ವವು ಧರ್ಮಶಾಸ್ತ್ರವು ಕೇಳುವಂಥದ್ದಾಗಿದೆ (ಯಾಜಕಕಾಂಡ 19:34). ಇದು "ಅಪರಿಚಿತ-ಪ್ರೀತಿ" (φιλοξενία, *philoxenia*) ಆಗಿತ್ತು.

ಮೊದಲ ಶತಮಾನದಲ್ಲಿ ಅತಿಥಿಸತ್ಕಾರವು ಅಷ್ಟೊಂದು ಅವಶ್ಯಕವಾಗಿದ್ದಕ್ಕೆ ಇನ್ನೊಂದು ಕಾರಣವೆಂದರೆ ವಸತಿಗೃಹಗಳು ದುಬಾರಿಯಾಗಿರುತ್ತಿದ್ದವು; ಅಲ್ಲದೆ ಅವುಗಳು ಅನೈತಿಕ ಚಟುವಟಿಕೆಗೆ ಕುಖ್ಯಾತಿಗೊಂಡಿದ್ದವು. ಹಿಂಸೆಪಡಿಸಲ್ಪಟ್ಟು ತಮ್ಮ ಮನೆಗಳಿಂದ ಓಡಿಸಲ್ಪಟ್ಟಿರುವವರಿಗೆ ಕ್ರೈಸ್ತೀಯ ಅತಿಥಿಸತ್ಕಾರದ ಅಗತ್ಯತೆಯು ಬಹಳವಾಗಿತ್ತು. ಆದದರಿಂದ, ಈ ಆಚಾರವನ್ನು ಸಭೆಯ ಜೊತೆ ಸದಸ್ಯರ ವಿಷಯದಲ್ಲಿ ಕೈಕೊಳ್ಳುವದು ಜೀವಾಳವಾಗಿತ್ತು. ವಸತಿಗೃಹಗಳು ಮತ್ತು ರೆಸ್ಟೋರೆಂಟಗಳು ಇರುವಿಕೆಯು ಇಂದು ಈ ಹೊಣೆಗಾರಿಕೆಯನ್ನು ನಮ್ಮಿಂದ ತೆಗೆದು ಹಾಕುವದಿಲ್ಲ. ಅತಿಥಿಸತ್ಕಾರವು ಕ್ರೈಸ್ತನ ಕರ್ತವ್ಯವಾಗಿದ್ದು ಅದು ಒಬ್ಬನನ್ನು

ಹಿರಿಯತ್ವಕ್ಕೆ ಅರ್ಹನನ್ನಾಗಿಸುತ್ತದೆ (1 ತಿಮೊಥೆ 3:2). ಆತನು ಈ ಅರ್ಹತೆಯನ್ನು ಪೂರೈಸುವದಕ್ಕೆ ಹಿರಿಯನ ಹೆಂಡತಿಯು ಅತ್ಯಂಥ ಹೆಚ್ಚು ಸಹಕಾರಿಯಾಗಿರಬಹುದಾಗಿತ್ತು.

**ವಚನ 3.** ಇಬ್ರಿಯರು ಈಗಾಗಲೆ ತಮ್ಮ ನಂಬಿಕೆಯ ನಿಮಿತ್ತವಾಗಿ ಸೆರೆಮನೆಗೆ ಹಾಕಲ್ಪಟ್ಟಿದ್ದವರ ಕಡೆಗೆ ಕಾಳಜಿಯನ್ನು ತೋರ್ಪಡಿಸಿದ್ದರು (10:32-34). ಅವರು **ಸೆರೆಯವರ**[ನ್ನು] **ಜ್ಞಾಪಕಮಾಡಿಕೊಳ್ಳುವದು** ಮಾತ್ರವೇ ಅಲ್ಲ, ಆದರೆ (ಅವರು ಸ್ವತಃ) **ಜೊತೆಯ ಸೆರೆಯವರೆಂದು ಭಾವಿಸಿಕೊಂಡು** ಇರಬೇಕಿತ್ತು (ನೋಡಿರಿ ರೋಮಾ 16:7).[6]

ನಾವು **ಸಹ** [ಎಲ್ಲರು] **ದೇಹದಲ್ಲಿ** ಇದ್ದೇವೆ ಮತ್ತು ಅದೇ ಸಭೆಯ ಅನ್ಯೋನ್ಯತೆಯಾಗಿದೆ (1 ಕೊರಿಂಥ 12:25; ಎಫೆಸ 1:22, 23). ಈ ವಾಚಕರನ್ನು ಜೊತೆಯ ಸೆರೆಯವರೆಂದು ಚಿತ್ರಿಸಿಕೊಳ್ಳಬೇಕು ಎಂಬುದು ಕೇವಲ ಸಹಾಯವನ್ನು ಒದಗಿಸಿರಿ ಎಂದು ಹೇಳುವದಕ್ಕಿಂತಲೂ ಒಂದು ಹೆಚ್ಚು ಪರಿಣಾಮಕಾರಿ ಬುದ್ಧಿವಾದವಾಗಿತ್ತು. ಹಿಂಸೆಯ ಬಲಿಪಶುಗಳೊಂದಿಗೆ ಬೇಡಿಗಳನ್ನು ಹಾಕಿಸಿಕೊಂಡವರಾಗಿರುವ ಬಗ್ಗೆ ಯೋಚಿಸುವದು ಎಷ್ಟು ಕಷ್ಟಕರವಾಗಿರಬಹುದು! ನಮ್ಮಲ್ಲಿ ಬಹತೇಕರು ಸೆರೆವಾಸವನ್ನು ಕಲ್ಪಿಸಿಕೊಳ್ಳಲಿಕ್ಕೂ ಆಗುವದಿಲ್ಲ. ಆದದರಿಂದ, ಆಗಾಗ ಸೆರೆಮನೆಗಳಿಗೆ ಭೇಟಿ ಕೊಡುವದರಿಂದ, ಬಹುಶಃ ಒಂದು ಪರಿಣಾಮಕಾರಿಯಾದ ಸೆರೆಮನೆ ಸೇವೆಯ ಭಾಗವಾಗಿ ಹೋಗಿ ಬರುವದರಿಂದ ಒಬ್ಬನು ತನ್ನ ಸ್ವಾತಂತ್ರ್ಯವನ್ನು ಕಳಕೊಳ್ಳುವದೆಂದರೆ ಹೇಗಿರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯವಾಗುತ್ತದೆ. ಸೆರೆಮನೆಯಲ್ಲಿರುವವರನ್ನು "ಜ್ಞಾಪಕಮಾಡಿಕೊಳ್ಳಿರಿ" ಎಂದರೆ "ಅವರ ಕುರಿತು ಯೋಚಿಸುವದು" ಎಂದಾಗಿದೆ. ಅದರರ್ಥವು ಅವರಿಗೆ ನಿರಂತರವಾಗಿ ಸಹಾಯವನ್ನು ಒದಗಿಸುತ್ತಲಿರಬೇಕು ಎಂದಾಗಿದೆ.

ಆರೈಕೆ ಮಾಡುವ ಮತ್ತು ಹಂಚಿಕೊಳ್ಳುವ ಮನೋಭಾವವು ಆದಿ ಸಭೆಯಲ್ಲಿ ಸ್ಪಷ್ಟವಾಗಿ ಕಂಡು ಬರುತ್ತಿತ್ತು (ಅಪೊಸ್ತಲರ ಕೃತ್ಯಗಳು 2:44-47). ಆ ಮನೋಧರ್ಮವು ಹೊಸ ಒಡಂಬಡಿಕೆಯ ಕಾಲದುದ್ದಕ್ಕೂ ಕಾಯ್ದುಕೊಳ್ಳಲಾಗಿತ್ತು (ಅಪೊಸ್ತಲರ ಕೃತ್ಯಗಳು 12:5, 12; 15:22, 25). ಪೌಲನು 1 ಕೊರಿಂಥ 12:26ನ್ನು ಬರೆಯುವಾಗ ಸೆರೆಯಲ್ಲಿರುವವರ ಕಡೆಗೆ ಕಳಕಳಿಯನ್ನು ಹೊಂದಿರುವದನ್ನು ಮನಸ್ಸಿನಲ್ಲಿ ಹೊಂದಿರಬಹುದಾಗಿದೆ. ಆತನು ರೋಮನ್ ನೆಲಮಾಳಿಗೆ ಬಂದಿಖಾನೆಯಲ್ಲಿ ಕುಳಿತಿರುವವನಾಗಿ, ಅಪೊಸ್ತಲನು ಹೀಗೆ ಬರೆಯುತ್ತಾನೆ, "ಲೂಕನು ಮಾತ್ರ ನನ್ನ ಜೊತೆಯಲ್ಲಿದ್ದಾನೆ" (2 ತಿಮೊಥೆ 4:11). ಒನೇಸಿಫೊರನ ಬಗ್ಗೆ ಒಂದು ಉನ್ನತವಾದ ಪ್ರಶಂಸೆಯು ಮಾಡಲ್ಪಟ್ಟಿರುತ್ತದೆ: "ಅವನು ಅನೇಕಾವರ್ತಿ ನನ್ನನ್ನು ಆದರಿಸಿದನು; ನನ್ನ ಬೇಡಿಗಳಿಗೆ ನಾಚಿಕೆಪಡದೆ" ಇದ್ದನು (2 ತಿಮೊಥೆ 1:16). ನಾವು "ಸುವರ್ಣ ನಿಮಯ"ವನ್ನು (ಮತ್ತಾಯ 7:12) ಅನುಸರಿಸುವದಾದರೆ ಸೆರೆಯಲ್ಲಿರುವವರನ್ನು ಆರೈಕೆ ಮಾಡಿರಿ ಎಂಬ ಬುದ್ಧಿವಾದಕ್ಕೆ ವಿಧೇಯರಾಗುವೆವು.

### 13:4-6

**4ದಾಂಪತ್ಯವು ಮಾನ್ಯವಾದದ್ದೆಂದು ಎಣಿಸಬೇಕು; ಗಂಡಹೆಂಡರ ಸಂಬಂಧವು ನಿಷ್ಕಳಂಕವಾಗಿರಬೇಕು. ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯತೀರಿಸುವ ನೆಂದು ತಿಳುಕೊಳ್ಳಿರಿ. 5ದ್ರವ್ಯಾಶೆಯಿಲ್ಲದವರಾಗಿರಿ; ನಿಮಗಿರುವವುಗಳಲ್ಲಿ ತೃಪ್ತರಾಗಿರಿ; ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ. 6ಆದದರಿಂದ –**

**ಕರ್ತನು ನನ್ನ ಸಹಾಯಕನು, ಭಯಪಡೆನು,**

**ಮನುಷ್ಯನು ನನಗೆ ಏನು ಮಾಡಾನು?**
**ಎಂದು ನಾವು ಧೈರ್ಯವಾಗಿ ಹೇಳಬಲ್ಲೆವು.**

**ವಚನ 4.** ಕುಟುಂಬವು ಯಾವದೇ ರೀತಿಯಲ್ಲಿ ಒಡೆದು ಹೋಗುವದಾದರೆ ಇಡೀ ಸಮಾಜದ ಮೇಲೆ ಪರಿಣಾಮ ಬೀರುವದೆಂಬುದನ್ನು ಲೇಖಕನು ಸ್ಪಷ್ಟವಾಗಿ ಅರಿತುಕೊಂಡನು. ವಿವಾಹವು ಕೇವಲ ಒಂದು "ಹಾಳೆಯ ತುಂಡು" ಅಲ್ಲ. ದೇವರು ಸ್ವತಃ ಅದನ್ನು ಪ್ರತಿಷ್ಠಾಪಿಸಿದನು. ಆತನು ವಿಚ್ಛೇದನವನ್ನು ಹಗೆ ಮಾಡುತ್ತಾನೆ (ಮಲಾಕಿ 2:15, 16). ದೇವರು ಭಕ್ತಿಯುಳ್ಳ ಕುಟುಂಬಗಳನ್ನು ಬಯಸುತ್ತಾನೆ ಯಾಕೆಂದರೆ ಅವುಗಳು ನೀತಿಯುಳ್ಳ ಮಕ್ಕಳನ್ನು ಉಂಟು ಮಾಡುತ್ತವೆ.

ನಮ್ಮ ಸುತ್ತಲಿನ ಲೋಕವು ನಮಗಿರುವದಕ್ಕಿಂತಲೂ ವ್ಯತ್ಯಾಸವಾದ ಮಾನದಂಡ ಗಳನ್ನು ಹೊಂದಿರುತ್ತದೆ. ನಮ್ಮ ಇಪ್ಪತ್ತೊಂದನೆಯ ಶತಮಾನದಲ್ಲಿ, ದಾಂಪತ್ಯ ಮತ್ತು ಕುಟುಂಬವನ್ನು ನಾಶಮಾಡುವದಕ್ಕಾಗಿ ಒಂದು ಸದೃಢವಾದ ಪ್ರಯತ್ನವು ನಡೆಯುತ್ತಿರುವದನ್ನು ಕಾಣುತ್ತೇವೆ. ಈ ವಾಕ್ಯಭಾಗದೊಂದಿಗೆ ಸಾಮರಸ್ಯದಿಂದಿರುವ ಕ್ರೈಸ್ತರು ಬೈಬಲಾಧಾರಿತ ಕುಟುಂಬ ವ್ಯವಸ್ಥೆಗೆ ವಿಶೇಷವಾದ ಗೌರವವನ್ನು ಹೊಂದಿರತಕ್ಕದ್ದು.

ಶುದ್ಧತೆ ಮತ್ತು ಒಬ್ಬನು ವಿವಾಹದಲ್ಲಿ ಮಾಡಿದ ಪ್ರತಿಜ್ಞೆಗಳಿಗೆ ನಿಷ್ಠೆಯಿಂದಿರುವದು ಸಹೋದರತ್ವದ ಪ್ರೀತಿಯನ್ನು ಕಾಪಾಡಿಕೊಂಡು ಹೋಗುವದರಲ್ಲಿ ಜೀವಾಳವಾಗಿರುತ್ತದೆ ಮತ್ತು ಸಮುದಾಯದಲ್ಲಿ ಒಳ್ಳೇತನಕ್ಕಾಗಿ ಒಂದು ಬಲವಾದ ಪ್ರಭಾವವಾಗಿರುತ್ತದೆ. ಖಂಡಿತವಾಗಿಯೂ, ಈ ಪ್ರತಿಜ್ಞೆಗಳಿಗೆ ನಂಬಿಗಸ್ತರಾಗಿರುವದು ಒಂದು ನಾಗರಿಕತೆಯ ಯಶಸ್ವಿಗೆ ಅವಶ್ಯಕವಾಗಿರುತ್ತದೆ. ವಿವಾಹದ ಬಂಧಕ್ಕೆ ಒಂದು ಪಾವಿತ್ರ್ಯತೆಯು ಜೋಡಣೆಯಾಗಿರುತ್ತದೆ. **ದಾಂಪತ್ಯವು ಮಾನ್ಯವಾದದ್ದೆಂದು ಎಲ್ಲರೂ ಎಣಿಸಬೇಕು** ಎಂಬ ಆಜ್ಞೆಯು ಸತತವಾಗಿ ಅಗೌರವ ತೋರಿಸಲ್ಪಟ್ಟಿರುವಂಥದಾಗಿದೆ. ಯೇಸು ಅದನ್ನು ಬಲಪಡಿಸುತ್ತಾ ಹೀಗೆ ಹೇಳಿದನು, "ಆದದರಿಂದ ದೇವರು ಕೂಡಿಸಿದ್ದನ್ನು ಮನುಷ್ಯನು ಅಗಲಿಸಬಾರದು" (ಮತ್ತಾಯ 19:6). ಇದಕ್ಕೆ ಅವಿಧೇಯರಾಗುವಾಗ ಘೋರ ಪರಿಣಾಮಗಳುಂಟಾಗುತ್ತವೆ ಎಂಬುದು ಪರೋಕ್ಷವಾಗಿ ಸೂಚಿಸಲ್ಪಟ್ಟಿದೆ.

ದಾಂಪತ್ಯದ ಪ್ರತಿಜ್ಞೆಗಳನ್ನು ಮುರಿಯುವದು ದೇವರು ಖಂಡಿಸುವಂತಹ ಪಾಪವಾಗಿದೆ ಎಂಬುದನ್ನು ನಾವು ಎಂದಿಗೂ ಮರೆಯಬಾರದು. ಆತನು ಆ ತಪ್ಪು ಮಾಡಿದವರನ್ನು ದಂಡಿಸುವನು. (ನೋಡಿರಿ ಜ್ಞಾನೋಕ್ತಿ 7:6-27.) ದೇವರನ್ನು ತಿರಸ್ಕರಿಸಿ ಬೈಬಲ್‌ನ್ನು ಹಳತಾಗಿ ಹೋಗಿರುವ ಪುಸ್ತಕವೆಂದು ಪರಿಗಣಿಸುವವರಿಗೆ ಇದು ಯಾವ ಅರ್ಥವನ್ನೂ ಹೊಂದಿರುವದಿಲ್ಲ. ನಾವು ದೇವರ ವಾಕ್ಯ ಮತ್ತು ಆತನ ಕಟ್ಟಳೆಗಳ ಬೆಲೆಯ ಬಗ್ಗೆ ಜನರಿಗೆ ಮನವರಿಕೆ ಮಾಡಿ ಕೊಡುವ ಮುಂಚೆ ಕ್ರೈಸ್ತತ್ವ ಮತ್ತು ಅದರ ಎಲ್ಲಾ ನಿಲುವುಗಳ ಕುರಿತು ಪುರಾವೆಗಳನ್ನು ಒದಗಿಸಬೇಕು.

**ಗಂಡಹೆಂಡರ ಸಂಬಂಧವು ನಿಷ್ಕಳಂಕವಾಗಿರಬೇಕು** ಎಂಬುದು ಲೈಂಗಿಕ ಸಂಬಂಧಗಳಿಗೆ ವಿವಾಹವು ಮಾತ್ರವೇ ಸನ್ನಿವೇಶವಾಗಿರುತ್ತದೆಂಬುದಾಗಿ ಗೌರವಿಸದಿದ್ದರೆ ದಾಂಪತ್ಯವು ಕೆಟ್ಟು ಹೋಗುತ್ತದೆ ಎಂಬುದನ್ನು ಸೂಚಿಸುತ್ತದೆ. ಈ ನಿಮಯವನ್ನು ಮೀರಿದ್ದ ಎರಡು ಗುಂಪುಗಳನ್ನು ಲೇಖಕನು ಹೆಸರಿಸುತ್ತಾನೆ. ಮೊದಲನೆಯದು **ಜಾರರು** ("ಹಾದರಿಗ"; KJV). ಈ ಪದವು πορνεία (*porneia*) ಎಂಬುದರಿಂದ ಬಂದದ್ದಾಗಿದ್ದು, πόρνος (*pornos*, ಒಂದು ಏಕವಚನದ ನಾಮಪದ) ಎಂಬ ಪದವಾಗಿದೆ. ಈ ಕೃತ್ಯವೇ ವಿಚ್ಛೇದನವನ್ನು ನ್ಯಾಯವೆಂದಾಗಿಸುತ್ತದೆ (ಮತ್ತಾಯ 5:32; 19:9).

*Porneia* ಎಂಬ ಪದವು ಒಬ್ಬ ವ್ಯಭಿಚಾರಿ ಅಥವಾ ಯಾವದೇ ಅನೈತಿಕ ವ್ಯಕ್ತಿಯ ಕೃತ್ಯಗಳನ್ನು ಒಳಗೊಂಡಿರಬಲ್ಲದು, ಉದಾಹರಣೆಗೆ ಸಲಿಂಗಕಾಮವನ್ನು ನಡಿಸುವದು. ಅದು "ವ್ಯಾಪಕ ವಿಧವಾದ ಲೈಂಗಿಕ ದುರಾಚಾರಗಳನ್ನು ಒಳಗೊಂಡಿದ್ದು ಕಾನೂನಿನಿಂದ ನಿಷೇಧಿಸಲ್ಪಟ್ಟಿರುವ ಸಂಬಂಧಗಳು ಅದರಲ್ಲಿ ಸೇರಿರುತ್ತವೆ."[7] ಒಬ್ಬನು "ಸಮ್ಮತಿಸುವ ಸಲಿಂಗಕಾಮದ ಆಚಾರಗಳನ್ನು ಯೇಸು ಎಂದಿಗೂ ಖಂಡನೆ ಮಾಡಲೇ ಇಲ್ಲ" ಎಂದು ನಿಖರವಾಗಿ ಹೇಳಿಕೊಳ್ಳುವದಕ್ಕೆ ಸಾಧ್ಯವಿಲ್ಲ. *Porneia* ವಿವಿಧ ರೀತಿಯ ಲೈಂಗಿಕ ದುರಾಚಾರಗಳಿಗೆ ಅನ್ವಯವಾಗುತ್ತದೆ, ಅದರಲ್ಲಿ ಲೈಂಗಿಕ ವಿಕೃತಿಗಳು ಮಾತ್ರವಲ್ಲದೆ ವಿವಾಹವಾಗಿರದ ವ್ಯಕ್ತಿಗಳು ಅಥವಾ ವಿವಾಹಿತ ವ್ಯಕ್ತಿ ಹಾಗೂ ತನ್ನ ಸ್ವಂತ ಸಂಗಾತಿಯಲ್ಲದವರೊಂದಿಗೆ ಸಂಭೋಗವನ್ನು ಸೇರಿರುತ್ತವೆ. ಸಲಿಂಗಕಾಮದ ಕೃತ್ಯಗಳು ಈ ಪದದಿಂದ ಖಂಡಿಸಲ್ಪಟ್ಟಿರುತ್ತವೆ.[8]

**ವ್ಯಭಿಚಾರಿಗಳು** (μοιχός, *moichos* ಎಂಬದರಿಂದ ಬಂದದ್ದು) ಎಂಬುದು ತಮ್ಮ ವಿವಾಹದ ಪ್ರತಿಜ್ಞೆಗಳನ್ನು ಉಲ್ಲಂಘನೆ ಮಾಡುವವರು ಸೂಚಿಸುತ್ತದೆ. ದಾಂಪತ್ಯದ ಸಂಬಂಧದಲ್ಲಿರುವ ಇಬ್ಬರೊಳಗೆ ಯಾವದೇ ವ್ಯಕ್ತಿಯು ಅಪನಂಬಿಗಸ್ತನಾಗಿರುವದನ್ನು ಸೂಚಿಸುತ್ತದೆ. ಇಲ್ಲೊಂದು ಸಹಾಯಕಾರಿ ವಿವರಣೆಯು ಇರುತ್ತದೆ: "ಸಾಮಾನ್ಯವಾಗಿ, ಎಲ್ಲಾ ಹಾದರತನವು ವ್ಯಭಿಚಾರವಾಗಿದೆ ಆದರೆ ಎಲ್ಲಾ ವ್ಯಭಿಚಾರವು ಹಾದರತನ ಅಲ್ಲ ಎಂದು ಹೇಳಬಹುದು."[9]

4ನೇ ವಚನವು "ದಾಂಪತ್ಯದ ಬಂಧವನ್ನು ಉಲ್ಲಂಘಿಸುವದರ ವಿರುದ್ಧ ಒಂದು ಸ್ಪಷ್ಟವಾದ ಎಚ್ಚರಿಕೆಯಾಗಿರುತ್ತದೆ. ಈ ಬಂಧವನ್ನು ಹಗುರವಾಗಿ ಎಣಿಸುವವರು ಮನುಷ್ಯರಿಂದ ನ್ಯಾಯತೀರ್ಪನ್ನು ತಪ್ಪಿಸಿಕೊಳ್ಳಬಹುದು, ಆದಾಗ್ಯೂ ಪಶ್ಚಾತ್ತಾಪ ಪಡದವರಾಗಿ ಅವರು ಎಂದಿಗೂ ದೇವರ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳಲಾರರು."[10] 1 ಥೆಸಲೋನಿಕ 4:1-8ರಲ್ಲಿ, ಪೌಲನು ಈ ಉಲ್ಲಂಘನೆ ಮಾಡಿದ ತಪ್ಪಿಗೊಳಗಾಗಿರುವವನು "ಮನುಷ್ಯನನ್ನು ತಿರಸ್ಕರಿಸುವದು ಮಾತ್ರವಲ್ಲದೆ ಪವಿತ್ರಾತ್ಮ ವರವನ್ನು ನಿಮಗೆ ದಯಪಾಲಿಸುವ ದೇವರನ್ನೂ ತಿರಸ್ಕರಿಸುತ್ತಾನೆ" ಎಂದು ಘೋಷಿಸಿದನು. ನಾವು ನಮ್ಮೊಳಗೆ ಪವಿತ್ರಾತ್ಮನನ್ನು ಹೊಂದಿರುವದಾದರೆ, ಯಾವದೇ ವಿಧವಾದ ಲೈಂಗಿಕ ಕಲಬೆರಕೆಯನ್ನು ಹೊರಗಿಟ್ಟಿರುವ "ಪವಿತ್ರ" ಜೀವಿತಗಳನ್ನು ಜೀವಿಸಬೇಕೆಂಬುದು ಆಜ್ಞಾರ್ಥಕವಾಗಿರುತ್ತದೆ. ದೇಹ ಮತ್ತು ಆತ್ಮದಲ್ಲಿ ಕ್ರಿಸ್ತನಿಂದ ಪರಿಶುದ್ಧಗೊಳಿಸ ಲ್ಪಟ್ಟಿರುವವನು ಹಾದರವನ್ನು ಮಾಡುವದಾದರೆ, ಆತನು ತನ್ನ ಜೀವಿತದಲ್ಲಿರುವ ಕ್ರಿಸ್ತನ ಪ್ರತಿಯೊಂದು ಕಾರ್ಯಕ್ಕೆ ವಿರುದ್ಧವಾಗಿ ಸಾಗುವವನಾಗಿದ್ದಾನೆ (1 ಕೊರಿಂಥ 6:15-20).

ಈ ಪರಿಶುದ್ಧತೆಯ ಪಥವನ್ನು ಅನುಸರಿಸುವದಕ್ಕೆ ಮಹಾನ್ ಪ್ರಚೋದನೆಯೆಂದರೆ **ದೇವರು ನ್ಯಾಯತೀರಿಸುವನು** ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದೇ. ಪಶ್ಚಾತ್ತಾಪವಿಲ್ಲದ ಪ್ರತಿಯೊಬ್ಬ ಹಾದರಕಾರನು ಅಥವಾ ವ್ಯಭಿಚಾರಿಯು ದೇವರ ಕೈಯಲ್ಲಿ ಸಂಕಷ್ಟವನ್ನನುಭವಿಸುವನು! ನ್ಯಾಯತೀರ್ಪಿಗಾಗಿ ಒಂದು ದಿನವು ನೇಮಿಸಲ್ಪಟ್ಟಿದೆ, ಆದ್ದರಿಂದ ದೇವರು ಇನ್ನು ಮೇಲೆ ಪಶ್ಚಾತ್ತಾಪ ಪಡುವದಕ್ಕೆ ವಿಫಲರಾಗುವದನ್ನು ನಿರ್ಲಕ್ಷ ಮಾಡುವದಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕೆಂದು ಎಲ್ಲರಿಗೂ ಆಜ್ಞಾಪಿಸಲಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 17:30, 31). ಒಬ್ಬ ಪಾಪಿಯು ಈ ಜೀವನದಲ್ಲಿ ಗಂಭೀರವಾದ ಪರಿಣಾಮಗಳಿಂದ ತಪ್ಪಿಸಿಕೊಳ್ಳಬಹುದು, ಆದರೆ ದೇವರು ಮರಣವು ಬರುವದಕ್ಕೆ ಮುಂಚೆಯೇ ಎಲ್ಲಕ್ಕೂ ಪ್ರತಿಫಲವನ್ನು ಕೊಡುವದಿಲ್ಲ.

ಅತಿಥಿಸತ್ಕಾರದ ಕುರಿತ ಚರ್ಚೆಯನಳಿಕ ಈ ಬುದ್ಧಿವಾದವನ್ನು ಹೇಳಿದ್ದು ಸೂಕ್ತವಾಗಿತ್ತು ಯಾಕೆಂದರೆ ಆ ಕಾಲದಲ್ಲಿ ವಸತಿಗೃಹಗಳಲ್ಲಿ ಅನೈತಿಕೆಯು ನಡೆಯುತ್ತಿತ್ತು. ಒಂದು "ಹಾಸಿಗೆಯು ನಿಷ್ಕಳಂಕವಾಗಿರಬೇಕು" ಎಂಬುದು, ವಿವಾಹವು ಇರತಕ್ಕ ರೀತಿಯಲ್ಲಿ, ನಿರ್ಮಲ ಮತ್ತು ಪರಿಶುದ್ಧವಾದದ್ದಾಗಿತ್ತು. ಒಬ್ಬನು ನಾಸ್ತಿಕನ್ನು ವಿವಾಹವಾಗಿದ್ದಾಗ್ಯೂ (1 ಕೊರಿಂಥ 7:13, 14) ದಾಂಪತ್ಯವು ದೇವರಿಂದ ಪರಿಶುದ್ಧವೆಂದೆಣಿಸಲ್ಪಟ್ಟಿದೆ.

**ವಚನ 5.** ಇದು ವರೆಗೂ, ನಾವು ನಿಜವಾದ ಕ್ರೈಸ್ತೀಯ ಜೀವಿತದ ನಾಲ್ಕು ಸೂಚನೆಗಳನ್ನು ಕುರಿತು ನೋಡಿದೆವು. ಐದನೆಯ ಸೂಚನೆಯೊಂದು 5 ಮತ್ತು 6 ವಚನಗಳಲ್ಲಿ ಕೊಡಲ್ಪಟ್ಟಿರುತ್ತದೆ, ಅದು ದುರಾಶೆ (ದ್ರವ್ಯಾಶೆ) ಬದಲಾಗಿ ಸಂತೃಪ್ತಿಯಿಂದಿರುವ ಗುಣಸ್ವಭಾವ ಅದಾಗಿರುತ್ತದೆ. ಎಲ್ಲಾ ಕಾಲಗಳಲ್ಲಿನ ಮತ್ತು ಎಲ್ಲಾ ಸ್ಥಳಗಳಲ್ಲಿರುವ ಜನರಿಂದ ಮಾಡಲ್ಪಡುವ ಎರಡು ಪಾಪಗಳೆಂದರೆ ಅಸಮರ್ಪಕವಾದ ಲೈಂಗಿಕ ಇಚ್ಛೆಗಳು (ವ. 4) ಮತ್ತು ಹಣಕ್ಕಾಗಿ ಒಂದು ಆಶೆ (ವ. 5).

ಭೌತಿಕ ಐಶ್ವರ್ಯ ಮತ್ತು ಲೈಂಗಿಕ ಸುಖ ಇವುಗಳು ಲೋಕದ ಅನೇಕ ಜನರ ಕಾರ್ಯಸೂಚಿಗಳಲ್ಲಿ ಅಗ್ರಗಣ್ಯವಾಗಿರುತ್ತವೆ. ಇವೆರಡು ಇಲ್ಲಿ ಜೊತೆಗೆ ಸೇರಿಸಲ್ಪಟ್ಟಿರುವದು ಸೂಕ್ತವಾಗಿಯೇ ಇರುತ್ತದೆ, ಯಾಕೆಂದರೆ ಭೌತಿಕವಾದ ಹಾಗೂ ಅನೈತಿಕತೆಗಳು ಸಂತೃಪ್ತಿಯಿಲ್ಲದಿರುವಿಕೆಯ ಪಾಪಗಳಾಗಿವೆ.

ಈ ವಚನವು **ದ್ರವ್ಯಾಶೆಯಿಲ್ಲದವರಾಗಿರಿ** ಎಂಬ ಬುದ್ಧಿವಾದದೊಂದಿಗೆ ಆರಂಭಗೊಳ್ಳುತ್ತದೆ. "ದ್ರವ್ಯಾಶೆ [ಹಣದಾಶೆ]" ಎಂಬುದಕ್ಕಿರುವ ಪದವು ἀφιλάργυρος (*aphilarguros*) ಎಂದಾಗಿದ್ದು, ಅದು ಹೊಸ ಒಡಂಬಡಿಕೆಯೊಳಗೆ ಬೇರೆ ಕಡೆ ಕೇವಲ 1 ತಿಮೊಥೆ 3:3ರಲ್ಲಿ ಮಾತ್ರವೇ ಬಳಸಲ್ಪಟ್ಟಿರುತ್ತದೆ. ಪೌಲನು "ದುರಾಶೆ" ಕುರಿತು ಮಾತಾಡುವಾಗ, ಆತನು ಅನೈತಿಕ ಲೈಂಗಿಕ ಇಚ್ಛೆಯನ್ನಾಗಲಿ ಅಥವಾ ಹಣದಾಶೆಯನ್ನಾಗಲಿ ಅದರಲ್ಲಿ ಸೇರಿಸಬಲ್ಲವನಾಗಿದ್ದನು.[11] ಇಲ್ಲಿ ಲೇಖಕನು ಮಾಡಿದ ಪ್ರಕಾರವೇ, ಆತನು ಎಫೆಸ 5:3ರಲ್ಲಿ ಲೈಂಗಿಕ ಪಾಪದಿಂದ ಗಮನವನ್ನು "ದ್ರವ್ಯಾಶೆ" ಕಡೆಗೆ ತಿರುಗಿಸುತ್ತಾನೆ. ಐಶ್ವರ್ಯ ಮತ್ತು ಸಂತೃಪ್ತಿಯ ಕುರಿತಾದ ಬೋಧನೆಯು 1 ತಿಮೊಥೆ 6:6-10ರೊಂದಿಗೆ ಸಂಪೂರ್ಣ ಸಾಮರಸ್ಯದಲ್ಲಿರುತ್ತದೆ.

ಸಾಲ ಮತ್ತು ಜೂಜಾಟಗಳು ಒಬ್ಬನು ಜೀವನದಲ್ಲಿ ಹೊಂದಿರುವದರೊಂದಿಗೆ ಅತೃಪ್ತಿಗೊಳ್ಳುವಂತೆ ಮಾಡುತ್ತದೆ. ಎರಡೂ ಕೇವಲ ಬಡತನವನ್ನು ಇನ್ನಷ್ಟು ಆಳಕ್ಕೆ ಕೊಂಡೊಯ್ಯುತ್ತವೆ. ಹಣವನ್ನು ಹೊಂದುವದನ್ನೇ ತನ್ನ ಜೀವಿತದ ಗುರಿಯನ್ನಾಗಿ ಮಾಡಿಕೊಂಡಿರುವದಾದರೆ ಅದು ಒಬ್ಬನ "ದ್ರವ್ಯಾಶೆಗೆ" ಪುರಾವೆಯಾಗಿರುತ್ತದೆ.

"ದ್ರವ್ಯಶೆಯಿಲ್ಲದವರಾಗಿರುವದು" ಮಾತ್ರವೇ ಸಂತೃಪ್ತಿಯನ್ನು ಸಾಧಿಸಿಕೊಳ್ಳುವದಕ್ಕೆ ಏಕೈಕ ದಾರಿಯಾಗಿರುತ್ತದೆ. ಹಣಕ್ಕಾಗಿ ಆಶೆ ಅಥವಾ ದುರಾಶೆಯು ಅನೇಕ ಸಾರಿ ಖಂಡನೆ ಮಾಡಲ್ಪಟ್ಟಿರುತ್ತದೆ.[12] ಯೇಸುವು ದೇವರನ್ನೂ ಹಣವನ್ನೂ ಸೇವಿಸುವದರ ಅಸಾಧ್ಯತೆಯ ಕುರಿತು ಎಚ್ಚರಿಸಿದನು (ಮತ್ತಾಯ 6:24). ಆತನು ಬಳಸಿದ ಪದವು μαμωνᾶς (*mamōnas*) ಎಂದಾಗಿದ್ದು, ಅದೊಂದು ಖಚಿತವಿಲ್ಲದ ಮೂಲಪದದಿಂದ ಬಂದದ್ದಾಗಿದೆ. ಈ ಪದದ ಅರಾಮಿಕ್ ಭಾಷೆಯ ರೂಪವು "ಹಣ," "ಐಶ್ವರ್ಯ," "ಸ್ವತ್ತು," "ಪ್ರಾಪಂಚಿಕ ವಸ್ತುಗಳು," ಅಥವಾ "ಲಾಭ" ಎಂಬುದನ್ನು ಸೂಚಿಸುತ್ತದೆ. ಖಂಡಿತವಾಗಿಯೂ, ಐಶ್ವರ್ಯದ ಮೇಲಿನ ಪ್ರೀತಿಯು ಪಾಪದ ಇಡೀ ಪಟ್ಟಿಯನ್ನು ಮಾಡುವಂತೆ ಕಾರಣವಾಗುತ್ತದೆ (1 ತಿಮೊಥೆ 6:10). ಭೌತಿಕತ್ವವು ಚಿಂತೆಯನ್ನು ಉಂಟು ಮಾಡುತ್ತದೆ (ನೋಡಿರಿ ಮತ್ತಾಯ 6:26-33), ಮತ್ತು ಚಿಂತೆಯು

ಸಂತೃಪ್ತಿಗೆ ವಿರುದ್ಧವಾದದ್ದು. ಹಾಗಾದರೆ, ಯೇಸು ಚಿಂತೆಯ ವಿರುದ್ಧ ಉಪದೇಶಿಸುವದಕ್ಕೆ ಮುಂಚೆ "ಮಮ್ಮೋನ" (ಧನ) ನನ್ನು ಸೇವಿಸಬಾರದು (KJV) ಎಂದು ಬುದ್ಧಿವಾದ ಇರುವದು ಸ್ವಾಭಾವಿಕವಾದದ್ದು.

ಅಲ್ಲದೆ ಯೇಸು ಹೀಗೆ ಸಹ ಎಚ್ಚರಿಸಿದನು, "ಎಲ್ಲಾ ಲೋಭಕ್ಕೂ ಎಚ್ಚರಿಕೆಯಾಗಿದ್ದು ನಿಮ್ಮನ್ನು ಕಾಪಾಡಿಕೊಳ್ಳಿರಿ. ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ ಅದು ಅವನಿಗೆ ಜೀವಧಾರವಾಗುವದಿಲ್ಲ" (ಲೂಕ 12:15). ನಾವು ಒಬ್ಬ ವ್ಯಕ್ತಿಯು ಎಷ್ಟು "ಬೆಲೆಯುಳ್ಳವನು" ಎಂದು ಕೇಳುವಾಗ, ಅಂದರೆ "ಆತನಿಗೆ ಎಷ್ಟು ಸ್ವತ್ತು ಇರುತ್ತದೆ?" ಎಂದು ಕೇಳುವಾಗ ಇದನ್ನು ಮರೆತು ಬಿಡುತ್ತೇವೆ.[13] ಲೋಭವು ಒಬ್ಬ ವ್ಯಕ್ತಿಯನ್ನು ಎಂದಿಗೂ ಸಂತೋಷಗೊಳಿಸಲಾರದು; ಅದು ಸಂತೃಪ್ತಿಗೆ ವಿರುದ್ಧವಾದದ್ದನ್ನು ಸೃಷ್ಟಿಸುತ್ತದೆ. ತಮ್ಮ ಪ್ರಾಥಮಿಕ ಗುರಿಯಾಗಿ ಮಮ್ಮೋನಗಾಗಿ (ಧನಕ್ಕಾಗಿ) ಪ್ರಯಾಸ ಪಡುವವರು "ಸಂಹಾರನಾಶನಗಳಲ್ಲಿ ಮುಳುಗುತ್ತಾರೆ" ಎಂದು ಪೌಲನು ಹೇಳಿದನು (1 ತಿಮೊಥೆ 6:9). ಈ ಚಿತ್ರಣವು ಕೆಸರಿನಲ್ಲಿ ಮುಳುಗುತ್ತಿರುವ ಜೌಗಿನಲ್ಲಿ ಸಿಕ್ಕಿಕೊಂಡಿರುವ ಮನುಷ್ಯನೊಬ್ಬನದ್ದಾಗಿದೆ.

ಹಣದಾಶೆಯನ್ನು ಜಯಿಸಿಕೊಳ್ಳುವದನ್ನು ಕರ್ತನು ಎಷ್ಟು ಹತ್ತಿರವಾಗಿದ್ದಾನೆಂಬುದನ್ನು ಗ್ರಹಿಸಿಕೊಳ್ಳುವದರಿಂದ ಮತ್ತು [ನಮಗೆ] **ಇರುವವುಗಳಲ್ಲಿ ತೃಪ್ತರಾಗಿ** ಇರುವ ಮೂಲಕ ಸಾಧಿಸಬಹುದು. ಕರ್ತನು ನಮಗೋಸ್ಕರ ಚಿಂತಿಸುತ್ತಾನೆಂಬುದನ್ನು ನಾವು ನಂಬುವಾಗ ನಮ್ಮ ಆರ್ಥಿಕ ಸಹಾಯದ ಕುರಿತು ಕಳವಳದಿಂದ ಏಕೆ ಇರುವೆವು?

"ತೃಪ್ತರಾಗಿರುವದು" (ἀρκέω, *arkeō*) ಎಂದರೆ "ಕುಂದಿ ಹೋಗದ ಬಲವನ್ನು" ಹೊಂದಿರುವದು, ಅಥವಾ ಒಬ್ಬನು "ತೃಪ್ತನಾಗಿರುವ" ಸಾಕಷ್ಟು ಪೋಷಣೆಯನ್ನು ಹೊಂದಿರುವದು ಎಂದರ್ಥವಾಗಿದೆ.[14] ಈ ನಾಮಪದದ ಸಜಾತೀಯ ಕ್ರಿಯಾಪದವನ್ನು ಪೌಲನು ಫಿಲಿಪ್ಪಿ 4:11ರಲ್ಲಿ ಬಳಸುತ್ತಾನೆ, ಅಲ್ಲಿ "ನಾನಂತೂ" ಎಂಬ ಪೂರ್ವ ಪ್ರತ್ಯೆಯವು ಅದನ್ನು "ತನ್ನಲ್ಲಿ ಸಂತೃಪ್ತಿ" ಎಂಬ ಅರ್ಥವನ್ನು ಬರುವಂತೆ ಮಾಡುತ್ತದೆ. ಮನುಷ್ಯನು ತನ್ನಲ್ಲಿಯೇ ಸಂತೃಪ್ತನಾಗಿರಬೇಕೆಂದು ಸ್ತೋಯಿಕರು ಭಾವಿಸಿದ್ದರು, ಆದರೆ ಸಂತೃಪ್ತಿಯು ಕ್ರಿಸ್ತನಲ್ಲಿ ಮಾತ್ರವೇ ಸಿಕ್ಕಬಲ್ಲದು ಎಂಬುದು ಪೌಲನ ಯೋಚನೆಯಾಗಿತ್ತು. ಆತನು ಕೇವಲ ತನ್ನ ಸಂಕಲ್ಪಶಕ್ತಿಯ ಮೇಲೆ ಅಲ್ಲ, ಆದರೆ ಕ್ರಿಸ್ತನ ಮೇಲೆ ಅವಲಂಭಿತನಾಗಿದ್ದರಿಂದ ಈ ಗುಣವನ್ನು ಹೊಂದಿದ್ದನು. "ಸಂತೃಪ್ತರಾಗಿರುವದು" ಎಂದರೆ ಕೇವಲ ತೃಪ್ತರಾಗಿರುವದು ಎಂಬುದಕ್ಕಿಂತಲೂ ಅಧಿಕವಾಗಿರುತ್ತದೆ, ಯಾಕೆಂದರೆ ಅದರಲ್ಲಿ ದೇವರ ಮೇಲೆ ಅವಲಂಭಿತರಾಗಿರುವದು ಸೇರಿರುತ್ತದೆ, ಆತನು ನಮಗೆ ಅಗತ್ಯವಿರುವದನ್ನೆಲ್ಲಾ ಒದಗಿಸುತ್ತಾನೆ. ಲೋಭ ಮತ್ತು ಚಿಂತೆಯನ್ನು ಜಯಿಸುವದಕ್ಕೆ ಮತ್ತಾಯ 6:33ನೇ ವಚನವು ಒಂದು ದಾರಿಯನ್ನು ಸೂಚಿಸುತ್ತದೆ: "ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ."

ಭಕ್ತಿಯುಳ್ಳ ಸಂತೃಪ್ತಿಯು ದೇವರು ಸ್ವತಃ ಹೇಳಿರುವಂತದ್ದರಿಂದ ಉಂಟು ಮಾಡಲ್ಪಡುತ್ತದೆ. ಆತನು ನಮ್ಮನ್ನು ಎಂದಿಗೂ ಕೈ ಬಿಡುವದಿಲ್ಲ ಎಂಬುದನ್ನು ಇಮ್ಮಡಿ ನಕಾರಾತ್ಮಕದಲ್ಲಿ[15] ಹೇಳಿದನು: **ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲ."**[16] ಈ ಸುಂದರವಾದ ಹೇಳಿಕೆಯನ್ನು ಅಕ್ಷರಶಃ "ನಾನು ಎಂದಿಗೂ, ಇಲ್ಲವೇ ಇಲ್ಲ, ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ನಿನ್ನನ್ನು ತೊರೆಯುವದ್ಯೆ ಇಲ್ಲ"[17] ಎಂದು ಅನುವಾದಿಸಬಹುದಾಗಿದೆ. Kenneth Wuestನು ಈ ಭಾವಾನುವಾದ ಮಾಡಿದನು: "ನಾನು ಎಂದೆಂದಿಗೂ ನಿನ್ನನ್ನು ನಿರಾಶೆಗೊಳಿಸುವದೇ ಇಲ್ಲ, ಎಂದಿಗೂ ಇಲ್ಲವೇ ಇಲ್ಲ, ನಿನ್ನನ್ನು ನಡುನೀರಿನಲ್ಲಿ ಕೈಬಿಡುವದಿಲ್ಲ, ನಿನ್ನನ್ನು ಬೀದಿಯಲ್ಲಿ ಬಿಡುವದಿಲ್ಲ, ನಿನ್ನನ್ನು ಇಕ್ಕಟ್ಟಿನಲ್ಲಿ ಮತ್ತು

ಅಸಹಾಯಕತೆಯಲ್ಲಿ ಬಿಡುವದಿಲ್ಲ, ನಿನ್ನನ್ನು ತೊರೆಯುವದಿಲ್ಲ."[18] ಈ ವಚನವು ತನ್ನ ಮಕ್ಕಳ ಕಡೆಗೆ ದೇವರಿಗಿರುವ ಸಕ್ರಿಯವಾದ ಪ್ರೀತಿಗೆ ಬಹಳಷ್ಟು ನಿಶ್ಚಯತ್ವಗಳನ್ನು ನೀಡುತ್ತದೆ. ನಮ್ಮ ಪರಲೋಕದ ತಂದೆಯು ನಮ್ಮನ್ನು ಕೈಬಿಡುವದಿಲ್ಲ, ಆದಾಗ್ಯೂ ಕೆಲವು ಸಾರಿ ಆತನನ್ನು ತೊರೆದು ಬಿಡುತ್ತೇವೆ.[19]

**ವಚನ 6.** ಈ ಕಾರಣದಿಂದಲೇ ನಾವು ಭರವಸೆಯೊಂದಿಗೆ ಮಾತಾಡಬಹುದು: **ಆದದರಿಂದ ಕರ್ತನು ನನ್ನ ಸಹಾಯಕನು, ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು? ಎಂದು ನಾವು ಧೈರ್ಯವಾಗಿ ಹೇಳಬಲ್ಲೆವು**. ಇದು ಯೆಹೋಶುವ 1:5, ಧರ್ಮೋಪದೇಶಕಾಂಡ 31:6, ಮತ್ತು ಕೀರ್ತನೆ 118:6ರಿಂದ ತೆಗೆದುಕೊಳ್ಳಲ್ಪಟ್ಟಿದೆ,[20] ಅದು ಮೆಸ್ಸೀಯನಿಗೆ ಸಂಬಂಧಿಸಿದ ಒಂದು ಕೀರ್ತನೆಯಾಗಿದೆ (ಅಲ್ಲದೆ 1 ಪೂರ್ವಕಾಲವೃತ್ತಾಂತ 28:20 ಸಹ ನೋಡಿರಿ). ಇದು ಮತ್ತಾಯ 21:42ರಲ್ಲಿ ಯೇಸುವಿನಿಂದ ಮತ್ತು ಅಪೊಸ್ತಲರ ಕೃತ್ಯಗಳು 4:10, 11ರಲ್ಲಿ ಪೇತ್ರನಿಂದ ಉಲ್ಲೇಖಿಸಲ್ಪಟ್ಟಿರುತ್ತದೆ. ಇದರರ್ಥವು ಕ್ರಿಸ್ತನು ಸ್ವತಃ ಈ ಮಾತುಗಳನ್ನು ಹೇಳಿದನು; ಆತನ ಆತ್ಮವು ಪ್ರವಾದಿಗಳಲ್ಲಿತ್ತು (1 ಪೇತ್ರ 1:10, 11). ಹಳೆಯ ಒಡಂಬಡಿಕೆಯು ಕ್ರೈಸ್ತೀಯ ಪರಿಶುದ್ಧತೆ ಮತ್ತು ಜೀವಿಸುವಿಕೆಯ ಸಾರಭೂತವಾಗಿರುವ ಅಂಶಗಳನ್ನು ಬೆಂಬಲಿಸುವದಕ್ಕೆ ಹೊಸ ಒಡಂಬಡಿಕೆಯಲ್ಲಿ ಸತತವಾಗಿ ಉಲ್ಲೇಖಿಸಲ್ಪಟ್ಟಿದೆ – ಕೇವಲ ಇಬ್ರಿಯರಿಗೆ ಪತ್ರಿಕೆಯಲ್ಲಿ ಮಾತ್ರವಲ್ಲ, ಆದರೆ ಪತ್ರಿಕೆಗಳಲ್ಲೆಲ್ಲಾ ಉಲ್ಲೇಖಿಸಲ್ಪಟ್ಟಿದೆ. ನಾವು ಅದರ ತತ್ವಗಳನ್ನು ಅಮುಖ್ಯವೆಂದು ಎಣಿಸಬಾರದು. ದೇವರ ಮೇಲೆ ನಾವು ಭರವಸವಿಡುವದಾದರೆ ಮತ್ತು ಅವಲಂಭಿತರಾಗುವದಾದರೆ ಮಾತ್ರವೇ ಹಣದಾಶೆಯನ್ನು ಜಯಿಸಬಲ್ಲೆವು ಮತ್ತು ಅದರ ಮೂಲಕ ಸಂತೃಪ್ತರಾಗಿರುವದಕ್ಕೆ ಕಲಿತುಕೊಳ್ಳಬಲ್ಲೆವು. ದೇವಜನರು ತಮ್ಮ ಜೀವಿತದ ಸ್ಥಿತಿಗಳನ್ನು ಉತ್ತಮಪಡಿಸಿಕೊಳ್ಳುವದಕ್ಕೆ ಅಥವಾ ಬೇರೆಯವರಿಗೆ ಅವರ ಜೀವಿತದ ಸ್ಥಿತಿ ಉತ್ತಮಗೊಳಿಸಿಕೊಳ್ಳುವಂತೆ ಸಹಾಯ ನೀಡಲು ಯಾವ ಪ್ರಯತ್ನಗಳನ್ನೂ ಮಾಡಬಾರದೆಂದು ಇದರರ್ಥವಾಗಿರುವದಿಲ್ಲ. ಹೇಗೂ, ನಾವು ಹೆಚ್ಚು ಒಳ್ಳೇದನ್ನು (ಉಪಕಾರವನ್ನು) ಮಾಡಬೇಕಾದರೆ ಹೆಚ್ಚಾಗಿ ಹೊಂದಿರುವದಕ್ಕೆ ಪ್ರಯಾಸ ಪಡಬೇಕು (ಎಫೆಸ 4:28), ಹೊರತು ಕೇವಲ ಅದನ್ನು ಗಂಟು ಮಾಡಿಟ್ಟುಕೊಳ್ಳಬಾರದು. ಪ್ರತಿಯೊಬ್ಬ ವ್ಯಕ್ತಿಯು ಹಣ ಮತ್ತು ಸ್ವತ್ತುಗಳ ಕಡೆಗೆ ತನ್ನ ಮನೋಭಾವವು ಏನಾಗಿರುತ್ತದೆಂಬುದನ್ನು ದೇವರ ಮಾನದಂಡದೊಂದಗೆ ಹೋಲಿಸಿಕೊಂಡು ಸ್ವತಃ ತೀರ್ಪು ಮಾಡಿಕೊಳ್ಳಬೇಕು. ಭೌತಿಕ ವಸ್ತುಗಳಿಗಾಗಿ ಹಪಹಪಿಸುವಿಕೆಯು ಅನೇಕ ಸಾರಿ ನಿರಾಶ್ರಿತರಾಗುವ ಭಯದಲ್ಲಿ ಫಲಿತಗೊಳ್ಳುತ್ತದೆ, ಅದು ದೇವರಲ್ಲಿ ವಿಶ್ವಾಸದ ಕೊರತೆಯನ್ನು ಸೂಚಿಸುತ್ತದೆ.[21]

6ನೇ ವಚನದಲ್ಲಿ ದೇವರನ್ನು ನಮ್ಮ "ಸಹಾಯಕನು" (βοηθός, *boēthos*) ಎಂದು ಕರೆಯಲಾಗಿರುತ್ತದೆ; ಆದರೆ 2:18ರಲ್ಲಿ ಯೇಸು ನಮ್ಮ ಮಹಾಯಾಜಕನಾಗಿರುವವನಾಗಿ, ನಮ್ಮ "ಸಹಾಯಕನು" ಎಂಬುದನ್ನು ಸಹ ಕಾಣುತ್ತೇವೆ. LXXನಲ್ಲಿ "ಕರ್ತನು" ಎಂಬುದು ಉಲ್ಲೇಖಿಸಲ್ಪಟ್ಟಿರುವ ಕೀರ್ತನೆಯೊಳಗೆ ತಂದೆಯಾದ ದೇವರ ಹೆಸರಾಗಿರುತ್ತದೆ (118:6, 7), ಆದರೆ ಇಬ್ರಿಯರಿಗೆ ಪತ್ರಿಕೆಯಲ್ಲಿ *kurios* ಎಂಬ ಪದವು ಬಳಸಲ್ಪಟ್ಟಿದೆ. ಆ ಪದವು ಸಾಮಾನ್ಯವಾಗಿ ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನನ್ನು ಸೂಚಿಸುವದಾಗಿದೆ. ಇಬ್ರಿಯ ಭಾಷೆಯ ಹಳೆಯ ಒಡಂಬಡಿಕೆಯನ್ನು ಓದುವಾಗ, ಯೆಹೂದ್ಯರು יהוה (*YHWH*, "ಯೆಹೋವ") ಎಂಬುದಕ್ಕೆ ಬದಲಾಗಿ אֲדֹנָי (*ᵃdonay*, "ಕರ್ತನು") ಎಂಬ ಪದವನ್ನು ಬಳಸುವವರಾದರು. Masoretesರು (ಹಿಬ್ರು ಟೀಕೆ ಟಿಪ್ಪಣಿ ಬರೆಯುವವರು) ಅನಂತರದಲ್ಲಿ *ᵃdonay* ಎಂಬುದಕ್ಕೆ "ಯೆಹೋವ" ಎಂಬ ಹೆಸರಿನೊಳಗೆ ಸ್ವರಾಕ್ಷರ ಗುರುತುಗಳನ್ನು ಸೇರ್ಪಡೆಗೊಳಿಸಿ ಎಂದಿಗೂ

ದೇವರ ಹೆಸರನ್ನು ಉಲ್ಲಂಘಿಸಬಾರದು ಮತ್ತು ಆ ಮೂಲಕ ಅದನ್ನು ವ್ಯರ್ಥವಾಗಿ ಉಚ್ಚರಿಸದಿರಬೇಕೆಂಬ ಉದ್ದೇಶವಾಗಿತ್ತು. ಅವರು ಸಾರ್ವಜನಿಕವಾಗಿ ಸ್ವತಃ ದೇವರ ಹೆಸರನ್ನೆ ಮಾತಾಡುವ ಧೈರ್ಯ ಮಾಡುತ್ತಿರಲಿಲ್ಲ, ಆದರೆ ಅದರ ಸ್ಥಾನದಲ್ಲಿ "ಕರ್ತನು" ಎಂಬುದನ್ನು ಬಳಸಿದರು. ದೈವಿಕ ಹೆಸರಿಗಾಗಿ ಅವರು ಅಂಥ ಗೌರವವನ್ನು ಕೊಡುತ್ತಿದ್ದರು.

ಅಂಥ ಸಹಾಯಕನು ಇರುವಾಗ, ಮನುಷ್ಯನು ನಮಗೇನು ಮಾಡಾನು? ಸತ್ಯವೇನೆಂದರೆ, ಮನುಷ್ಯನು ನಮಗೆ ಅನೇಕ ಕಾರ್ಯಗಳನ್ನು ಮಾಡಬಲ್ಲನು. ನಾವು ಚುಚ್ಚುಮಾತು, ನಿಂದನೆ, ಕುಚೋದ್ಯ, ಹಗೆನುಡಿಗಳಿಗೆ, ಅಥವಾ ದೈಹಿಕವಾಗಿ ಹೊಡೆತಗಳಿಗೆ ತುತ್ತಾಗಿರಬಹುದು; ಗತಕಾಲದಲ್ಲಿ ಕೆಲವರು ರಕ್ತಸಾಕ್ಷಿಗಳಾಗಿ ಮರಣಿಸಿರುವಂತೆಯೇ ನಾವು ಮರಣಿಸಬಹುದು. ಹೇಗೂ, ಈ ಯಾವ ಶೋಷಣೆಗಳೂ ದೇವರು ಅಂತಿಮವಾಗಿ ಒಳ್ಳೇದನ್ನು ಮಾಡುತ್ತಾನೆ ಅಥವಾ ತನ್ನ ಜನರನ್ನು ಮಹಿಮೆಗೆ ಕರೆ ತರುತ್ತಾನೆಂಬುದರಲ್ಲಿ ಕ್ರೈಸ್ತನು ಇಟ್ಟಿರುವ ನಂಬಿಕೆಯನ್ನು ಹಾಳು ಮಾಡುವದಕ್ಕೆ ಸಾಧ್ಯವಿಲ್ಲ (2:10). "ಇಲ್ಲಿ ಸೂಚ್ಯಾರ್ಥವೇನೆಂದರೆ ದೇವರ ಬೇರೆಯವರ ಕೈಗಳಲ್ಲಿ ಬಾಧೆಯನ್ನನುಭವಿಸುವದರಿಂದ ತನ್ನ ಜನರಿಗೆ ವಿನಾಯಿತಿ ಕೊಡುವದಿಲ್ಲ, ಆದರೆ ಬಾಧೆಯ ಮೂಲಕವಾಗಿ ಅವರನ್ನು ನಿತ್ಯವಾದ ಜೀವಕ್ಕೆ ಕರೆ ತರುತ್ತಾನೆ (2:10; 5:7-10)."[22]

ನಾವು ಕೈಬಿಡಲ್ಪಟ್ಟಿದ್ದೇವೆಂದು ಭಾವಿಸಿಕೊಳ್ಳಬಹುದಾದರೂ, ನಾವು ಎಂದಿಗೂ ಕೈಬಿಡಲ್ಪಟ್ಟವರಲ್ಲ. ನಮ್ಮ ದೇವರು ಯಾವಾಗಲೂ ನಮ್ಮನ್ನು ಕಾಯುತ್ತಿರುತ್ತಾನೆ, ಆದಾಗ್ಯೂ ಆತನು ನಮ್ಮನ್ನು ದೈಹಿಕ ಹಾನಿಯಿಂದ ರಕ್ಷಿಸುವನೆಂದು ವಾಗ್ದಾನ ಮಾಡಿರುವದಿಲ್ಲ. ಯೇಸು ಅಂಥ ವಾಗ್ದಾನವನ್ನು ಹೊಂದಿದ್ದು ನಿಜ (ಮತ್ತಾಯ 4:6; ನೋಡಿರಿ ಕೀರ್ತನೆ 91:11, 12), ಆದರೆ ಆಗಲೂ ಆತನಿಗೆ ಶಿಲುಬೆಯ ಮೇಲೆ ಮರಣಿಸಬೇಕಾದ ಸಮಯವು ಬಂದಿತು. ಕರ್ತನು ನಮ್ಮನ್ನು ಆತ್ಮೀಕ ಹಾನಿಯಿಂದ ರಕ್ಷಿಸುತ್ತೇನೆಂದು ವಾಗ್ದಾನ ಮಾಡಿದನು. ನಾವು ನಮ್ಮ ವಿಧೇಯತೆಯುಳ್ಳ ನಂಬಿಕೆಯನ್ನು ಕಾಯ್ದುಕೊಳ್ಳುವ ತನಕ, ಯಾವದೂ ನಮ್ಮನ್ನೂ ದೇವರ ಪ್ರೀತಿಯೊಳಗಿಂದ ತೆಗೆದು ಹಾಕಲಾರದು (ರೋಮಾ 8:35-39).

ಕ್ರಿಸ್ತನಿಗೆ ಪರಿವರ್ತನೆಗೊಂಡಿದ್ದ ಕೆಲವು ಯೆಹೂದ್ಯರು ನಂಬಿಕೆಯಲ್ಲಿ ದುರ್ಬಲರಾಗಿದ್ದರು ಮತ್ತು ಕರ್ತನನ್ನು ತೊರೆದು ಬಿಡಬೇಕೆಂಬ ಒತ್ತಡವನ್ನು ಅನುಭವಿಸಿದರು. ಅವರು ಶೋಧನೆಗೆ ಒಳಗಾಗಿ ಸೋತು ಹೋಗುವ ತುದಿಯಂಚಿನಲ್ಲಿದ್ದವರಾಗಿದ್ದಲ್ಲಿ ಮತ್ತು ಭರವಸದ ಅಗತ್ಯತೆಯಲ್ಲಿದ್ದವರಾಗಿದ್ದರೆ, ನಮಗೂ ಅದು ಅಗತ್ಯವಿರುತ್ತದೆ. ಅವರಂತೆಯೇ, ನಾವು ಸಹ ಕೀರ್ತನೆಗಾರನಿಂದ ತೋರ್ಪಡಿಸಲ್ಪಟ್ಟಿರುವ ವಿಧವಾದ ನಂಬಿಕೆಯನ್ನು ಹೊಂದಿಕೊಳ್ಳಲು ಪ್ರಯಾಸ ಪಡಬೇಕು.

## ಗತಕಾಲದ ನಾಯಕರನ್ನು ಮತ್ತು ನಮ್ಮ ಮಹಾಯಾಜಕನನ್ನು ಜ್ಞಾಪಕ ಮಾಡಿಕೊಳ್ಳಿರಿ (13:7-16)

**13:7**

**[7]ನಿಮಗೆ ದೇವರ ವಾಕ್ಯವನ್ನು ತಿಳಿಸಿದ ನಿಮ್ಮ ಸಭಾನಾಯಕರನ್ನು ಜ್ಞಾಪಕಮಾಡಿಕೊಳ್ಳಿರಿ; ಅವರು ಯಾವ ರೀತಿಯಿಂದ ನಡೆದುಕೊಂಡು ಪ್ರಾಣಬಿಟ್ಟರೆಂಬದನ್ನು ಆಲೋಚಿಸಿರಿ; ಅವರ ನಂಬಿಕೆಯನ್ನು ಅನುಸರಿಸಿರಿ.**

**ವಚನ 7.** ಕ್ರೈಸ್ತನು ಹೊಂದಿರಬೇಕಾದ ಆರನೆಯ ಮತ್ತು ಅಂತಿಮ ಗುಣಸ್ವಭಾವವು ಕೊಡಲ್ಪಟ್ಟಿದೆ. ಲೇಖಕನು ವಾಚಕರ ಮುಂದೆ ಮೂರು ಕಟ್ಟಪ್ಪಣೆಗಳನ್ನು ಇಡುತ್ತಾ ಸಭೆಯಲ್ಲಿನ ತಮ್ಮ ನಾಯಕರನ್ನು ಅವರು ಸನ್ಮಾನಿಸಬೇಕು ಮತ್ತು ಅನುಸರಿಸಬೇಕು ಎಂದು ಬೇಡಿಕೊಳ್ಳುತ್ತಾನೆ.

ಇಲ್ಲಿ ಸೂಚಿಸಲ್ಪಟ್ಟಿರುವ ವಾಚಕರು ಲೋಭವುಳ್ಳ ಅತೃಪ್ತರಾಗಿರಲಿಲ್ಲ. ಅವರ ಜೀವಿತಗಳು ಇಬ್ರಿಯರಿಗೆ ನಂಬಿಗಸ್ತಿಕೆಯ ಒಂದು ಒಳ್ಳೇ ಮಾದರಿಯಾಗಿದ್ದವು. ಅವರು **ಯಾವ ರೀತಿ ನಡೆದುಕೊಂಡು ಪ್ರಾಣಬಿಟ್ಟರು** ಎಂಬುದನ್ನು ಪರಗಣಿಸುವದು ಸೂಚಿಸುವದೇನೆಂದರೆ ಇದು ಬರೆಯಲ್ಪಡುವ ಹೊತ್ತಿಗೆ ಅವರು ಮರಣಿಸಿದ್ದರು ಎಂಬದೆ. ಅವರು ಪರಲೋಕಕ್ಕೆ ಸಾಗಿದ್ದಾರೆಂಬ ಪ್ರಕಟನೆಯೊಂದನ್ನಾದರೂ ಹೊಂದಿಕೊಂಡಿದ್ದರು ಅಥವಾ ಅವರ ನಿತ್ಯವಾದ ಅಂತ್ಯಸ್ಥಿತಿಯು ಅವರ ಜೀವಿತಗಳಿಂದ ಸ್ಪಷ್ಟವಾಗಿತ್ತು. ಬದುಕಿರುವಂಥ ಕ್ರೈಸ್ತರು ಅವರನ್ನು **ಜ್ಞಾಪಕಮಾಡಿಕೊಳ್ಳ**ಬೇಕಿತ್ತು, ಅಥವಾ "ನೆನಪಿಸಿಕೊಳ್ಳುತ್ತಲಿರಬೇಕು" (ಗ್ರೀಕ್ ವಾಕ್ಯದಲ್ಲಿರುವ ಕಾಲರೂಪವು ಅರ್ಥೈಸುವ ಪ್ರಕಾರ) ಎಂಬುದು ಅವರು ಆ ಹಿಂದಿನ ನಾಯಕರ ಗುಣಸ್ವಭಾವಗಳನ್ನು ಆಲೋಚಿಸಬೇಕು ಎಂಬುದನ್ನು ಸೂಚಿಸುತ್ತದೆ. ಅದೇ ಕ್ರಿಯಾಪದವನ್ನು 2 ತಿಮೊಥೆ 2:8ರಲ್ಲಿ ಪೌಲನು ಬಳಸುತ್ತಾನೆ, ಅಲ್ಲಿ ಬುದ್ಧಿವಾದವು "ಯೇಸು ಕ್ರಿಸ್ತನನ್ನು ಜ್ಞಾಪಕಮಾಡಿಕೋ" ಎಂದಾಗಿರುತ್ತದೆ. ನಾವು ನಕಲು ಮಾಡುವ ಗುಣಸ್ವಭಾವವುಳ್ಳ ಸಹೋದರರು ಹಾಗೂ ಸಹೋದರಿಯರ ನೆನಪುಗಳನ್ನು ಸಹ ನಾವು ಹೃದಯದಲ್ಲಿಟ್ಟುಕೊಳ್ಳಬಹುದು.

**ನಡಿಸಿದ** (ἡγέομαι, *hēgeomai*, "ನಡಿಸು" ಅಥವಾ "ಅಧಿಕಾರದಿಂದ ಆಜ್ಞಾಪಿಸು") ಎಂಬ ಪದದ ರೂಪಗಳು ಈ ಅಧ್ಯಾಯದಲ್ಲಿ ಮೂರು ಸಾರಿ ಬಳಸಲ್ಪಟ್ಟಿರುತ್ತವೆ (ನೋಡಿರಿ ವಚನಗಳು 17, 24). ಇದೊಂದು ಸಾಮಾನ್ಯ ಬಳಕೆಯ ಪದವಾಗಿದ್ದು ಯಾವದೇ ಹುದ್ದೆ ಅಥವಾ ಯಾವ ರೀತಿಯ ನಾಯಕರೆಂಬ ಅರ್ಥವೆಂಬುದನ್ನು ಸ್ಪಷ್ಟವಾಗಿ ಹೆಸರಿಸುವದನ್ನು ಅಸಾಧ್ಯಗೊಳಿಸುತ್ತದೆ. ಅದೇ ಮೂಲ ಪದದಿಂದ ಬಂದಿರುವ ಪದಗಳು "ನಾಯಕರು" ಮತ್ತು "ಪ್ರಭುಗಳು" (ಮತ್ತಾಯ 2:6) ಮತ್ತು "ಅಧಿಕಾರಿ" (ಅಪೊಸ್ತಲರ ಕೃತ್ಯಗಳು 7:10) ಎಂದು ಅನುವಾದಿಸಲ್ಪಟ್ಟಿರುತ್ತವೆ. ಆದದರಿಂದ, *hēgeomai* ಎಂಬುದು ಕೇವಲ ಮಾದರಿಯಿಂದ ನಡಿಸುವವನ ಪ್ರಭಾವಕ್ಕಿಂತಲೂ ಬಲವಾದ ಪ್ರಭಾವವೊಂದನ್ನು ಸೂಚಿಸುತ್ತದೆ.

ಅಪೊಸ್ತಲರ ಜೊತೆಯಲ್ಲಿ, 7ನೇ ವಚನವು **ನಿಮಗೆ ದೇವರ ವಾಕ್ಯವನ್ನು ತಿಳಿಸಿದ** ಸುವಾರ್ತಿಕರನ್ನು ಸೂಚಿಸಬಹುದಾಗಿದೆ. ತಿಮೊಥೆಯನಿಗೆ ವಹಿಸಲ್ಪಟ್ಟಿದ್ದ ಕೆಲಸವು ಬೋಧಿಸುವಿಕೆಯಾಗಿತ್ತು, ಮತ್ತು ಆತನ ಕರ್ತವ್ಯವು "ಸುವಾರ್ತಿಕನ ಕೆಲಸ" ಆಗಿತ್ತು (2 ತಿಮೊಥೆ 4:2, 5). ಇದರಲ್ಲಿ ಹಿರಿಯರು ಸಹ ಸೇರಿಸಲ್ಪಡಬಹುದು, ಯಾಕೆಂದರೆ ಕೆಲವರು "ಪ್ರಸಂಗದಲ್ಲಿಯೂ ಉಪದೇಶದಲ್ಲಿಯೂ" ಕಷ್ಟಪಟ್ಟಿದ್ದರು (1 ತಿಮೊಥೆ 5:17). "ವಾಕ್ಯ" ಎಂಬುದು ಇಡೀ ಸುವಾರ್ತೆಯ ಸಂದೇಶವನ್ನು ಒಳಗೊಂಡಿರುತ್ತದೆ.

ಈ ಬುದ್ಧಿವಾದವನ್ನು ಪಡೆದುಕೊಂಡವರು ಗತಕಾಲದಲ್ಲಿ ನೇಮಿಸಲ್ಪಟ್ಟ ಸಭಾನಾಯಕರಿಗೆ ಅಥವಾ ಪ್ರಸ್ತುತಕಾಲದ ನಾಯಕರಿಗೆ ಸರಿಯಾದ ಗೌರವವನ್ನು ತೋರಿಸದೆ ಇದ್ದಿರಬಹುದಾಗಿದೆ. ಅಧಿಕಾರದಲ್ಲಿರುವವರಿಗೆ ಅಗೌರವವನ್ನು ತೋರುವದು ಒಂದು ಗಂಭೀರವಾದ ಪಾಪವಾಗಿದೆ. ಈ ಇಬ್ರಿಯರು ಅವಶ್ಯಕವಾಗಿ ಅವರ ನಾಯಕರ ವಿರುದ್ಧವಾಗಿ ಗುಣಗುಟ್ಟುತ್ತಿರಲಿಲ್ಲ, ಆದರೆ ಅವರು ನಂಬಿಕೆಯಿಂದ ದೂರವಾಗಿ ತಪ್ಪಿ ಹೋಗುತ್ತಲಿದ್ದರು (2:1–4). ಇವೆರಡರಲ್ಲಿ ಯಾವ ವಿಧದಲ್ಲಿದ್ದಾಗ್ಯೂ, ಅವರ ನಡವಳಿಕೆಯು ಅವರನ್ನು ಘೋರವಾದ

ಅಪಾಯಕ್ಕೆ ಗುರಿಪಡಿಸಿತ್ತು. ಅವರಿಗೆ ಈ ಜ್ಞಾಪಕಪಡಿಸುವಿಕೆಯ ಅಗತ್ಯವಿತ್ತು.

17 ಮತ್ತು 24 ವಚನಗಳು ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ವೇಳೆ ಜೀವಂತವಾಗಿದ್ದ ನಾಯಕರನ್ನು ಸೂಚಿಸುತ್ತದೆ. 7ನೇ ವಚನವು ಬಹುಶಃ ಅಪೊಸ್ತರಲರನ್ನು, ಹಿರಿಯರು, ಮತ್ತು ಬಹುಶಃ ಅಪೊಸ್ತಲರ ಕೃತ್ಯಗಳು 8:1-4ರ ಹಿಂಸೆಯನ್ನು ಅನುಭವಿಸುವವರಾಗಿ ಯೆರೂಸಲೇಮಿನಲ್ಲಿಯೇ ಉಳಿದುಕೊಂಡಿದ್ದ ಇತರರನ್ನು ಪ್ರಾಸಂಗಿಕವಾಗಿ ಪ್ರಸ್ತಾಪಿಸುತ್ತದೆ. ಸಭೆಯ ಅನೇಕ ಸದಸ್ಯರು ಓಡಿ ಹೋದಾಗ ಇವರು ಇಲ್ಲಿಯೇ ಉಳಿದರು. ಹೀಗಿರುವದರಿಂದಲೇ ಪೌಲನು ಪರಿವರ್ತನೆಗೊಂಡಾಗ ಮತ್ತು ಪರಿಸ್ಥಿತಿಯು ಶಾಂತವಾಗಿದ್ದ ವೇಳೆ ಹಿಂದಿರುಗಿ ಬರುವದಕ್ಕೆ ಒಂದು ಸಭೆಯು ಇತ್ತು (ಅಪೊಸ್ತಲರ ಕೃತ್ಯಗಳು 9:31). ಹೇಬೆಲನ ರಕ್ತವು ಈಗಲೂ ಮಾತಾಡುವ ಪ್ರಕಾರವೇ, ಅವರ ಜೀವಿತಗಳು ನಂಬಿಗಸ್ತಿಕೆಯ ಸ್ಥಿರತೆಯ ಕುರಿತು ಮಾತಾಡುತ್ತವೆ (ಇಬ್ರಿಯ 11:4).

ವಾಕ್ಯವು ಸ್ಥಿರಪಡಿಸಲ್ಪಟ್ಟಿದ್ದು ಈ ಆದಿ ಸಭೆಯ ನಾಯಕರ ಮೂಲಕವೇ ಆಗಿರುತ್ತದೆ (2:3), ಮತ್ತು ಇವರು ಮರಣದ ತನಕವೂ ನಂಬಿಗಸ್ತರಾಗಿದ್ದರು.[23] ತತ್ಪರಿಣಾಮವಾಗಿ, ನಾಯಕರು ಅವರ ನಂಬಿಗಸ್ತಿಕೆಯ ಸ್ವಭಾವವನ್ನು ಜ್ಞಾಪಕಪಡಿಸಿಕೊಳ್ಳಬೇಕಿತ್ತು ಮತ್ತು "ಅವರು ನಡೆದುಕೊಂಡದ್ದರ ಫಲಿತ"ವನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಕಿತ್ತು, ಅದು ಮರಣದ ಬಳಿಕ ಅವರಿಗೆ ಸಿಕ್ಕ ಪ್ರತಿಫಲದ ಒಂದು ಸೌಮ್ಯೋಕ್ತಿಯಾಗಿರುತ್ತದೆ. **ಆಲೋಚಿಸಿರಿ** ಎಂಬುದಕ್ಕಿರುವ ಪದವು "ಒಂದು ತೋರಿಕೆಯ ಪರೀಕ್ಷಿಸುವಿಕೆಗಿಂತ ಬಹಳ ತದ್ವಿರುದ್ಧವಾದದ್ದಾಗಿದೆ."[24] ಸಹೋದರರು ಈ ಮಾದರಿ ನಾಯಕರು ಹೇಗೆ ಜೀವಿಸಿದ್ದರು, ಮತ್ತು ಅದು ನಿತ್ಯತ್ವದಲ್ಲಿ ಅವರಿಗೆ ಯಾವ ಅರ್ಥವನ್ನು ಹೊಂದಿದ್ದು ಎಂಬುದನ್ನು ಜಾಗ್ರತೆಯಿಂದ ಯೋಚಿಸಿಕೊಳ್ಳಬೇಕಿತ್ತು. "ಫಲಿತ," "ಫಲಿತಾಂಶ," ಅಥವಾ "ಅಂತ್ಯ" ಎಂಬುದಕ್ಕಿರುವ ಪದವು (ἔκβασις, *ekbasis*) ಹೊಸ ಒಡಂಬಡಿಕೆಯೊಳಗೆ ಕೇವಲ 1 ಕೊರಿಂಥ 10:13ರಲ್ಲಿ ಮಾತ್ರವೇ ಸಿಕ್ಕುತ್ತದೆ, ಅಲ್ಲಿ ಅದು "ತಪ್ಪಿಸಿಕೊಳ್ಳುವ ಮಾರ್ಗ" ಅಥವಾ "ಹೊರ ಬರುವ ದಾರಿ" ಎಂದು ಅನುವಾದಿಸಲ್ಪಟ್ಟಿದೆ. ನಾವು ಜೀವನದ ಪ್ರತಿಯೊಂದು ಪರಿಸ್ಥಿತಿಯನ್ನು ನಿಭಾಯಿಸುವದರಲ್ಲಿ ದೇವರ ದಾರಿಯನ್ನು ಹುಡುಕಬೇಕು. 13:7ರ ಸನ್ನಿವೇಶದಲ್ಲಿ, *ekbasis* ಅಂಥ ನಂಬಿಗಸ್ತ ಜೀವಿಸುವಿಕೆಯ ಅಂತ್ಯ ಫಲಿತದ ಕಡೆಗೆ ತೋರಿಸುತ್ತದೆ.

ಮರಣದ ವರೆಗೂ ನಂಬಿಗಸ್ತರಾಗಿದ್ದ ಹಿಂದಿನ ನಾಯಕರ ಕುರಿತು ನಾವು ಯೋಚಿಸುವಾಗ, ಅವರ ಮನೋಭಾವದ ಯಾವದೋ ಒಂದು ಸಂಗತಿಯು ನಮ್ಮನ್ನು ಕಾಡುತ್ತಾ ನಮ್ಮನ್ನು ಉತ್ತಮ ಕ್ರೈಸ್ತರನ್ನಾಗಿ ಮಾಡುತ್ತದೆ. ಇದು ಶಾಸ್ತ್ರಗಳಲ್ಲಿರುವ ನಂಬಿಕೆಯ ಮಹಾನ್ ವೀರರ ಜೀವಿತಗಳ ಕುರಿತು ಓದುವದಕ್ಕೆ ಮತ್ತು ತಿಳಿದುಕೊಳ್ಳುವದಕ್ಕೆ ಒಂದು ಒಳ್ಳೇ ಕಾರಣವಾಗಿರುತ್ತದೆ. ನಾವು ವೈಯಕ್ತಿಕವಾಗಿ ಪರಿಚಯ ಹೊಂದಿದ್ದ ನಂಬಿಗಸ್ತ ಹಾಗೂ ಭಕ್ತಿಯುಳ್ಳ ಜನರ ಜ್ಞಾಪಕವು ನಾವು ಓದಿದ ಅಥವಾ ಬೇರೆಯವರಿಂದ ಕೇಳಿ ತಿಳಿದುಕೊಂಡ ವ್ಯಕ್ತಿಗಳಿಗಿಂತಲೂ ಹೆಚ್ಚಾದ ಪರಿಣಾಮವನ್ನು ನಮ್ಮ ಮೇಲೆ ಬೀರಬಹುದು.

ಇಲ್ಲಿ ಪ್ರಸ್ತಾಪಿಸಲಾಗಿರುವ ನಾಯಕರು ತಮ್ಮ ಭರವಸದ ಆರಂಭವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರು ಮತ್ತು ಅಂತ್ಯದ ವರೆಗೂ ಉಳಿದುಕೊಂಡಿದ್ದರು (3:14). ಅವರ **ನಂಬಿಕೆಯನ್ನು ಅನುಸರಿಸಿರಿ** ಎಂದು ಇಬ್ರಿಯರಿಗೆ ಹೇಳಲಾಯಿತು. "ಅನುಸರಿಸಿರಿ" (μιμέομαι, *mimeomai* ಎಂಬುದರಿಂದ ಬಂದದ್ದು) ಎಂಬುದು "ಅನುಸರಿಸುವವರು" ಎಂಬುದರ ಸಜಾತೀಯ ಪದವಾಗಿರುತ್ತದೆ, ಇದನ್ನು ಪೌಲನು 1 ಕೊರಿಂಥ 11:1ರಲ್ಲಿ ಬಳಸಿದನು. ಅದರಿಂದ, ಒಬ್ಬನು ತಕ್ಷಣವೇ ಕಾಣುವ ಪ್ರಕಾರ, ಆಂಗ್ಲದ ಹಲವಾರು ಪದಗಳು ಬಂದಿದ್ದು, ಅವುಗಳಲ್ಲಿ

"ಅನುಸರಿಸು" (imitate), "ಅಣಕಿಸು" (mime), ಮತ್ತು "ಅನುಕರಣೆ" (mimic) ಎಂಬ ಪದಗಳು ಸೇರಿರುತ್ತವೆ.

"ಅವರ ನಂಬಿಕೆಯನ್ನು ಅನುಸರಿಸಿರಿ" ಎಂಬುದರ ಅರ್ಥವೇನಾಗುತ್ತದೆ? ಬಹುಶಃ, ಈ ನಾಯಕರು ಕ್ರಿಸ್ತನ ಬೋಧನೆಗಳೊಂದಿಗೆ ಸಾಮರಸ್ಯಯುಳ್ಳವರಾಗಿ ಹೇಗೆ ಜೀವಿಸಿದ್ದರು ಮತ್ತು ಮರಣಿಸಿದರೆಂಬುದನ್ನು ಜ್ಞಾಪಕಮಾಡಿಕೊಳ್ಳಿರಿ ಎಂದು ಲೇಖಕನು ಕ್ರೈಸ್ತರನ್ನು ಪ್ರೋತ್ಸಾಹಿಸುತ್ತಿದ್ದಾನೆ. ಅವರು ತಮ್ಮ ಆರಾಧನೆಯ ಆಚಾರಗಳನ್ನು ಮತ್ತು ತಮ್ಮ ದೈನಂದಿನ ಚಟುವಟಿಕೆಗಳನ್ನು ಎಫೆಸ 4:5ರಲ್ಲಿನ "ಒಂದೇ ನಂಬಿಕೆ," ನಂಬತಕ್ಕ ಸಿದ್ಧಾಂತ/ಉಪದೇಶದ[25] ಮೇಲೆ ಆಧಾರಗೊಳಿಸಿಕೊಂಡಿದ್ದರು ಎಂಬುದರಲ್ಲಿ ಯಾವ ಸಂಶಯವೂ ಇರುವದಿಲ್ಲ. ಇದು ಎಲ್ಲಾ ಕ್ರೈಸ್ತರು ಅನುಸರಿಸುವದಕ್ಕೆ ಒಂದು ಒಳ್ಳೇ ಮಾದರಿ ಆಗಿರುತ್ತದೆ.

ಅನುಸರಿಸುವದು ಒಂದು ಅತ್ಯುನ್ನತ ರೂಪದ ಶ್ಲಾಘನೆಯಾಗಿರುತ್ತದೆಂದು ಹೇಳಲಾಗುತ್ತದೆ. ಒಬ್ಬ ಯುವ ಬೋಧಕನಾಗಿ, ನಾನು ಗೌರವಿಸುತ್ತಿದ್ದ ಕೆಲವೊಬ್ಬ ಸಹೋದರರನ್ನು ಅನುಕರಣೆ ಮಾಡುವದಕ್ಕೆ ಪ್ರಯತ್ನಿಸಿದೆನು. ಕ್ರಮೇಣದಲ್ಲಿ, ಅವರ ಕೆಲವು ಶೈಲಿಗಳನ್ನು ನನ್ನ ಸ್ವಂತವಾಗಿ ಅಳವಡಿಸಿಕೊಂಡೆನು. ಕ್ರಿಸ್ತನನ್ನು ಅನುಸರಿಸುವದು (1 ಕೊರಿಂಥ 11:1) ನಾವು ನಮ್ಮ ಕರ್ತನಿಗೆ ಸಲ್ಲಿಸಬಹುದಾದ ಅತ್ಯುನ್ನತವಾದ ಸನ್ಮಾನವಾಗಿರುತ್ತದೆ.

**13:8-16**

**[8]ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು. [9]ನಾನಾವಿಧವಾದ ಅನ್ಯೋಪದೇಶಗಳ ಸೆಳೆವಿಗೆ ಸಿಕ್ಕಬೇಡಿರಿ. ದೇವರ ಕೃಪೆಯನ್ನು ಆತುಕೊಂಡು ಮನಸ್ಸನ್ನು ದೃಢಮಾಡಿಕೊಳ್ಳುವದು ಉತ್ತಮವೇ; ಭೋಜನಪದಾರ್ಥಗಳನ್ನು ವಿಶೇಷಿಸುವದರಿಂದ ಅದು ಆಗುವದಿಲ್ಲ. ಭೋಜನಪದಾರ್ಥಗಳನ್ನು ವಿಶೇಷಿಸಿ ನಡೆದವರು ಏನೂ ಪ್ರಯೋಜನ ಹೊಂದಲಿಲ್ಲ.**

**[10]ನಮಗೊಂದು ಯಜ್ಞವೇದಿ ಉಂಟು, ಈ ವೇದಿಯ ಪದಾರ್ಥಗಳನ್ನು ತಿನ್ನುವದಕ್ಕೆ ಯೆಹೂದ್ಯರ ಗುಡಾರದಲ್ಲಿ ಸೇವೆಯನ್ನು ನಡಿಸುವವರಿಗೆ ಹಕ್ಕಿಲ್ಲ. [11]ಮಹಾಯಾಜಕನು ದೋಷಪರಿಹಾರಕಯಜ್ಞದ ಪಶುಗಳ ರಕ್ತವನ್ನು ತೆಗೆದುಕೊಂಡು ಪವಿತ್ರಸ್ಥಾನದೊಳಗೆ ಹೋಗಲು ಆ ಪಶುಗಳ ದೇಹಗಳು ಪಾಳೆಯದ ಆಚೆ ಸುಡಲ್ಪಡುತ್ತವಲ್ಲಾ. [12]ಅದರಂತೆ ಯೇಸು ಕೂಡ ಸ್ವಂತ ರಕ್ತದಿಂದ ಜನರನ್ನು ಪವಿತ್ರಪಡಿಸುವದಕ್ಕೋಸ್ಕರ [13]ಪಟ್ಟಣದ ಹೊರಗೆ ಸತ್ತನು. ಆದದರಿಂದ ನಾವು ಆತನ ನಿಮಿತ್ತ ಉಂಟಾಗುವ ನಿಂದೆಯನ್ನು ತಾಳಿಕೊಳ್ಳುವವರಾಗಿ ಪಾಳೆಯದ ಆಚೆ ಆತನ ಬಳಿಗೆ ಹೊರಟುಹೋಗೋಣ. [14]ಯಾಕೆಂದರೆ ಇಹದಲ್ಲಿ ಶಾಶ್ವತವಾದ ಪಟ್ಟಣವು ನಮಗಿಲ್ಲ ಇನ್ನು ಮುಂದೆ ಆಗುವ ಪಟ್ಟಣವನ್ನು ಹಾರೈಸುತ್ತಾ ಇದ್ದೇವೆ. [15]ಆದದರಿಂದ ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆಮಾಡುವದೇ ನಾವು ಅರ್ಪಿಸುವ ಯಜ್ಞವಾಗಿದೆ. [16]ಇದಲ್ಲದೆ ಪರೋಪಕಾರವನ್ನೂ ಧರ್ಮಮಾಡುವದನ್ನೂ ಮರೆಯಬೇಡಿರಿ; ಇವೇ ದೇವರಿಗೆ ಸಮರ್ಪಕವಾದ ಯಜ್ಞಗಳು.**

**ವಚನ 8.** ಬಹುಶಃ, ಇಬ್ರಿಯರಿಗೆ ಪತ್ರಿಕೆಯಲ್ಲಿ ಚಿರಪರಿಚಿತವಾದ ವಚನವೆಂದರೆ ಇದೇ: **ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು.**

ನೆನಪಿನಲ್ಲಿಟ್ಟುಕೊಂಡಿರುವ ಹಿಂದಿನ ಕಾಲದ ನಾಯಕರ ಪೀಳಿಗೆಗಳು ಮರಣಿಸಿದ್ದಾರೆ, ಆದರೆ ಅವರು ಇನ್ನು ಮೇಲೆ ಮಾಡಲು ಸಾಧ್ಯವಿಲ್ಲದಿರುವಂತೆ ಇದು ವರೆಗೂ ಜೀವಂತನಾಗಿದ್ದು ನಮನ್ನು ರಕ್ಷಿಸುವದನ್ನು ಮತ್ತು ಸಹಾಯ ಮಾಡುವದನ್ನು ಮುಂದುವರೆಸಿರುವ ಒಬ್ಬನು ನಮಗಿದ್ದಾನೆ. ಇಬ್ರಿಯ 1:12 ಕಿರ್ತನೆ 102:27ರ ಮಾತುಗಳನ್ನು ಆತನಿಗೆ ಅನ್ವಯಗೊಳಿಸುತ್ತದೆ: "ನೀನಾದರೋ ಏಕರೀತಿಯಾಗಿದ್ದೀ; ನಿನ್ನ ವರುಷಗಳು ಮುಗಿದುಹೋಗುವದಿಲ್ಲ."

ಹಳೆಯ ಒಡಂಬಡಿಕೆಯು ಈ ವಿಧವಾಗಿ ದೇವರ ಕುರಿತು ಹೇಳಿಕೆಯನ್ನು ನೀಡುತ್ತದೆ: "ಯೆಹೋವನೆಂಬ ನಾನೇ; ಹೌದು, ಆದಿಪುರುಷನೂ ಅಂತ್ಯಕಾಲದವರ ಸಂಗಡಿಗನೂ ಆಗಿರುವ ನಾನೊಬ್ಬನೇ" (ಯೆಶಾಯ 41:4; ನೋಡಿರಿ 44:6). ಇಲ್ಲಿ ಇಬ್ರಿಯರಿಗೆ ಪತ್ರಿಕೆಯಲ್ಲಿ, ಅದೇ ಪದಗಳನ್ನು ಕ್ರಿಸ್ತನಿಗೆ ಅನ್ವಯಿಸಲಾಗಿರುತ್ತದೆ. ಇದರಲ್ಲಿ ಯಾವದೇ ಅಸಾಮಂಜಸ್ಯತೆಯಿರುವದಿಲ್ಲ, ಯಾಕೆಂದರೆ ನಿಜವಾಗಿಯೂ ಕ್ರಿಸ್ತನು "ಮೊದಲನೆಯವನೂ ಕಡೆಯವನೂ" ಆಗಿದ್ದಾನೆ (ಪ್ರಕಟನೆ 1:17). ಆತನು ಸದಾಕಾಲವೂ ಜೀವಿಸುವವನಾಗಿ ನಮಗೋಸ್ಕರ ವಿಜ್ಞಾಪನೆಗಳನ್ನು ಮಾಡುತ್ತಾನೆ (ಇಬ್ರಿಯ 7:25). ಆತನ ನಿತ್ಯವಾದ ಸ್ವಭಾವವು ಆತನ ದೈವತ್ವವನ್ನು ದೃಢೀಕರಿಸುತ್ತದೆ.

ಯೇಸು ಭೂಮಿಯ ಮೇಲಿರುವ ವೇಳೆಯಲ್ಲಿ ತನ್ನನ್ನು ಅಧೀನನಾಗಿರುವ ಸ್ಥಾನಕ್ಕೆ ತಾತ್ಕಾಲಿಕವಾಗಿ ಸಿಮೀತಗೊಳಿಸಿಕೊಂಡನು (ಫಿಲಿಪ್ಪಿ 2:6-8); ಆದರೆ ಈಗ ಆತನು ಪರಲೋಕದಲ್ಲಿ "ಉನ್ನತಕ್ಕೆ ಏರಿಸಲ್ಪಟ್ಟಿದ್ದಾನೆ." ಆತನು ಯಾವಾಗಲೂ ಒಂದೇ ರೀತಿಯ ವ್ಯಕ್ತಿಯಾಗಿದ್ದಾನೆ, ಆದಾಗ್ಯೂ ಯಾವಾಗಲೂ ಒಂದೇ ಸ್ಥಾನಮಾನವನ್ನು ಹೊಂದಿರಲಿಲ್ಲ. ಆತನ ನರಾವತಾರದ ಸ್ಥಿತಿಯು ಆತನಿಗೆ ಪರಲೋಕದಲ್ಲಿರುವ ಪಾತ್ರಕ್ಕಿಂತ ಕಡಿಮೆಯಾಗಿತ್ತೆಂಬುದು ಸ್ಪಷ್ಟವಾಗಿರುತ್ತದೆ. ಆತನು ಹಿಂದೊಮ್ಮೆ ಪರಲೋಕದಲ್ಲಿ "ಐಶ್ವರ್ಯವಂತನು" ಆಗಿದ್ದನು; ಆದರೆ ಆತನು ಅದನ್ನು ತೊರೆದು ಬಿಟ್ಟನು, ವಾಸ್ತವದಲ್ಲಿ ಮಾನವರ ಬಾಧೆಯಲ್ಲಿ ಪಾಲುಗಾರನಾಗಲು ಮತ್ತು ಅವರೊಂದಿಗೆ ಬಾಧೆಯನ್ನನುಭವಿಸಲು ಬಡವನಾದನು (2 ಕೊರಿಂಥ 8:9). ಈಗ ಆತನು "ಪರಲೋಕದಲ್ಲಿರುವ ನಮ್ಮ ಮನುಷ್ಯನಾಗಿದ್ದಾನೆ."[26] ಆತನು ಭೂಮಿಯ ಮೇಲಿರುವ ವೇಳೆ ಜ್ಞಾನದಲ್ಲಿ ಮಿತಿ ಹೊಂದಿದ್ದನು, ತನ್ನ ಎರಡನೆಯ ಬರೋಣಕ್ಕಾಗಿ ತಂದೆಯು ನೇಮಿಸಿರುವ ಕಾಲವನ್ನು ತಿಳಿಯದವನಾಗಿದ್ದನು (ಮತ್ತಾಯ 24:36; ಮಾರ್ಕ 13:32).[27]

**ವಚನ 9.** ನಾವು 8 ಮತ್ತು 9 ವಚನಗಳನ್ನು ಒಂದಾಗಿ ಜೋಡಿಸುವದಾದರೆ, ನಾವು ಒಂದೇ ಸಿದ್ಧಾಂತವನ್ನು, ಅಥವಾ ಉಪದೇಶಗಳನ್ನು ಉಳಿಸಿಕೊಳ್ಳಬೇಕು, ಹೊರತು ದಾರಿಯಲ್ಲಿ ಬರುವಂತಹ ಪ್ರತಿಯೊಂದು ಹೊಸ ವಿಚಾರಗಳಿಂದ ಬದಲಾಯಿಸಲ್ಪಡಬಾರದು ಎಂಬುದನ್ನು ಅನುಸರಿಸುತ್ತದೆ. ಯೇಸು ಉದ್ದೇಶ ಮತ್ತು ಬೋಧನೆಯಲ್ಲಿ ಒಂದೇ ರೀತಿಯಲ್ಲಿ ಉಳಿದಿರುತ್ತಾನೆ. ಕ್ರಿಸ್ತನ ಕುರಿತಾದ ನಮ್ಮ ಬೋಧನೆಯು ಸಹ, ಸರಿಯಾಗಿ ವ್ಯಾಖ್ಯಾನಿಸಲ್ಪಡುವದಾದರೆ, ಏಕರೀತಿಯಾಗಿ ಉಳಿಯತಕ್ಕದ್ದು. ಆತನು ತನ್ನ ವಾಕ್ಯದ ಸತ್ಯದಿಂದ ಓಲಾಡುವದಿಲ್ಲವಾದ್ದರಿಂದ, ನಾವು ಸಹ ಅದನ್ನು ಅನುಸರಿಸುವದರ ನಮ್ಮ ಪಥವನ್ನು ಬದಲಾಯಿಸಕೊಳ್ಳಕೂಡದು (1 ಕೊರಿಂಥ 15:58). 9ನೇ ವಚನದಲ್ಲಿರುವ ಬುದ್ಧಿವಾದವು 8ನೇ ವಚನದಲ್ಲಿನ ಹೇಳಿಕೆಯ ಒಂದು ಸ್ವಾಭಾವಿಕವಾದ ಮುನ್ನಡೆಯಾಗಿರುತ್ತದೆ.

ಕ್ರೈಸ್ತ ಚರಿತ್ರೆಯಲ್ಲಿ ಇಷ್ಟೊಂದು ಆರಂಭದಲ್ಲಿಯೂ, **ನಾನಾವಿಧವಾದ ಅನ್ಯೋಪದೇಶಗಳು** ಇದ್ದವು (ಬಹುವಚನ). ನಾವು "ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಕೊಂಡು ಹೋಗುವವರ ಹಾಗಿರಬಾರದು" (ಎಫೆಸ 4:14).[28] "ಅನ್ಯೋಪದೇಶ" ಎಂಬುದು ξένος (*xenos*) ಪದದಿಂದ ಅನುವಾದಿಸಲ್ಪಟ್ಟಿದ್ದು, ಅದು "ಅನ್ಯ" ಎಂಬ ಅರ್ಥವನ್ನು ಹೊಂದಿದೆ.

ನಾವು ಸುವಾರ್ತೆಗೆ "ಅನ್ಯ" ಆಗಿರುವದೆಲ್ಲವನ್ನೂ ತಿರಸ್ಕರಿಸಬೇಕು. ಕ್ರಿಸ್ತನು ಏಕರೀತಿಯಾಗಿ ಉಳಿದಿರುತ್ತಾನಾದ್ದರಿಂದ, ದೇವರ ಕೃಪೆ ಮತ್ತು ಆತನು ಮಾನವರನ್ನು ಹೇಗೆ ವಿಮೋಚಿಸುತ್ತಾನೆಂಬ ಕುರಿತಾದ ಸಂದೇಶದ ವಿಷಯದಲ್ಲಿ ತಮ್ಮ ಮನಸ್ಸುಗಳು ಬದಲಾಗುವದಕ್ಕೆ ಇಬ್ರಿಯ ಕ್ರೈಸ್ತರು ಅವಕಾಶವನ್ನು ಕೊಡಬಾರದಿತ್ತು. ಒಂದೇ "ಕ್ರಿಸ್ತನ ಸಿದ್ಧಾಂತ" ಇರುತ್ತದೆ, ಮತ್ತು ನಾವು ಪಾಪದಿಂದ ಮುಕ್ತರಾಗಬೇಕಿದ್ದರೆ ಅದಕ್ಕೆ ವಿಧೇಯರಾಗತಕ್ಕದ್ದು (ರೋಮಾ 6:17, 18).[29]

ದೇವರ ಆಜ್ಞೆಗಳು ಹೇಗೆ ಬದಲಾಗಿರುತ್ತವೆ ಎಂಬುದರ ಹೊರತಾಗಿಯೂ, ಯೇಸು ಮಾರ್ಪಡತಕ್ಕವನಲ್ಲ. ಧರ್ಮಶಾಸ್ತ್ರವು ಕೆಲವೊಂದು **ಭೋಜನಪದಾರ್ಥಗಳನ್ನು** ತಿನ್ನುವ ಅಥವಾ ತಿನ್ನಬಾರದು ಎಂಬ ಬಗ್ಗೆ ನಿಮಗಳನ್ನು ಹೊಂದಿತ್ತು. ಈ ಆಜ್ಞೆಗಳನ್ನು ವಿಧೇಯತೆಯಿಂದ ಆಚರಿಸುವಾಗ ಒಬ್ಬ ವ್ಯಕ್ತಿಯನ್ನು "ಶುದ್ಧನು" ಎಂದು ಪರಿಗಣಿಸಲ್ಪಡುವದಕ್ಕೆ ಅವಕಾಶವಾಗುತ್ತಿತ್ತು; ಆ ನಿಯಮಗಳನ್ನು ನಿರ್ಲಕ್ಷಿಸುವದೆಂದರೆ "ಅಶುದ್ಧನು" ಎಂದು ಪರಿಗಣಿಸಲ್ಪಡುವಂತೆ ಆಗಿತ್ತು. ಆ ಕಟ್ಟಳೆಗಳು ಇನ್ನು ಮೇಲೆ ಅನ್ವಯವಾಗುವದಿಲ್ಲ. ಅನ್ಯಜನರು ಸಹ ವಿಶೇಷವಾದ ಭೋಜನಪದಾರ್ಥಗಳ ಕಟ್ಟಳೆಗಳನ್ನು ಹೊಂದಿದ್ದರು.[30] ಹೇಗೂ, ಯೇಸು ಮಾರ್ಕ 7:19ರಲ್ಲಿ ಎಲ್ಲಾ ಪದಾರ್ಥಗಳನ್ನು ಶುದ್ಧವೆಂದು ಸಾರಿದನು. ಕೆಲವೊಂದು ಆಹಾರಪದಾರ್ಥಗಳನ್ನು ತಿನ್ನುವ ಅಥವಾ ತಿನ್ನದಿರುವ ಕುರಿತಾದ ಸಂಪೂರ್ಣ ನೇಮನಿಷ್ಠೆಗಳನ್ನು ಅನುಸರಿಸುವದು ನಮ್ಮನ್ನು ಉತ್ತಮ ಕ್ರೈಸ್ತರನ್ನಾಗಿಸುವದಿಲ್ಲ. ಕರ್ತನು ಏಕರೀತಿಯಾಗಿಯೇ ಉಳಿದಿರುತ್ತಾನಾದರೂ, ಆತನ ಕಟ್ಟಳೆಗಳು ಮಾರ್ಪಡಬಲ್ಲವು. ಇದರ ಅರ್ಥವು ಹೊಸ ಒಡಂಬಡಿಕೆಯ ಅಡಿಯಲ್ಲಿರುವ ಆತನ ನಿಯಮಗಳು ತಿದ್ದಲ್ಪಡಬಹುದೆಂದು ಆಗಿರುವದಿಲ್ಲ. ಬೈಬಲ್ ತತ್ವಗಳನ್ನು ಮತ್ತು ಮಾರ್ಗಸೂಚಿಗಳನ್ನು ಬದಲಾಯಿಸುವದಕ್ಕೆ ಸಭೆಯಾಗಿ ಮತಚಲಾಯಿಸುವದಕ್ಕೆ ನಮಗೆ ಯಾವ ಹಕ್ಕು ಇರುವದಿಲ್ಲ.

"ನಾನಾವಿಧವಾದ ಅನ್ಯೋಪದೇಶಗಳು" ಯಾವವು ಎಂಬುದು ನಿರ್ದಿಷ್ಟವಾಗಿ ತಿಳಿಸಲ್ಪಟ್ಟಿಲ್ಲ. ಹೇಗೂ, ಯೆಹೂದಿಕರಣಗೊಳಿಸುವವರಿಗೆ ಈ ಉಪದೇಶವು ತುರ್ತಾಗಿ ಅಗತ್ಯವಿತ್ತೆಂದು ನಾವು ಬಲ್ಲೆವು. ಅವರು ಸುನ್ನತಿ ಮಾಡಿಸಿಕೊಳ್ಳುವಂತೆ ಮತ್ತು ಕೇವಲ ಕೊಶೆರ್ (ಯೆಹೂದಿ ಸಂಪ್ರದಾಯದಂತೆ ಸಿದ್ಧಪಡಿಸಿದ) ಭೋಜನಪದಾರ್ಥಗಳನ್ನು ಮಾತ್ರವೇ ತಿನ್ನಬೇಕೆಂದು ಅನ್ಯಜನರನ್ನು ಒತ್ತಾಯಿಸುತ್ತಿದ್ದರು (ಗಲಾತ್ಯ 5:2-6). ದೇವರ ರಾಜ್ಯದ ನಿಜವಾದ ಸ್ವಭಾವವು ಮಾಂಸ ಮತ್ತು ಪಾನದ ನಿಯಮಾವಳಿಗಳಲ್ಲಿ ಸಿಕ್ಕುವದಿಲ್ಲ (ರೋಮಾ 14:17; 1 ಕೊರಿಂಥ 8:8).

ನಾವು ದೇವರ **ಕೃಪೆಯನ್ನು ಆತುಕೊಂಡು ದೃಢ**ಗೊಳಿಸಲ್ಪಡುತ್ತೇವೆ, ಹೊರತು ಆಹಾರ ಪಥ್ಯಕ್ಕೆ ಸಂಬಂಧಿಸಿ ಕಟ್ಟಳೆಗಳಿಂದ ಅಲ್ಲ. ನಮ್ಮ ಆತ್ಮೀಕ ಅಂತಸ್ತನ್ನು ಹೆಚ್ಚಿಸುವದು "ಕೃಪೆ"ಯೇ, ಹೊರತು "ಭೋಜನಪದಾರ್ಥ" ಅಲ್ಲ. ಕಟ್ಟಳೆಯ ಕಾರ್ಯಗಳನ್ನು ಸುವಾರ್ತೆಯ ಕಾರ್ಯಗಳಿಂತ ಉನ್ನತದಲ್ಲಿಡುವಾಗ ಅದು ಯೇಸು ಕ್ರಿಸ್ತನ ಪ್ರಾಮುಖ್ಯತೆಯನ್ನು ಕುಂದಿಸುತ್ತದೆ, ಆತನು "ನಿನ್ನೆ ಇದ್ದ ಹಾಗೆ ಈಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು." ಧರ್ಮಶಾಸ್ತ್ರದ ಕೆಲವೊಂದು ವಿವರಣೆಗಳು ಈಗ ಮಹತ್ವಪೂರ್ಣವಾಗಿವೆ ಯಾಕೆಂದರೆ ಅವುಗಳು ಹೊಸ ಒಡಂಬಡಿಕೆಯಿಂದ ಬದ್ಧವಾಗಿರುವದಿಲ್ಲ.

9ನೇ ವಚನದಲ್ಲಿ "ಕೃಪೆ" ಎಂಬುದು ವ್ಯಾಪಕವಾಗಿ ದೇವರಿಂದ ಕೊಡಲ್ಪಟ್ಟಿರುವ ನಿಜವಾದ ಉಪದೇಶವನ್ನು ಸೂಚಿಸುತ್ತದೆ. "ಕೃಪೆಯಿಂದ ದೃಢಗೊಳಿಸಲ್ಪಡುವದು" ನಮ್ಮನ್ನು ಸುಳ್ಳ ಬೋಧನೆಯಿಂದ ದೂರವಿಡುವದು. ಇಬ್ರಿಯರ ಪೂರ್ವಜರು ದೇವರ "ಸ್ವರ"ಕ್ಕೆ ಕಿವಿಗೊಡದಿರುವ

ಮೂಲಕ ತಮ್ಮ ಹೃದಯಗಳನ್ನು ಕಠಿಣಮಾಡಿಕೊಂಡಿದ್ದರು (ಕೀರ್ತನೆ 95:7-9; ಇಬ್ರಿಯ 3:7-11, 15; 4:7), ಆದರೆ ಅವರ ಸಂತತಿಯವರು ದೇವರ ವಾಕ್ಯದ ಮೂಲಕವಾಗಿ ಆತನ ಸ್ವರಕ್ಕೆ ಕಿವಿಗೊಡುವದಾದರೆ "ಕೃಪೆಯಿಂದ ದೃಢಗೊಳ್ಳುವದ"ಕ್ಕೆ ಸಾಧ್ಯವಿತ್ತು. ತೀತನಿಗೆ 2:11, 12 ವಚನಗಳು ನಮಗೆ ತಿಳಿಸುವದೇನೆಂದರೆ "ಎಲ್ಲಾ ಮನುಷ್ಯರಿಗೆ ರಕ್ಷಣೆಯನ್ನುಂಟುಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು; ನಾವು ಭಕ್ತಿಹೀನತೆಯನ್ನೂ ಲೋಕದ ಆಶೆಗಳನ್ನೂ ವಿಸರ್ಜಿಸಿ . . . ಇಹಲೋಕದಲ್ಲಿ ಸ್ವಸ್ಥಚಿತ್ತರಾಗಿಯೂ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು ಅದು ನಮಗೆ *ಬೋಧಿಸುತ್ತದೆ"* (ಒತ್ತಿ ಹೇಳಿದ್ದು ನನ್ನದು). ನಾವು ಕಲಿಸಬೇಕಾಗಿರುವ ಸತ್ಯವೇ ಕೃಪೆಯಾಗಿದೆ. "ಕೃಪೆಯಿಂದ ರಕ್ಷಣೆ" ಎಂಬುದನ್ನು ಅರ್ಥಮಾಡಿಕೊಳ್ಳುವದು ಕ್ರೈಸ್ತೀಯ ಜೀವಿತಕ್ಕೆ ಪರಮೋಚ್ಛವಾಗಿರುತ್ತದೆ; ನಾವು ತಿನ್ನುವ ಪದಾರ್ಥಗಳಿಂದಾಗಲಿ ಅಥವಾ ನಾವು ಯಾವದನ್ನು ತಿನ್ನುವದನ್ನು ನಿರಾಕರಿಸುತ್ತೇವೆ ಎಂಬುದರಿಂದಾಗಲಿ ಅದನ್ನು ಸಂಪಾದಿಸಿಕೊಳ್ಳುವದಕ್ಕೆ ಸಾಧ್ಯವಿಲ್ಲ.

ಮತ್ತಾಯ 6:16-18ರ ಮನೋಭಾವದೊಂದಿಗೆ ಕುಖ್ಯಾತಿಯನ್ನು ಹುಡುಕದೆ ಅಥವಾ ಜನರ ಗಮನವನ್ನು ಸೆಳೆಯದೆ ಉಪವಾಸವನ್ನು ಮಾಡುವದು ಒಳ್ಳೇದು ಮತ್ತು ಆರೋಗ್ಯಕರವಾಗಿರುತ್ತದೆ. ಕೆಲವೊಂದು ದೈಹಿಕ ವ್ಯಾಧಿಗಳಿರುವ ಜನರು ಉಪವಾಸವನ್ನು ಮಾಡಬಾರದು. ಬಹುಶಃ ಈ ಕಾರಣಕ್ಕಾಗಿಯೇ ಹೊಸ ಒಡಂಬಡಿಕೆಯು ಎಲ್ಲಿಯೂ ಉಪವಾಸವನ್ನು ಕಡ್ಡಾಯಗೊಳಿಸಿರುವದಿಲ್ಲ. ಉಪವಾಸವನ್ನು ವಿಶೇಷ ಆತ್ಮೀಕ ಕಾರಣಗಳಿಗಾಗಿ ಮಾಡುವದಾದರೆ ಪ್ರಯೋಜನಕರವಾಗಿರುತ್ತದೆ, ಆದರೆ ಇದೊಂದು ಸ್ವಯಂಪ್ರೇರಿತ ಆಚಾರವಾಗಿರುತ್ತದೆ.

**ವಚನ 10.** ಬಹುಶಃ, ಕ್ರೈಸ್ತ ಯೆಹೂದಿಗಳು ಯಜ್ಞಗಳನ್ನು ಪಾಲುಗೊಳ್ಳುವಿಕೆಯ ಹಕ್ಕನ್ನು ನಿರಾಕರಿಸಲ್ಪಡುವ ತಯುದಿಯಂಚಿನಲ್ಲಿದ್ದರು. ಇದು ವಿಶೇಷವಾಗಿ ಯೇಸುವನ್ನು ಮೆಸ್ಸೀಯನೆಂದು ನಂಬುವವರಾಗಿದ್ದ ಯಾಜಕರಿಗೆ ಬಾಧೆಯನ್ನುಂಟು ಮಾಡಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 6:7). ತಾವು ಹೊರಗಿಡಲ್ಪಟ್ಟಿದ್ದಾರೆಂದು ಭಾವಿಸಿಕೊಳ್ಳುವದರ ಬದಲಾಗಿ, ಇಬ್ರಿಯ ಕ್ರೈಸ್ತರು ನಂಬಿಕೆಯಿಲ್ಲದ ಯೆಹೂದ್ಯರ ಮೇಲೆ ಕನಿಕರ ಪಟ್ಟಿರಬೇಕಿತ್ತು, ಅವರಿಗೆ ಕರ್ತನ "ಭೋಜನ"ವನ್ನು **ತಿನ್ನುವದಕ್ಕೆ ಹಕ್ಕಿರಲಿಲ್ಲ** ಅಥವಾ ರಕ್ತದಿಂದ ಕೊಂಡುಕೊಳ್ಳಲ್ಪಟ್ಟ ಆಶೀರ್ವಾದಗಳಲ್ಲಿ ಪಾಲುಗೊಳ್ಳುವಿಕೆ ಇರಲಿಲ್ಲ.

ತತ್ಪರಿಣಾಮವಾಗಿ, 10ನೇ ವಚನದಲ್ಲಿರುವ ಹೇಳಿಕೆಯ ಅರ್ಥವು ಹೀಗಿರುತ್ತದೆ, "ನಮಗೆ ಯೆಹೂದಿಮತದಲ್ಲಿರುವ ಯಾವದೇ ವೇದಿಗಿಂತಲೂ ಶ್ರೇಷ್ಠವಾದ ವೇದಿಯು ಇರುತ್ತದೆ, ಮತ್ತು ಅದರಲ್ಲಿ ಪ್ರತಿಯೊಬ್ಬನೂ ಭಾಗಿಯಾಗುವದಕ್ಕೆ ಸಾಧ್ಯವಿಲ್ಲ." **ಯಜ್ಞವೇದಿ** ಯಾವದು? ಅದು ಆತ್ಮೀಕವಾದದ್ದೆಂಬುದನ್ನು 15ನೇ ವಚನವು ಸ್ಪಷ್ಟಗೊಳಿಸುತ್ತದೆ. "ಯಜ್ಞವೇದಿ"ಯು ಸ್ವತಃ ಕ್ರಿಸ್ತನನ್ನು (ಅಥವಾ ಆತನ ಯಜ್ಞವನ್ನು) ಪ್ರತಿನಿಧಿಸುತ್ತದೆ, ಆತನಿಂದಲೇ ನಾವು ನಮ್ಮ ನಿಜವಾದ ಪೋಷಣೆಯ ಆಶೀರ್ವಾದವನ್ನು ಪಡೆದುಕೊಳ್ಳುತ್ತೇವೆ.[31] ಆತನ ಯಜ್ಞದಲ್ಲಿ ಪಾಲುಗಾರರಾಗುವದೆಂದರೆ ಸ್ವತಃ ಕ್ರಿಸ್ತನಲ್ಲಿ ಪಾಲುಗಾರರಾಗುವದಾಗಿದೆ.[32] ಪೌಲನು ಹೀಗೆ ಘೋಷಿಸಿದನು, "ಇಸ್ರಾಯೇಲ್ಯರಾಗಿರುವವರನ್ನು ಯೋಚಿಸಿರಿ. ಯಜ್ಞ ಮಾಡಿದ್ದನ್ನು ತಿನ್ನವವರು ಯಜ್ಞವೇದಿಯೊಡನೆ ಭಾಗಿಯಾಗಿದ್ದಾರಲ್ಲವೇ" (1 ಕೊರಿಂಥ 10:18). 1 ಕೊರಿಂಥ 9:13ರಲ್ಲಿ ಆತನು "ಯಜ್ಞವೇದಿಯ ಬಳಿಯಲ್ಲಿ ಸೇವೆಮಾಡುವವರು ಆ ವೇದಿಗೆ ಬರುವ ಪದಾರ್ಥಗಳಲ್ಲಿ ಪಾಲುಗಾರರಾಗುತ್ತಾರೆ."

ನಾವು ಪ್ರತಿ ವಾರ ಆಚರಿಸುವ ಕರ್ತನ ಭೋಜನದಲ್ಲಿ ಕ್ರಿಸ್ತನ ಮರಣವನ್ನು ಸ್ಮರಿಸುವ

ಮೂಲಕ ನಿಯತಕ್ರಮವಾಗಿ ಆತನನ್ನು ಆರಾಧಿಸುತ್ತೇವೆ.[33] ನಾವು ಅದರಲ್ಲಿ ಅದು ಆರಾಧನೆಯ ಒಂದು ಜೀವಾಳವಾದ ಭಾಗವೆಂಬದಾಗಿ ಪರಿಗಣಿಸಿ ಬಹಳ ಗಂಭೀರವಾಗಿ ಪಾಲುಗಾರರಾಗಬೇಕು, ಹೊರತು ಕೇವಲ ಅಸಡ್ಡೆಯಿಂದ ಅಥವಾ ಯಾವಾಗಲೋ ಒಮ್ಮೆ ಪಾಲುಗಾರರಾಗಬಾರದು. ಯಾಜಕರು ಯಜ್ಞಮಾಡಲ್ಪಟ್ಟ ಪ್ರಾಣಿಗಳನ್ನು ತಿನ್ನುತ್ತಿದ್ದರು; ಅದೇ ರೀತಿಯಲ್ಲಿಯೇ, ದೇವರ ಯಜ್ಞವೇದಿಯ ಮೇಲಿನ ಕ್ರಿಸ್ತನ ಯಜ್ಞದಲ್ಲಿ ಪಾಲುಗಾರರಾಗುವ ನಾವು ಆತನಲ್ಲಿ ಆಶೀರ್ವಾದಗಳಲ್ಲಿ ಭಾಗಿಗಳಾಗುತ್ತೇವೆ. ಯೆಹೂದಿಮತದಲ್ಲಿ ಉಳಿದುಕೊಂಡವರು ಮತ್ತು ರಕ್ಷಣೆಗಾಗಿ ಧರ್ಮಶಾಸ್ತ್ರದ ಧಾರ್ಮಿಕ ಆಚಾರಗಳ ಮೇಲೆ ಅವಲಂಭಿತರಾದವರಿಗೆ ಈ ಶ್ರೇಷ್ಠವಾದ ಯಜ್ಞವೇದಿಯಲ್ಲಿ ಅಥವಾ ಕ್ರೈಸ್ತತ್ವದ ಪ್ರಯೋಜನಗಳಲ್ಲಿ ಹಕ್ಕು ಇರುವದಿಲ್ಲ. ಯೆಹೂದ್ಯರು ಆಶೀರ್ವಾದಗಳನ್ನು ಹೊಂದಿಕೊಳ್ಳುವದಕ್ಕೆ ಕೂಡಿಬರುವ ಸ್ಥಳಕ್ಕೆ (ಗುಡಾರ ಅಥವಾ ದೇವಾಲಯಕ್ಕೆ) ಬಂದ ಪ್ರಕಾರವೇ, ಕ್ರೈಸ್ತರು ಕ್ರಿಸ್ತನ ಪ್ರಯೋಜನಗಳಲ್ಲಿ ಪಾಲುಗಾರರಾಗುವದಕ್ಕೆ ಸಭೆಯಾಗಿ ಕೂಡಿ ಬರಬೇಕು.

ಹಳೆಯ ಮತ್ತು ಹೊಸ ಒಡಂಬಡಿಕೆ ನಡುವಿನ ವಿರುದ್ಧ ಹೋಲಿಕೆಯು ಇಲ್ಲಿ ಮುಂದುವರೆಯುತ್ತದೆ. ಹಳೆಯ ಒಡಂಬಡಿಕೆಯ ಯಜ್ಞಗಳಲ್ಲಿ ಮುಂದುವರೆದ ಯೆಹೂದ್ಯರು ಹೊಸ ಒಡಂಬಡಿಕೆಯ ಆಶೀರ್ವಾದಗಳನ್ನು ಹೊಂದಿಕೊಳ್ಳಲು ಶಕ್ತರಾಗಲಿಲ್ಲ. ಧರ್ಮಶಾಸ್ತ್ರದ ಅಧೀನದಲ್ಲಿರುವವರಿಗೆ "ತಿನ್ನುವದಕ್ಕೆ ಹಕ್ಕಿಲ್ಲ" ಎಂಬ ವಾಸ್ತವಾಂಶವು ಕ್ರೈಸ್ತತ್ವದ ವೈಶಿಷ್ಟ್ಯತೆಯನ್ನು ತೋರಿಸುತ್ತದೆ. ಅಷ್ಟುಮಾತ್ರವಲ್ಲದೆ, ಇದು ಯೆಹೂದಿಮತಕ್ಕೆ ಹಿಂದಿರುಗುವದರಲ್ಲಿನ ಇನ್ನೊಂದು ಅಪಾಯವನ್ನು ಎತ್ತಿ ತೋರಿಸುತ್ತದೆ – ಒಬ್ಬನು ದೇವರ ವಿಶೇಷ ಅನ್ಯೋನ್ಯತೆಯಲ್ಲಿರುವ ಸವಲತ್ತನ್ನು ಕಳೆದುಕೊಳ್ಳುವನು. ಆದದರಿಂದ, ನಾವು "ಆಹಾರ" ಎಂಬ ಅರ್ಥದಲ್ಲಿ ಸಮೃದ್ಧವಾದ "ಮೇಜು" ಎಂದು ಹೇಳುವ ರೀತಿಯಲ್ಲಿಯೇ, "ವೇದಿ" ಎಂಬುದು "ಯಜ್ಞ"ವನ್ನು ಪ್ರತಿನಿಧಿಸುವ ಗೌಣೀಲಕ್ಷಣೆ (ರಾಜ ಎನ್ನುವ ಬದಲು ಕಿರೀಟ ಎಂದು ಹೇಳಿದಂತೆ) ಆಗಿರುವ ಸಾಧ್ಯತೆಯಿದೆ.[34] ಖಂಡಿತವಾಗಿಯೂ, ನಮಗೊಂದು ಭೌತಿಕವಾದ ಯಜ್ಞವೇದಿ ಇರುವದಿಲ್ಲ, ಯಾಕೆಂದರೆ ಕ್ರೈಸ್ತತ್ವದ ಎಲ್ಲಾ ಮಹತ್ವಪೂರ್ಣ ಸಂಗತಿಗಳು ಆತ್ಮಿಕವಾದವುಗಳಾಗಿವೆ. ಸಭೆಯ ಸಭಾಂಗಣದ ಮುಂದೆ ಒಂದು ಮೇಜು, ಬೆಂಚು, ಅಥವಾ ಕಟ್ಟೆಯನ್ನು ನಿರ್ಮಿಸಿ ಅದನ್ನು ಒಂದು "ಯಜ್ಞವೇದಿ" ಎಂದು ಕರೆಯುವದು ಬೇನಾಮಿಯಾಗುತ್ತದೆ ಮತ್ತು ಕ್ರೈಸ್ತೀಯ "ಯಜ್ಞವೇದಿ"ಯ ಸ್ವಭಾವವನ್ನು ಕಳಕೊಳ್ಳುತ್ತದೆ.

**ವಚನಗಳು 11-13.** ದೋಷಪರಿಹಾರಕ ದಿನದಂದು ಪಾಳೆಯದ ಆಚೆ ಪ್ರಾಣಿಗಳು ಭಸ್ಮ ಮಾಡಲ್ಪಡುವ ಯೋಚನೆಯು ಪರಿಚಯಿಸಲ್ಪಟ್ಟಿದೆ. ಪಾಪಪರಿಹಾರಕ್ಕಾಗಿ ಸಮರ್ಪಿಸಲಾದ ಹೋರಿಯನ್ನು **ಪಾಳೆಯದ ಆಚೆ** ಒಯ್ಯಲಾಗುತ್ತಿತ್ತು (ನೋಡಿರಿ ಯಾಜಕಕಾಂಡ 16:27).[35] ಯೇಸುವು **ಪಟ್ಟಣದ ಹೊರಗೆ**[36] ಶಿಲುಬೆಗೇರಿಸಲ್ಪಡುವ ಯೋಚನೆಯು (ವ. 12; ನೋಡಿರಿ ಯೋಹಾನ 19:20) ಆ ಸಂಕೇತವನ್ನು ನೆರವೇರಿಸಿತು. ಅಪರಾಧಿತ್ವದ ಅಪವಾದವನ್ನು ಅಂಗೀಕರಿಸಿಕೊಂಡವನಾಗಿ ("ಪಟ್ಟಣದ ಹೊರಗೆ" ಎಂಬುದರ ಸಂಭಾವ್ಯ ಅರ್ಥವಾಗಿರುತ್ತದೆ), ಯೇಸು ನಮ್ಮ ಪಾಪಗಳನ್ನು ಹೊತ್ತುಕೊಳ್ಳುವದಕ್ಕೆ ಶಕ್ತನಾದನು. **ಪಾಳೆಯ**ವನ್ನು ಬಿಟ್ಟು ಹೋಗುವದು (ವ. 13) ಸಭಾಮಂದಿರ ಹಾಗೂ ದೇವಾಲಯದ ಸಂಬಂಧವನ್ನು ಸಂಪೂರ್ಣ ಕಡಿದುಕೊಳ್ಳುವದನ್ನು ಸೂಚಿಸುತ್ತದೆ. ಬಹಿಷ್ಕೃತರಾದ ನಾವು ನಮ್ಮ ಕರ್ತನಂತೆಯೇ ಅದೇ ನಿಂದೆಯನ್ನು ಹೊತ್ತುಕೊಳ್ಳಬೇಕಾಗಬಹುದು. ಖಂಡಿತವಾಗಿಯೂ, ನಾವು ಯೇಸುವು ಮಾಡಿದ ಯಜ್ಞವನ್ನೇ ಮಾಡುವವರಲ್ಲ; ಯಾಕೆಂದರೆ ಆತನು "ಒಂದೇ ಸಾರಿ ಶಾಶ್ವತವಾಗಿ" ಯಜ್ಞವಾದನು (7:27), ಮತ್ತು ನಮ್ಮದು ನಿರಂತರವಾಗಿ ಮುಂದುವರೆಯುವಂಥದ್ದು. ನಮ್ಮ

ಯಜ್ಞಗಳಲ್ಲಿ ದೇವರನ್ನು ಸ್ತುತಿಸುವದು, ಆತನ ಹೆಸರನ್ನು ಸಾರ್ವಜನಿಕವಾಗಿ ಅರಿಕೆ ಮಾಡುವದು, ಕರುಣೆಯ ಕೆಲಸಗಳನ್ನು ಮಾಡುವದು, ಮತ್ತು ಬೇರೆಯವರೊಂದಿಗೆ ಹಂಚಿಕೊಳ್ಳುವಿಕೆ ಇವುಗಳನ್ನು ಒಳಗೊಂಡಿರುತ್ತವೆ (13:15, 16). ಬೇರೆ ಮಾತುಗಳಲ್ಲಿ ಹೇಳುವದಾದರೆ, ನಾವು ನಮ್ಮ ನಂಬಿಕೆಯನ್ನು ಸಾರ್ವಜನಿಕ ಆರಾಧನೆಯಲ್ಲಿ ತೋರ್ಪಡಿಸಿಕೊಳ್ಳಬೇಕು, ಬೇರೆಯವರನ್ನು ಪರಿವರ್ತನೆಗೆ ನಡಿಸುವದಕ್ಕೆ ಅಪೇಕ್ಷಿಸಬೇಕು, ಮತ್ತು ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು. ದೇವರಿಗೆ ಮೆಚ್ಚಿಕೆಯಾಗುವಂಥ ಯಜ್ಞಗಳಿರುತ್ತವೆ.

ಯೆಹೂದಿಮತದ ಮಹಿಮೆಯು ಈಗ ಇತಿಹಾಸವಾಗಿತ್ತು, ಮತ್ತು ಯೆಹೂದಿ ಕ್ರೈಸ್ತರು ಧರ್ಮಶಾಸ್ತ್ರದೊಂದಿಗಿದ್ದ ಎಲ್ಲಾ ಸಂಬಂಧಗಳನ್ನು ಕಡಿದುಕೊಂಡು "ಪಾಳೆಯದ ಆಚೆ" ಹೊರಟು ಹೋಗಬೇಕಿತ್ತು (ವ. 13). ಇದು ಇಬ್ರಿಯರಿಗೆ ಪತ್ರಿಕೆಯಲ್ಲಿರುವ ಅಂತಿಮ ಮನವಿಯನ್ನು ಸಾರಾಂಶಗೊಳಿಸುತ್ತದೆ. ಪುನಃ, ಲೇಖಕನ ಬುದ್ಧಿವಾದವು **ಹೋಗೋಣ** ಎಂಬುದರಿಂದ ಆರಂಭಗೊಳ್ಳುತ್ತದೆ. ಆತನು ಒಂದು ಅವಸಾನದಲ್ಲಿರುವ ಧರ್ಮವನ್ನು,[37] ಅದು ನಿಜಸ್ವರೂಪದ ಕೇವಲ ನಮೂನೆ ಮಾತ್ರವೇ ಆಗಿರುವ ಅದನ್ನು ತೊರೆದು ಬರುವಂತೆ ಮತ್ತು ಕ್ರಿಸ್ತ ಯೇಸುವಿನಲ್ಲಿ ಮಾತ್ರವೇ ದೊರಕುವಂಥದ್ದನ್ನು ಅಪ್ಪಿಕೊಳ್ಳಿರಿ ಎಂಬದಾಗಿ ಒಂದು ಶಕ್ತಿಶಾಲಿ ವಾದವನ್ನು ಮಾಡಿದನು. "ಪಾಳೆಯದಿಂದ ಹೊರಟು ಹೋಗುವದು" ಎಂದರೆ ಪ್ರಾಣಿಗಳ ಯಜ್ಞಗಳನ್ನು, ಸೂಚ್ಯಾರ್ಥದ ಪ್ರಕಾರ, ಯೆಹೂದಿಮತದ ಎಲ್ಲವನ್ನೂ ನಿಲ್ಲಿಸಿ ಬಿಡುವದು ಎಂದಾಗಿತ್ತು.

ದೋಷಪರಿಹಾರಕ್ಕಾಗಿ ಸಮರ್ಪಿಸಿದ ಪ್ರಾಣಿಗಳು ಇಸ್ರಾಯೇಲ್ಯರ "ಪಾಳೆಯದ ಆಚೆ" **ಸುಡಲ್ಪಡುವ** ಪ್ರಕಾರವೇ (ವ. 11), ಕ್ರಿಸ್ತನು "ಪಟ್ಟಣ ಹೊರಗೆ" ಬಾಧೆಯನ್ನನುಭವಿಸಿದನು (ವ. 12). ಯೆರೂಸಲೇಮಿನ ಹೊರಗೆ ಕೊಲ್ಲಲ್ಪಡುವದು ಕ್ರಿಸ್ತನ ಮರಣದ ಅಪವಾದಕ್ಕೆ ಇನ್ನಷ್ಟು ಕೂಡಿಸಿತ್ತು.[38] ಆ ಸ್ಥಳದಲ್ಲಿಯೇ ಅಪರಾಧಿಗಳು ಮತ್ತು ದೇವದೂಷಕರು ಕೊಲ್ಲಲ್ಪಡುತ್ತಿದ್ದರು. ಇಬ್ರಿಯರು **ಆತನ ನಿಮಿತ್ತ ಉಂಟಾಗುವ ನಿಂದೆಯನ್ನು ತಾಳಿಕೊಳ್ಳುವವರಾಗಿ** ಇರಬೇಕಾಗಿತ್ತು (ವ. 13). ಅವರು ಇದನ್ನು ಹೇಗೆ ಮಾಡುವವರಾಗಿದ್ದರು?

> ಇಬ್ರಿಯರಿಗೆ ಪತ್ರಿಕೆಯ ಪ್ರಕಾರವಾಗಿ, ಜನರು ತಮ್ಮನ್ನು ಅದಕ್ಕೆ ಒಪ್ಪಿಸಿಕೊಳ್ಳುವ ಮೂಲಕವಲ್ಲ, ಆದರೆ ಕ್ರಿಸ್ತನ ಮುಖಾಂತರ ದೇವರನ್ನು ಸ್ತುತಿಸುವ ಮೂಲಕ ಆಗಿತ್ತು: ಕ್ರೈಸ್ತ ಸಮುದಾಯದ ಸೇವೆ ಮಾಡುವದು, ಬೇರೆಯವರ ವೈರತ್ವದ ಹೊರತಾಗಿಯೂ, ಪರರನ್ನು, ಸೆರೆಯವರನ್ನು, ಮತ್ತು ಬಾಧೆಗೊಳಗಾದವರನ್ನು ಆರೈಕೆ ಮಾಡುವದು.[39]

ಯೆಹೂದಿ ಕ್ರೈಸ್ತರು ಕಷ್ಟದಲ್ಲಿರುವವರನ್ನು, ಸಮಾಜದಿಂದ ತಿರಸ್ಕರಿಸಲ್ಪಟ್ಟಿರುವ ಅಥವಾ ಮರೆತು ಹೋಗಲ್ಪಟ್ಟಿರುವವರನ್ನು ಪರಾಂಬರಿಸುವ ಮೂಲಕ ನಿಂದೆಯನ್ನು ತಾಳಿಕೊಳ್ಳಬೇಕಿತ್ತು.

ಇಂದು ಕೆಲವರು "Yeshua Jews" ("ಯೇಸುವಿನ ಯೆಹೂದ್ಯರು") ಆಗಿರುವದಕ್ಕೆ ಬಯಸುತ್ತಾರೆ ಮತ್ತು ಆಗಲೂ ಅನೇಕ ಯೆಹೂದಿ ಪದ್ಧತಿಗಳನ್ನು ಕಾಪಾಡಿಕೊಳ್ಳುತ್ತಾರೆ. ಅವರು ಯೆಹೂದಿ ಪದ್ಧತಿಗಳನ್ನು ಕೇವಲ ಸಾಂಸ್ಕೃತಿಕವಾಗಿ ಮಾತ್ರವೇ ಆಚರಿಸುವದಾದರೆ – ಯೆಹೂದ್ಯರಿಗೆ ಯೆಹೂದ್ಯರಾಗಿ ತೋರಿಸಿಕೊಳ್ಳುವದಕ್ಕೆ (ನೋಡಿರಿ 1 ಕೊರಿಂಥ 9:20, 21) ಮತ್ತು ರಕ್ಷಣೆಯನ್ನು ಸಂಪಾದಿಸಿಕೊಳ್ಳುವ ಹಾಗೂ ಕಾಪಾಡಿಕೊಳ್ಳುವ ದಾರಿಯಾಗಿ ಅಲ್ಲ – ಅವರು ಆ ಕಾರ್ಯಗಳನ್ನು ಮಾಡಿಯೂ ಕ್ರೈಸ್ತರಾಗಿ ಉಳಿದುಕೊಳ್ಳುವ ಸಾಧ್ಯತೆಯು ಬಹಳಷ್ಟಿರುತ್ತದೆ.

ಹೇಗೂ, ಇಂದು ರಕ್ಷಣೆಯನ್ನು ಹುಡುಕುವವರೆಲ್ಲರು ತಮ್ಮ ರಕ್ಷಕನೂ ಒಡೆಯನೂ ಆಗಿ ಕ್ರಿಸ್ತನನ್ನು ಮಾತ್ರವೇ ಅಂಗೀಕರಿಸಿಕೊಳ್ಳಬೇಕು ಮತ್ತು ಅನುಸರಿಸಬೇಕು. ಒಬ್ಬನು ಹಳೆಯ ಒಡಂಬಡಿಕೆಯ ನಿಯಮಗಳನ್ನು ಅನುಸರಿಸುತ್ತಾ ದೇವರನ್ನು ಸನ್ಮಾನಿಸುವದಕ್ಕೆ ಸಾಧ್ಯವಿಲ್ಲ. ಇನ್ನು ಮೇಲೆ ರಕ್ಷಣೆ ಹೊಂದಬೇಕಾದರೆ ಅದರ ನಿಬಂಧನೆಗಳು ಅಗತ್ಯವಿರುವದಿಲ್ಲ. ಅವುಗಳನ್ನು ಬದ್ಧಗೊಳಿಸುವದು ಅನ್ಯಜನಾಂಗದ ಕ್ರೈಸ್ತರು ಸುನ್ನತಿ ಮಾಡಿಸಿಕೊಳ್ಳಬೇಕೆಂದು ಕೇಳುವ ಮೂಲಕ ಕೃಪೆಗೆ ತಪ್ಪಿ ಹೋದವರನ್ನು ಕೂಡಿಕೊಂಡಂತಾಗುವದು (ಗಲಾತ್ಯ 5:1-6). ಯೆಹೂದಿ ಜನಾಂಗೀಯ ಹಿನ್ನಲೆಯಿಂದ ಬಂದ ಕ್ರೈಸ್ತರು ಪಸ್ಕದ ಪದ್ಧತಿಗಳನ್ನು ಅನುಸರಿಸುವದಕ್ಕೆ ಬಯಸಬಹುದು, ಆದರೆ ಈ ಛಾಯೆಯು ದೇವರ ಧರ್ಮಶಾಸ್ತ್ರದ ಭಾಗವಾಗಿ ಉಳಿದಿರುತ್ತದೆಂದು ಹೇಳಿಕೊಳ್ಳುವದು ಕ್ರಿಸ್ತನು ಅದನ್ನು ನೆರವೇರಿಸಿದ್ದನ್ನು ನಿರಾಕರಿಸುವದಾಗಿದೆ (ಮತ್ತಾಯ 5:17, 18; 1 ಕೊರಿಂಥ 5:7). ಕ್ರಿಸ್ತನು ನಮ್ಮ ಪಸ್ಕದ ಕುರಿಯಾಗಿದ್ದಾನೆ; ಆತನು ಹಳೆಯದನ್ನು ನೆರವೇರಿಸಿದನು ಮತ್ತು ತೆಗೆದು ಹಾಕಿದನು (1 ಕೊರಿಂಥ 5:7).

ಪೌಲನು ಕೆಲವೊಂದು ಪದ್ಧತಿಗಳನ್ನು ಪಾಲಿಸುತ್ತಿದ್ದನು, ಆಗಾಗ ಕೆಲವು ಯುವಕರ ಶುದ್ಧಗೊಳಿಸುವಿಕೆಗೆ ಮತ್ತು ಆರಾಧನೆಗೆ ಸಂದಾಯ ಮಾಡುತ್ತಿದ್ದನು ಮತ್ತು ಅವರೊಂದಿಗೆ ಆರಾಧನೆಯಲ್ಲಿ ಭಾಗವಹಿಸುತ್ತಿದ್ದನು (ಅಪೊಸ್ತಲರ ಕೃತ್ಯಗಳು 21:20-26). ಆತನು ತಿಮೊಥೆಯನನ್ನು ಯೆಹೂದ್ಯರಿಗೆ ಅಂಗೀಕೃತನಾಗಿ ಮಾಡುವದಕ್ಕೋಸ್ಕರ ಆತನಿಗೆ ಸುನ್ನತಿ ಮಾಡಿಸಿದನು (ಅಪೊಸ್ತಲರ ಕೃತ್ಯಗಳು 16:1-3). ಹೇಗೂ, ತಿಮೊಥೆಯನು ಅರ್ಧ-ಯೆಹೂದಿ ಆಗಿದ್ದನು. ಪೌಲನು ಅನ್ಯಜನಾಂಗದವನಾಗಿದ್ದ ತೀತನ ಮೇಲೆ ಪದ್ಧತಿಯನ್ನು ಒತ್ತಾಯಿಸುವದಕ್ಕೆ ಮಾಡಿದ ಯಾವದೇ ಪ್ರಯತ್ನವನ್ನು ವಿರೋಧಿಸಿದನು (ಗಲಾತ್ಯ 2:3). ಕ್ರೈಸ್ತರು ಕೃಪೆಯಿಂದ ರಕ್ಷಿಸಲ್ಪಟ್ಟಿದ್ದಾರೆ ಹೊರತು ಮೋಶೆಯ ಧರ್ಮಶಾಸ್ತ್ರದಿಂದ ಅಲ್ಲ ಎಂಬುದು ಅಪೊಸ್ತಲನಿಗೆ ಗೊತ್ತಿತ್ತು. ಬಹುಶಃ ಒಬ್ಬ ಯೆಹೂದಿ ಕ್ರೈಸ್ತನು ಇಂದು ಅದೇ ರೀತಿಯ ನಿಯಮಗಳನ್ನು ಅನುಸರಿಸಬಹುದು, ಆದರೆ ಹೊಸ ಒಡಂಬಡಿಕೆಯ ಸಭೆಯೊಳಗೆ ನಾವು ಹಳೆಯ ಒಡಂಬಡಿಕೆಯ ಆರಾಧನಾ ಆಚಾರಗಳನ್ನು ತರುವದಕ್ಕೆ ಸಾಧ್ಯವಿಲ್ಲ.[40]

ಹೊಸ ಒಡಂಬಡಿಕೆಯ ದಿನಗಳಲ್ಲಿ, ಈ ಮುಂಚೆ ಜಾರಿಯಲ್ಲಿದ್ದ ಪದ್ಧತಿಗಳನ್ನು ಅಥವಾ ಕಟ್ಟಳೆಗಳನ್ನು ಅನುಸರಿಸುವ ವಿಷಯದಲ್ಲಿ ಯೆಹೂದ್ಯರು ಹಾಗೂ ಅನ್ಯಜನರ ನಡುವೆ ಒಂದು ದೊಡ್ಡ ವ್ಯತ್ಯಾಸವಿತ್ತು, ಮತ್ತು ಆ ಪ್ರತ್ಯೇಕತೆಯು ಇಂದು ಗಮನಕ್ಕೆ ತಂದುಕೊಳ್ಳಲ್ಪಡತಕ್ಕದ್ದು. ಪ್ರತಿಯೊಬ್ಬರಿಗೂ ಅತ್ಯಂತ ಸುರಕ್ಷಿತವಾದ ಆಚಾರವೆಂದರೆ ಯೆಹೂದಿ ಮತದ "ಪಾಳೆಯದ ಆಚೆ" ಹೊರಟು ಹೋಗುವದೇ ಆಗಿದೆ. ಯೆಹೂದಿ ಮತದೊಂದಿಗಿನ ತಮ್ಮ ಸಂಬಂಧಗಳನ್ನು ಕಡಿದುಕೊಳ್ಳಬೇಕೆಂದು ಲೇಖಕನು ಇಬ್ರಿಯರಿಗೆ ಬುದ್ಧಿಹೇಳಿದನು.[41]

**ವಚನ 14.** ಯೆರೂಸಲೇಮಿನ "ಪಾಳೆಯ" ಒಳಗೆ ಆಶ್ರಯವನ್ನು ಅಪೇಕ್ಷಿಸುವದು ಆ ಪಟ್ಟಣಕ್ಕೆ ಬರಲಿದ್ದ ನಾಶನದ ಕುರಿತಾಗಿ ಕ್ರಿಸ್ತನ ಬೋಧನೆಯಿಂದ ಅಪೊಸ್ತಲರು ಪ್ರಕಟಗೊಳಿಸಿದ್ದರ ಬೆಳಕಿನಲ್ಲಿ ಮೂರ್ಖತನವಾಗಿತ್ತು. ಯೆರೂಸಲೇಮ್ ಉಳಿಯಲಾರದು ಎಂಬುದನ್ನು, ಮತ್ತು ಖಂಡಿತವಾಗಿಯೂ ಆರಾಧಿಸುವದಕ್ಕಾಗಿ ದೇವರಿಗೆ ಪೂಜ್ಯನೀಯವಾದಂಥ ಪರಿಶುದ್ಧ ಸ್ಥಳವಾಗಿ ಉಳಿಯಲಾರದು ಎಂಬುದನ್ನು ಈ ವಚನವು ಸೂಚಿಸಬಹುದಾಗಿದೆ. ದೇವಾಲಯದ ಸರಿಯಾದ ಭಾಗದಲ್ಲಿ ಈಗ ಉಳಿದಿರುವದು ಕೇವಲ ಉರುಳಿಸಲ್ಪಟ್ಟಿರುವ ಕೆಲವು ಕಲ್ಲುಗಳು ಮಾತ್ರವೇ. ಪ್ರಥಮ ಶತಮಾನದ ಕಟ್ಟಡದ ಭಾಗಗಳಲ್ಲಿ ಈಗ ನಿಂತಿರುವ ಏಕೈಕ ಭಾಗವೆಂದರೆ ಹೆರೋದನ ದೇವಾಲಯದ ಹೊರಗಿನ ಗೋಡೆ ಮಾತ್ರವೇ, ಅದರ ಒಂದು ಭಾಗವನ್ನು ಈಗ "ಗೋಳಾಡುವ ಗೋಡೆ" ಎಂದು ಕರೆಯಲಾಗಿರುತ್ತದೆ.

ಭೂಮಿಯ ಮೇಲೆ **ಶಾಶ್ವತವಾದ ಪಟ್ಟಣವು** ಇಲ್ಲ.[42] "ಪಟ್ಟಣ"ವು ಶೀಘ್ರದಲ್ಲಿಯೇ ಗತಿಸಿ ಹೋಗುವವದೆಂಬುದನ್ನು ಗ್ರಹಿಸಿಕೊಂಡು ಅದನ್ನು ಹಿಂದಕ್ಕೆ ಬಿಟ್ಟು ಬರುವದು ಅಬ್ರಹಾಮನು ಎದುರುನೋಡಿದ ಶಾಶ್ವತವಾದ ಮತ್ತು ಉತ್ತಮವಾದ ಪಟ್ಟಣದಲ್ಲಿ ನಂಬಿಕೆಯನ್ನು ತೋರಿಸುವದಾಗಿತ್ತು. ಇದು "ಶಾಶ್ವತವಾದ ಬುನಾದಿಗಳುಳ್ಳ" ಪಟ್ಟಣವಾಗಿರುತ್ತದೆ – ಪರಲೋಕ (ಇಬ್ರಿಯ 11:10, 16). ಭೂಮಿಯ ಮೇಲಿರುವ ಪ್ರತಿಯೊಂದು ಪಟ್ಟಣವು "ಕದಲಿಸಲ್ಪಡುವ" ಕಾರ್ಯಗಳ ಭಾಗವಾಗಿರುತ್ತವೆ (ಇಬ್ರಿಯ 12:27). ಒಬ್ಬನ ಸ್ವದೇಶವನ್ನು ಪ್ರೀತಿಸುವದು ಅಥವಾ ಅದರ ನಾಯಕರನ್ನು ವಿಶ್ವಾಸಿಸುವದು ಒಬ್ಬನ ಆತ್ಮಕ್ಕೆ ವಿಶ್ರಾಂತಿಯನ್ನು ಉಂಟು ಮಾಡುವದಿಲ್ಲ.[43] ದೇವರ ನಿತ್ಯವಾದ ಪಟ್ಟಣದಲ್ಲಿ ಭರವಸವನ್ನಿಡುವದು ನಮಗಿರುವದರಲ್ಲಿ ಸಂತೃಪ್ತರಾಗಿರುವಂತೆ ನಮ್ಮನ್ನು ಶಕ್ತರನ್ನಾಗಿಸುವದು.

**ವಚನ 15.** ಕೆಲವರು ತಮ್ಮ ಸಾರ್ವಜನಿಕ ಆರಾಧನೆಯನ್ನು ಮತ್ತು ದೇವರ ಸ್ತುತಿಸುವದನ್ನು ನಿರ್ಲಕ್ಷಿಸುತ್ತಿದ್ದರೆಂಬ ಅರ್ಥವನ್ನು ವಾಕ್ಯಭಾಗವು ಕೊಡುತ್ತದೆ (10:25ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅವರು ಸಾರ್ವಜನಿಕದಲ್ಲಿ ಆರಾಧನೆ ಮಾಡಿದರೆ ಅಥವಾ ತಮ್ಮ ನಂಬಿಕೆಯನ್ನು ಒಪ್ಪಿಕೊಂಡರೆ ಹಿಂಸೆಯಾಗುವದೇನೋ ಎಂಬ ಭಯದಲ್ಲಿದ್ದಿರಬಹುದು.

ಲೇಖಕನು ತನ್ನ ಪಾಠವನ್ನು ಮುಕ್ತಾಯಗೊಳಿಸುವ ಮುಂಚೆ ಕ್ರೈಸ್ತರ "ಯಾಜಕತ್ವ"ದ ಕೆಲಸವನ್ನು ಕುರಿತು ಮತ್ತೊಮ್ಮೆ ಉಲ್ಲೇಖನವನ್ನು ಮಾಡುತ್ತಾನೆ. ಇದು ಈ ಪತ್ರಿಕೆಯಲ್ಲಿರುವ ಅಂತಿಮವಾದ **ಮಾಡೋಣ** ಬುದ್ಧಿವಾದವಾಗಿರುತ್ತದೆ. ಎಲ್ಲರೂ ಯಜ್ಞಗಳನ್ನು ಸಮರ್ಪಿಸತಕ್ಕದ್ದು. ನಮ್ಮ ತುಟಿಗಳಿಂದ ದೇವರನ್ನು ಸ್ತುತಿಸುವದು ಪ್ರಾಮುಖ್ಯವಾದದ್ದು, ಆದರೆ ಅದು ಸಾಕಾಗುವದಿಲ್ಲ. ನಾವು ನಮ್ಮ ನಂಬಿಕೆಯನ್ನು ಜೀವಿಸಬೇಕು ಹಾಗೂ ಹಂಚಿಕೊಳ್ಳಬೇಕು. ನಮ್ಮ ಆರಾಧನೆಯ ಯಜ್ಞವು ಮನುಷ್ಯ-ನಿರ್ಮಿತವಾದ ಮಾನವ ಯಜ್ಞವೇದಿಯೊಂದರಿಂದ ಬರುವದಿಲ್ಲ, ಆದರೆ **ನಮ್ಮ ತುಟಿಗಳ ಫಲ**ವಾದ ಮಾತುಗಳೇ ನಮ್ಮ ಹೃದಯಗಳಿಂದ ದೇವರಿಗೆ ಮಹಿಮೆಯನ್ನು ತರುವವು. ಆದಿ ಕ್ರೈಸ್ತರ ಮೇಲೆ ಯಾವದೇ ಯಜ್ಞಗಳು ಮತ್ತು ಯಜ್ಞವೇದಿಯನ್ನು ಹೊಂದಿರದವರೆಂಬ ಆರೋಪವು ಇತ್ತು. ನಿಶ್ಚಯವಾಗಿಯೂ, ಅವರು ಆಗಲೂ ಸಮರ್ಪಿಸುವದಕ್ಕೆ ಯಜ್ಞಗಳನ್ನು ಹೊಂದಿದ್ದರು, ಆದರೆ ಅವುಗಳು **ಆತನ ಮೂಲಕವಾಗಿ** ಸಮರ್ಪಿಸಬೇಕಾಗಿದ್ದ ಆತ್ಮೀಕ ಯಜ್ಞಗಳಾಗಿದ್ದವು (ನೋಡಿರಿ ರೋಮಾ 12:1, 2). ಈ ಪದಗುಚ್ಛದ ಮೇಲೆ ಒತ್ತು ಕೊಡತಕ್ಕದ್ದು, ಯಾಕೆಂದರೆ ಅವರ ಎಡೆಬಿಡದ **ಸ್ತೋತ್ರಯಜ್ಞವು** ಕ್ರಿಸ್ತನ ಮೂಲಕವಾಗಿ ಸಮರ್ಪಿಸಲ್ಪಡಬೇಕಿತ್ತು, ಹೊರತು ಯೆಹೂದಿ ಯಜ್ಞಗಳ ಕ್ರಮದಲ್ಲಿ ಅಲ್ಲ.[44] ಯೇಸುವಿನಲ್ಲಿ ನಂಬಿಕೆಯಿಟ್ಟಿದ್ದ ಯಾಜಕರಿಗೆ ಅದನ್ನು ಜ್ಞಾಪಕಪಡಿಸುವ ಅಗತ್ಯವಿತ್ತು. ರಬ್ಬಿಗಳು, ತಾವು ಹಳೆಯ ಒಡಂಬಡಿಕೆಯ ಕುರಿತು ಮಾಡಿದ ಅಧ್ಯಯನದ ಆಧಾರದಲ್ಲಿ ಈ ಹೇಳಿಕೆಯನ್ನು ಹೊಂದಿದ್ದರು: "ಭವಿಷ್ಯದಲ್ಲಿ ಎಲ್ಲಾ ಯಜ್ಞಗಳು ನಿಂತುಹೋಗುವವು; ಆದರೆ ಸ್ತೋತ್ರಗಳು ನಿಂತು ಹೋಗುವದಿಲ್ಲ."[45]

ನಾವು ಕ್ರಿಸ್ತನಿಗೆ ನಂಬಿಗಸ್ತರಾಗಿ ಉಳಿಯಬೇಕಾದರೆ, ನಾವು ಎಡೆಬಿಡದೆ ಸ್ತೋತ್ರಗಳನ್ನು ಅರ್ಪಿಸಬೇಕು! ಇಬ್ರಿಯ 12:28ರಲ್ಲಿನ "ಸಮರ್ಪಕವಾದ ಆರಾಧನೆ"ಯು ಇದೇ ಆಗಿದೆ. **ಆತನ ನಾಮಕ್ಕೆ ಸಲ್ಲಿಸುವ ಸ್ತೋತ್ರಗಳ** (ಬಾಯಿಂದ ಪ್ರತಿಜ್ಞೆಮಾಡುವ) "ತುಟಿಗಳ ಫಲ" ಎಂಬ ಯೋಚನೆಯು ಹೋಶೇಯ 14:3ರಿಂದ ತೆಗೆದುಕೊಂಡದ್ದಾಗಿದೆ (14:2; LXX). "ಸಲ್ಲಿಸುವ ಸ್ತೋತ್ರಗಳು" ಅಥವಾ "ಪ್ರತಿಜ್ಞೆ" ಮಾಡುವದು – ὁμολογέω (*homologeō*) ಎಂಬ ಪದವು ಎರಡರಲ್ಲಿ ಯಾವ ಅರ್ಥವನ್ನಾದರೂ ಕೊಡಬಲ್ಲದು – ವರ್ತಮಾನಕಾಲರೂಪದಲ್ಲಿದ್ದು, ಇದನ್ನು

ನಿರಂತರವಾಗಿ ಮಾಡತಕ್ಕದ್ದೆಂದು ಸೂಚಿಸುತ್ತದೆ.

ಉಚ್ಚಾರದಿಂದ ಅಥವಾ ಮೌಖಿಕವಾಗಿ ಸಲ್ಲಿಸುವ ಸ್ತುತಿಯು ಒಂದು ಯಜ್ಞವೆಂದು ಎಣಿಸಲ್ಪಟ್ಟಿದೆ ಎಂಬುದನ್ನು ಗಮನಿಸಿರಿ. ಸಂಗೀತ ಸ್ವರಗಳು ಸಹ ಉಚ್ಚಾರಣೆಯನ್ನು ಮಾಡಬಹುದು ಆದರೆ ಮೌಖಿಕ ಉಚ್ಚಾರಣೆ ಅಲ್ಲಿ; ಬಾಯಿಂದ ಶಬ್ದವನ್ನು ಮಾಡುವದಷ್ಟೆ ಅರ್ಥಗರ್ಭಿತ ವಿಧದಲ್ಲಿ “ಒಬ್ಬರೊಂದಿಗೆ ಮಾತಾಡುವ” ರೀತಿಯಂತೆ ಆಗುವದಿಲ್ಲ (ಎಫೆಸ 5:19). ಪ್ರೀತಿಯ ಮತ್ತು ಕೃತಜ್ಞತಾಸ್ತುತಿಯ ನುಡಿಗಳು ಯಜ್ಞಗಳಿಗಿಂತಲೂ ಶ್ರೇಷ್ಠವಾದವುಗಳು. ಕ್ರಿಸ್ತನ ಯಜ್ಞದ ಮೂಲಕವಾಗಿ ಪ್ರಾಣಿಗಳ ಯಜ್ಞಗಳು ಶಾಶ್ವತವಾಗಿ ಇಲ್ಲದಂತಾಗಿಸಲ್ಪಟ್ಟವು. ಆರಾಧನೆಯು ಒಂದು ಯಜ್ಞದಂತೆ ಎಂಬ ಭಾವನೆಯು ಕೀರ್ತನೆ 50:12-15ರಲ್ಲಿ ಪರಿಚಯಿಸಲ್ಪಟ್ಟಿತು.

**ವಚನ 16.** ಕೊಡುವದನ್ನು ಇಲ್ಲಿ ಒಂದು **ಹಂಚಿಕೊಳ್ಳುವಿಕೆ** (ಧರ್ಮಮಾಡುವದು; κοινωνία, *koinōnia*) ಎಂದು ಕರೆಯಲ್ಪಟ್ಟಿದೆ. ಇದು ರೋಮಾ 15:26ರಲ್ಲಿ ಪ್ರಸ್ತಾಪಿಸಲಾಗಿರುವ “ಹಣ ಸಹಾಯ” ಎಂಬುದಕ್ಕಾಗಿರುವ ಪದವಾಗಿದೆ. ಈ ಯಜ್ಞವು ನಿಜವಾದ *koinōnia* (“ಅನ್ಯೋನ್ಯತೆ”) ಆಗಬೇಕಾದರೆ ನಮ್ಮ ಕೊಡುವಿಕೆಯು ನಿಜಕ್ಕೂ ಒಂದು “ಸಹಭಾಗಿತ್ವದ ಪಾಲ್ಗೊಳ್ಳುವಿಕೆ” ಆಗಿರತಕ್ಕದ್ದು. ದಾನಧರ್ಮದ ಕಾರ್ಯಗಳು “ನಮ್ಮ ಸಜೀವ ಯಜ್ಞದ” ಭಾಗವಾಗಿರುತ್ತವೆ (ರೋಮಾ 12:1). ಸಹಾಯದ ಅಗತ್ಯವಿರುವವರು ಎಲ್ಲಾ ಯಾವಾಗಲೂ ಇದ್ದೇ ಇರುವರು (ಮಾರ್ಕ 14:7), ಮತ್ತು ಕ್ರೈಸ್ತರು ತಮ್ಮ ದಾನಶೀಲತೆಯ ಕೆಲಸಗಳಿಗೆ ಗಮನಾರ್ಹರಾಗಿರಬೇಕು. ಇಬ್ರಿಯರಲ್ಲಿ ಕೆಲವರು ಕಾನೂನಾತ್ಮಕ ವಶಪಡಿಸಿಕೊಳ್ಳುವಿಕೆ ಅಥವಾ ಕಳ್ಳತನದ ಕಾರಣದಿಂದ ತಮ್ಮ ಸ್ವತ್ತುಗಳನ್ನು ಕಳಕೊಂಡಿದ್ದರು ಎಂಬುದನ್ನು ನೆನಪಿಸಿಕೊಳ್ಳಿರಿ (ಇಬ್ರಿಯ 10:34). ಆ ನಷ್ಟವನ್ನು “ಸಂತೋಷದಿಂದ” ಅಂಗೀಕರಿಸಿಕೊಳ್ಳುವ ಜನರಿಗೆ ತಮ್ಮ ಭೌತಿಕ ವಸ್ತುಗಳನ್ನು ಬೇರೆಯವರ ಜೊತೆಯಲ್ಲಿ ಹಂಚಿಕೊಳ್ಳುವದಕ್ಕೆ ಯಾವ ಸಮಸ್ಯೆಯೂ ಇರಲಿಲ್ಲ. ಹಂಚಿಕೊಳ್ಳುವ ಕ್ರಿಯೆಯಲ್ಲಿ, ನಾವು ಒಬ್ಬರೊಂದಿಗೊಬ್ಬರು ಮತ್ತು ಕ್ರಿಸ್ತನೊಂದಿಗೆ ಪಾಲುದಾರರಾಗುತ್ತೇವೆ.

## ಈಗಿನ ನಾಯಕರ ಅದೀನರಾಗಿ ಮತ್ತು ಇತರರಿಗಾಗಿ ಪ್ರಾರ್ಥನೆ ಮಾಡುವವರಾಗಿ ನೆಲೆಗೊಳ್ಳಿರಿ (13:17-19)

**[17]ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ. ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ; ಅವರು ವ್ಯಸನದಿಂದಿರುವದು ನಿಮಗೆ ಪ್ರಯೋಜನಕರವಾದದ್ದಲ್ಲ.**

**[18]ನಮಗೋಸ್ಕರ ಪ್ರಾರ್ಥಿಸಿರಿ. ನಾವು ಎಲ್ಲಾ ವಿಷಯಗಳಲ್ಲಿ ಸಜ್ಜನರಾಗಿ ನಡೆದುಕೊಳ್ಳಬೇಕೆಂದು ಅಪೇಕ್ಷಿಸುವವರಾಗಿದ್ದು ನಮ್ಮ ಮನಸ್ಸಿನಿಂದ ಒಳ್ಳೇ ಸಾಕ್ಷಿ ಹೊಂದಿದ್ದೇವೆಂದು ನಿಶ್ಚಯಿಸಿಕೊಂಡಿದ್ದೇವೆ. [19]ನಮಗೋಸ್ಕರ ಪ್ರಾರ್ಥನೆ ಮಾಡಬೇಕೆಂದು ನಿಮ್ಮನ್ನು ಬಹು ವಿಶೇಷವಾಗಿ ಬೇಡಿಕೊಳ್ಳುತ್ತೇನೆ. ಯಾಕೆಂದರೆ ನಿಮ್ಮ ಪ್ರಾರ್ಥನೆಗಳ ಮೂಲಕ ನಾನು ಅತಿ ಶೀಘ್ರವಾಗಿ ನಿಮ್ಮ ಬಳಿಗೆ ತಿರಿಗಿ ಬಂದೇನು.**

ಯೇಸು ಕ್ರಿಸ್ತನ ಮಾರ್ಪಡದ ಸ್ವಭಾವದ ಕುರಿತು ಮತ್ತು ಕ್ರೈಸ್ತ ಸಿದ್ಧಾಂತವನ್ನು ದೃಢವಾಗಿ ಹಿಡಿದುಕೊಳ್ಳುವ ಕುರಿತು ಚರ್ಚೆಯನ್ನು ಮಾಡಿದ ಬಳಿಕ, ಲೇಖಕನು ನಾಯಕರ ವಿಷಯಕ್ಕೆ

ಹಿಂದಿರುಗುತ್ತಾನೆ. ಸಭಾನಾಯಕರ ಕಡೆಗೆ ನಮಗಿರುವ ಜವಾಬ್ದಾರಿಗಳ ಮೇಲೆ ಮುಖ್ಯ ಗಮನವನ್ನು ಕೊಡುತ್ತಾನೆ. ಅವರು ಬೇರೆಯವರನ್ನು ಪರಲೋಕದ ಗುರಿಯ ಕಡೆಗೆ ನಡಿಸುವ ಪವಿತ್ರವಾದ ಭರವಸವೊಂದನ್ನು ಹೊಂದಿದ್ದಾರೆ. ಅದೇ ಸಮಯದಲ್ಲಿ, ಅವರ ಲಕ್ಷ್ಯದಲ್ಲಿ ಅವರಿಗೆ ಸಹಾಯ ಮಾಡುವ ಒಂದು ಜವಾಬ್ದಾರಿಯು ನಮಗಿರುತ್ತದೆ.

**ವಚನ 17. ಸಭಾನಾಯಕರಿಗೆ ವಿಧೇಯವಾಗಬೇಕೆಂಬ** ಆಜ್ಞೆಯು ವರ್ತಮಾನಕಾಲದಲ್ಲಿರುತ್ತದೆ. ಇದು ಈ ಸಂದರ್ಭದಲ್ಲಿ "ಆತ್ಮಗಳನ್ನು ಕಾಯುವವರ"ರಿಗೆ ಸಂಬಂಧಿಸಿದ್ದಾಗಿದೆ, ಹೊರತು 13:7ರಲ್ಲಿರುವಂತೆ ಗತಕಾಲದಲ್ಲಿದ್ದವರ ಕುರಿತಲ್ಲ. ಆತ್ಮಗಳನ್ನು ಕಾಯುವವರು ಹಿರಿಯರಾಗಿದ್ದಿರಬೇಕು. ಸಮರ್ಪಕ ಕುರುಬರಾಗಿ, ಅವರು ಆಯಾಸವಿಲ್ಲದವರಾಗಿ ಕುರಿಗಳನ್ನು ಕಾಪಾಡುವದಕ್ಕೆ ಅಪೇಕ್ಷಿಸುವರು (ಅಪೊಸ್ತಲರ ಕೃತ್ಯಗಳು 20:17, 28-30). ಸ್ವಾಭಾವಿಕವಾಗಿಯೇ, ಸಭೆಯಾಗಿ ನಿಯತಕ್ರಮದಿಂದ ಕೂಡಿ ಬರುವದು ತಮ್ಮ ಅಧೀನದಲ್ಲಿರುವ ಸದಸ್ಯರ ಆತ್ಮೀಕ ಪರಿಸ್ಥಿತಿಗಳ ಕುರಿತು ಅರಿವು ಹೊಂದಿರುವಂತೆ ಹಿರಿಯರಿಗೆ ಸಹಾಯಕವಾಗುತ್ತದೆ.

"ಹಿರಿಯರು" ಮತ್ತು "ಕುರುಬರು" ಎಂಬವುಗಳು ಒಂದೇ ಹುದ್ದೆಯನ್ನು ಸೂಚಿಸುತ್ತದೆಂಬ ವಾಸ್ತವಾಂಶವು ಅಪೊಸ್ತಲರ ಕೃತ್ಯಗಳು 20ರಲ್ಲಿ ಸಾಭಿತುಪಡಿಸಲ್ಪಟ್ಟಿದೆ. ಪೌಲನು "ಹಿರಿಯರನ್ನು" (πρεσβύτεροι, *presbuteroi*; ವ. 17) ಕರೆಸಿದನು ಮತ್ತು ಬಳಿಕ ಅವರನ್ನು "ಸಭೆಯ ಅಧ್ಯಕ್ಷರು" (ἐπίσκοποι, *episkopoi*; ವ. 28) ಎಂದು ಕರೆದನು. ಅವರ ಕುರುಬರ ಕೆಲಸವು ಪರಿಪಾಲಿಸುವದು ಮತ್ತು ಮೇಯಿಸುವದು ಎಂದು ಪ್ರಸ್ತುತಪಡಿಸಲ್ಪಟ್ಟಿದೆ (ποιμαίνω, *poimainō*; ವ. 28), ಅದು "ಸಭಾಪಾಲಕರ" ಕೆಲಸವಾಗಿತ್ತು. ಆದುದರಿಂದ "ಹಿರಿಯರು" ಮತ್ತು "ಸಭಾಧ್ಯಕ್ಷರು" "ಸಭಾಪಾಲಕ"ರೇ ಆಗಿದ್ದಾರೆ, ಇದು "ಕುರುಬರು" ಎಂಬುದಕ್ಕೆ ಲ್ಯಾಟಿನ್ ಪದವಾಗಿರುತ್ತದೆ. ಈ ಪದವನ್ನು KJVಯೊಳಗೆ ಎಫೆಸ 4:11ರಲ್ಲಿ "ಸಭಾಪಾಲಕರು" ಎಂದು ಅನುವಾದಿಸಲಾಗಿದೆ. ಹೊಸ ಒಡಂಬಡಿಕೆಯಲ್ಲಿ, ಇವೆಲ್ಲವೂ ಒಂದೇ ಹುದ್ದೆಗೆ ಅನ್ವಯವಾಗುವ ವರ್ಣನಾತ್ಮಕ ಪದವಾಗಿವೆ. ಇದು ಮತ್ತೊಂದಾವರ್ತಿ 1 ಪೇತ್ರ 5:1-4ರಲ್ಲಿ ದೃಷ್ಟಾಂತಪಡಿಸಲ್ಪಟ್ಟಿದೆ, ಅಲ್ಲಿ "ಹಿರಿಯರನ್ನು" (*presbuteroi*; ವ. 1), ಪೇತ್ರನು "ಮಂದೆಯನ್ನು ಕಾಯಿರಿ" (*poimainō*; ವ. 2) ಎಂದು ಬೇಡಿಕೊಳ್ಳುತ್ತಾನೆ, ಅದರರ್ಥವು ಮಂದೆಯನ್ನು ಮೇಯಿಸಿರಿ ಅಥವಾ ಕುರುಬನ/ಸಭಾಪಾಲಕನ ಕೆಲಸವನ್ನು ಮಾಡಿರಿ ಮತ್ತು "ಮೇಲ್ವಚಾರಣೆ" (*episkopeō*; ವ. 2) ಮಾಡಿರಿ ಎಂದಾಗಿರುತ್ತದೆ.

ಹೊಸ ಒಡಂಬಡಿಕೆಯು ಸಭಾನಾಯಕತ್ವಕ್ಕೆ ಒಂದು ನಮೂನೆಯನ್ನು ಸ್ಪಷ್ಟವಾಗಿ ಮುಂದಿಡುತ್ತದೆ. ಅಪೊಸ್ತಲರ ಕೃತ್ಯಗಳು 14:23 ಹೇಳುವದೇನೆಂದರೆ ಪ್ರತಿಯೊಂದು ಸಭೆಗೆ ಹಿರಿಯರು ನೇಮಿಸಲ್ಪಟ್ಟರು. ಎಫೆಸದ ಸಭೆಯಲ್ಲಿ ಹಿರಿಯರು ಸೇವೆಯನ್ನು ಮಾಡುತ್ತಿದ್ದರು ಎಂಬುದನ್ನು ಅಪೊಸ್ತಲರ ಕೃತ್ಯಗಳು 20:17, 28-30 ಸೂಚಿಸುತ್ತದೆ. ಫಿಲಿಪ್ಪಿಯದಲ್ಲಿನ ಸಭೆಯು "ಮೇಲ್ವಿಚಾರಕರನ್ನು" ("ಹಿರಿಯರು") ಮತ್ತು "ಸಭಾ ಸೇವಕರನ್ನು" ಹೊಂದಿತ್ತು (ಫಿಲಿಪ್ಪಿ 1:1). ಅವರ ಅರ್ಹತೆಗಳನ್ನು 1 ತಿಮೊಥೆ 3:1-12ರಲ್ಲಿ ಮತ್ತು ತೀತನಿಗೆ 1:5-9ರಲ್ಲಿ ಪಟ್ಟಿ ಮಾಡಲಾಗಿರುತ್ತದೆ. ವಿವಿಧ ಧಾರ್ಮಿಕ ಗುಂಪುಗಳು ತಮ್ಮ ಸಂಸ್ಥೆಯ ವ್ಯವಸ್ಥೆಗಳಲ್ಲಿ ಭಿನ್ನಾಭಿಪ್ರಾಯ ಹೊಂದಿರುತ್ತವೆ, ಆದರೆ ಶಾಸ್ತ್ರಗಳು ಏನು ಕಲಿಸುತ್ತವೋ ಅದನ್ನೇ ನಾವು ಅನುಸರಿಸಬೇಕು. ನಾವು ಪ್ರತಿಯೊಂದು ಸಭೆಗಾಗಿ ಸ್ವತಂತ್ರವಾದ ರೀತಿಯಲ್ಲಿ ಹಿರಿಯರನ್ನು ಮೇಲ್ವಚಾರಕನಾಗಿರುವ ನಮೂನೆಯನ್ನು ಪರಿಷ್ಕರಿಸುವದಾದರೆ, ಶಾಸ್ತ್ರಗಳಲ್ಲಿರುವ ಯಾವದಕ್ಕೇ ಆಗಲಿ ಒಂದು ನಮೂನೆಯ ಅಧಿಕಾರವನ್ನು ಸ್ಥಾಪಿಸುವದಕ್ಕೆ ಸಾಧ್ಯ? ಪ್ರಮುಖ

ತೀರ್ಮಾನಗಳನ್ನು ಮಾಡುವದರಲ್ಲಿ ಹಿರಿಯರು ಅಪೊಸ್ತಲರ ಸಂಗಡ ಭಾಗಿಯಾಗುತ್ತಿದ್ದರು (ಅಪೊಸ್ತಲರ ಕೃತ್ಯಗಳು 15:6, 22, 23). ಯುದಾಯದಲ್ಲಿ ಆಡಳಿತವನ್ನು ನಡಿಸುವದಕ್ಕೆ ಹಿರಿಯರು ಹಣವನ್ನು ಸ್ವೀಕರಿಸಿಕೊಂಡರು, ಹೊರತು ಯಾವದೋ ಪೂರ್ವಜರ ಸಂಸ್ಥೆಯೊಂದಲ್ಲ (ಅಪೊಸ್ತಲರ ಕೃತ್ಯಗಳು 11:27-30). ಸಭೆಯ ಪರವಾಗಿ ಅದರ ಕೆಲಸವನ್ನು ಮಾಡುವಂಥ ಸಭೆಗೆ ಸಂಬಂಧಿಸಿದ ಯಾವದೇ ಸಂಸ್ಥೆಯ ಬ್ಗಗೆ ಹೊಸ ಒಡಂಬಡಿಕೆಯು ಮಾತಾಡುವದಿಲ್ಲ.

ಈ ಪತ್ರಿಕೆಯನ್ನು ಸ್ವೀಕರಿಸಿಕೊಂಡವರು ಸ್ವತಃ ಹಿರಿಯತ್ವದಲ್ಲಿ ಭಾಗವಾಗಿರಲಿಲ್ಲ; ತಮ್ಮ ಹಿರಿಯರಿಗೆ “ವಿಧೇಯರಾಗಿರಿ” ಮತ್ತು **ಅಧೀನರಾಗಿರಿ** ಎಂದು ಅವರನ್ನು ಬೇಡಿಕೊಳ್ಳಲಾಯಿತು. “ವಿಧೇಯರಾಗಿರಿ” (ಮಾತನ್ನು ಕೇಳಿರಿ; πείθω, *peithō*) ಎಂಬುದರ ಅರ್ಥವು “ಮನವೊಲಿಸು,” “ಶಾಂತಗೊಳಿಸು,” ಅಥವಾ “ರಾಜಿಮಾಡು” ಎಂದು ಸಹ ಎಂದಾಗಿರುತ್ತದೆ. “ವಿಧೇಯರಾಗಿರಿ” ಎಂಬ ಆಜ್ಞೆಯು “ಅಧೀನರಾಗಿರಿ” (ὑπείκω, *hupeikō*) ಎಂದು ಹೇಳುವ ಮೂಲಕ ಬಲವರ್ಧಿಸಲ್ಪಟ್ಟಿರುತ್ತದೆ, ಅದರರ್ಥವು “ಒಳಗಾಗು,” ಇನ್ನು ಮೇಲೆ “ವಿರೋಧಿಸಬೇಡ,” ಅಥವಾ “ಶರಣಗತನಾಗು” ಎಂದಾಗಿರುತ್ತದೆ. ಕೆಲವು ಧಾರ್ಮಿಕ ಗುಂಪುಗಳು ಸಭೆಗಳಿಗೆ ನಾಯಕತ್ವದ ಅಧಿಕಾರವನ್ನು ಕೊಡುತ್ತವೆ, ಅದು ಹೊಸ ಒಡಂಬಡಿಕೆಯ ಸಿದ್ಧಾಂತದಿಂದ ಹಿಮ್ಮುಖವಾಗಿ ಹೋಗುವಂತಿರುತ್ತದೆ. ಖಂಡಿತವಾಗಿಯೂ, ಅಭಿಪ್ರಾಯದ ವಿಷಯಗಳಲ್ಲಿ ಹಿರಿಯರು ತಮ್ಮ ಕೆಲಸ ಕುರಿತಾಗಿ ಸಲಹೆಗಳನ್ನು ಕೇಳಬೇಕು. ಹೇಗೂ, “ಅವರು ದೈವೋಕ್ತಿಗಳನ್ನು ಉಪದೇಶಿಸುವಾಗ, ಯೇಸುವಿಗೆ ನಂಬಿಗಸ್ತರಾಗಿರುವಂತೆ ಬೇಡಿಕೊಳ್ಳುವಾಗ, ಅವರ ಮಾರ್ಗದರ್ಶನದ ಪರವಾಗಿ ನಮ್ಮ ವಿರುದ್ಧವಾದ ಅಭಿಪ್ರಾಯಗಳನ್ನು ಕೊಡುವವರಾಗುತ್ತೇವೆ. ರೂಢಿಯಾಗಿ ಒಪ್ಪಿಸಿಕೊಳ್ಳುವಿಕೆಯು (ವರ್ತಮಾನಕಾಲ ಆಜ್ಞಾರ್ಥಕ) ಆಜ್ಞಾಪಿಸಲಾಗಿರುವಂಥ ಸಂಗತಿಯಾಗಿದೆ.”[46] “ವಿಧೇಯರಾಗಿರಿ” ಮತ್ತು “ಅಧೀನರಾಗಿರಿ” ಎಂಬವುಗಳು ಅಸಡ್ಡೆ ಮಾಡಲು ಸಾಧ್ಯವಿಲ್ಲ ಎರಡು ಪದಗಳಾಗಿರುತ್ತವೆ.

ಹಿರಿಯರು ಸಭೆಯ ಮಧ್ಯದಲ್ಲಿ ಜೀವಿಸುವವರು ಮತ್ತು ಕೆಲಸ ಮಾಡುವ ವ್ಯಕ್ತಿಗಳಾಗಿದ್ದಾರೆ, ಹೊರತು ಯಾವದೋ ದೂರದಲ್ಲಿರುವ ಕಛೇರಿಯಲ್ಲಿನ ಆಡಳಿತ ಅಧಿಕಾರಿಗಳಲ್ಲ. ಅವರು ಸಹೋದರರನ್ನು ವಿಸ್ಮಯಗೊಳಿಸುವದಕ್ಕೆ ಬರುವ ಅತಿಥಿ ಬೋಧಕರಷ್ಟು ಅಥವಾ ಪರಿಣಿತರಷ್ಟು ಪ್ರಭಾವಶಾಲಿ ಆಗಿರುವಂತೆ ತೋರದಿರಬಹುದು, ಆದರೆ ಅವರ ಕೆಲಸಕ್ಕೆ ಅವಶ್ಯಕವಾದದ್ದು ಹಾಗೂ ದೀನವಾದದ್ದೆಂದು ಪ್ರತಿಫಲ ಸಿಕ್ಕುವದು (1 ಪೇತ್ರ 5:1-5).

LXXವು “ಅಧಿಕಾರ ಹೊಂದಿರುವವರನ್ನು” ಸೂಚಿಸುವದಕ್ಕೆ “ನಾಯಕರು” (ἡγέομαι, *hēgeomai*) ಎಂಬ ಪದವನ್ನು ಬಳಸುತ್ತದೆ. ಕೆಲ ಅಧಿಕೃತ ಅಧಿಕಾರಿಯನ್ನು ಇಲ್ಲಿ ಪರೋಕ್ಷವಾಗಿ ಸೂಚಿಸಲಾಗಿದೆ, ಆದರೆ ಯಾವದೇ ನಿರ್ದಿಷ್ಟವಾದ ಹುದ್ದೆಯನ್ನು ಹೆಸರಿಸಲಾಗಿರುವದಿಲ್ಲ. ಶಾಸ್ತ್ರೀಯವಾದ ಬಳಕೆಯಲ್ಲಿ *episkopoi* (“ಮೇಲ್ವಿಚಾರಕರು” ಅಥವಾ “ಸಭಾಧ್ಯಕ್ಷರು”) ಎಂಬವರು ಅಥೇನೆಯಿಂದ ಅವರ ಅಡಿಯಾಳುಗಳ ಬಳಿಗೆ ಸಭೆಯ, ರಾಜ್ಯದ, ಮತ್ತು ಆಡಳಿತದ ಅಧೀನದಲ್ಲಿದ್ದ ಪಟ್ಟಣಗಳಲ್ಲಿನ ವಾಣಿಜ್ಯ ಚಟುವಟಿಕೆಗಳ ಮೇಲ್ವಿಚಾರಣೆ ಮಾಡುವದಕ್ಕಾಗಿ ಕಳುಹಿಸಲ್ಪಟ್ಟ ರಾಜಕೀಯ ಅಧಿಕಾರಿಗಳಾಗಿದ್ದರು.

ಸಭೆಯ ಪ್ರತಿಯೊಬ್ಬ ಸದಸ್ಯನು ಅವನು ಅಥವಾ ಅವಳು ಆತ್ಮೀಕ ಮೇಲ್ವಿಚಾರಕರ ಅಧೀನದಲ್ಲಿರಲು ಸಾಧ್ಯವಿರುವ ಸಭೆಯಲ್ಲಿರುವದಕ್ಕೆ ಬಯಸುತ್ತಾರೆ. ಇದರರ್ಥವು ನಾಯಕರು ದಾರಿ ತಪ್ಪುತ್ತಿದ್ದರೂ ಒಬ್ಬನು ಅಂಧವಾಗಿ ವಿಧೇಯನಾಗುವದನ್ನು ಮುಂದುವರೆಸಬೇಕೆಂದು ಆಗಿರುವದಿಲ್ಲ. **ಕಾಯುವವರಾಗಿದ್ದಾರೆ** (ἀγρυπνέω, *agrupneō*) ಎಂಬ ಪದವು *episkopein*

ಎಂಬುದಕ್ಕೆ ತದ್ವಿರುದ್ಧವಾಗಿ "ಒಂದು ಸಮುದಾಯದ ಮೇಲ್ವಿಚಾರಣೆ ಮಾಡುವದು ಎಂಬುದಕ್ಕಿರುವ ಒಂದು ತಾಂತ್ರಿಕ ಪದವಾಗಿರುವದಿಲ್ಲ, ಆದರೆ ಬರಲಿರುವ ನ್ಯಾಯತೀರ್ಪನ್ನು ದೃಷ್ಟಿಯಲ್ಲಿಟ್ಟುಕೊಂಡು ಎಚ್ಚರಿಕೆಯಾಗಿರಿ ಎಂದು ಬುದ್ಧಿವಾದ ಹೇಳುವದು ಎಂಬುದಕ್ಕೆ ಬಳಸಲ್ಪಡುತ್ತಿದ್ದ ಸಾಮಾನ್ಯ ಪದವಾಗಿತ್ತು (ಮಾರ್ಕ 13:33; ಲೂಕ 21:36; cf. ಎಫೆಸ 6:18)."[47] ಮನಸ್ಸಿನಲ್ಲಿ ನಿತ್ಯತ್ವವನ್ನು ಇಟ್ಟುಕೊಂಡವರಾಗಿ, "ನಾಯಕರು" **ಆತ್ಮಗಳನ್ನು ಕಾಯುವವರಾಗಿ** ಇರಬೇಕಿತ್ತು. ಇದು ನಮ್ಮ ಆತ್ಮಗಳನ್ನು ಸರಿಯಾದ ಪಥದಲ್ಲಿಡುವದಕ್ಕೆ ಒಂದು ರೀತಿಯ ಬಲವರ್ಧಿಸುವಿಕೆಯ ಅವಶ್ಯಕತೆಯಿದೆ ಎಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ!

"ಕಾಯುವವಾಗಿರಿ" ಎಂಬ ಪದವು ನಿದ್ದೆಯು ನಷ್ಟವಾಗುವಂತೆ ಮಾಡುವಂಥಹ ರೀತಿಯಲ್ಲಿ ಎಚ್ಚರದಿಂದ ಇರುವಿಕೆಗೆ ಅನ್ವಯವಾಗಬಲ್ಲದು.[48] ಈ ಹಂತದ ವರೆಗೂ ತಲುಪುವ ಕಳಕಳಿಯುಳ್ಳ ಹಿರಿಯರು ಸಹೋದರರನ್ನು ದಾರಿ ತಪ್ಪಿಸುವಂತೆ ನಡಿಸಬಲ್ಲ ಸುಳ್ಳು ಬೋಧಕರಿಂದ ಸಭೆಯನ್ನು ಕಾಪಾಡಿರಿ ಎಂಬ ಪೌಲನ ಬುದ್ಧಿವಾದವನ್ನು ಅನುಸರಿಸುವವರಾಗಿದ್ದಾರೆ (ನೋಡಿರಿ ಅಪೊಸ್ತಲರ ಕೃತ್ಯಗಳು 20:28-31). ಅವರು "ಆತ್ಮಗಳನ್ನು" (ψυχή, *psuchē*), ಅಂದರೆ, ವ್ಯಕ್ತಿಗಳನ್ನು "ಕಾಯುವವರಾಗಿದ್ದಾರೆ."

ಪ್ರತಿಯೊಂದು ಸಭೆಯ ಗುರಿಯು ಹಿರಿಯನನ್ನು ಸಂತೋಷದಿಂದ ಕೆಲಸ ಮಾಡುವಂತೆ ಮಾಡುವದೇ ಆಗಿರಬೇಕು. ಅವರು ಪ್ರಧಾನ ಕುರುಬನಿಗೆ **ಲೆಕ್ಕವನ್ನು ಒಪ್ಪಿಸುವ** ವೇಳೆ (1 ಪೇತ್ರ 5:4), ಅವರು ಪ್ರತಿಯೊಬ್ಬ ಸದಸ್ಯನ ಕುರಿತು ಹೀಗೆ ಹೇಳುವದಕ್ಕೆ ಶಕ್ತರಾಗಬೇಕೆಂದು ಬಯಸುವೆವು, "ಈ ಕ್ರೈಸ್ತನು ಅಂತ್ಯದ ವರೆಗೂ ಒಳ್ಳೇಯವನು ಮತ್ತು ನಂಬಿಗಸ್ತನಾಗಿದ್ದನು." ಯೋಹಾನನು ಹೀಗೆ ಹೇಳಿದನು, "ನನ್ನ ಮಕ್ಕಳು ಸತ್ಯವನ್ನನುಸಿರಿ ನಡೆಯುವವರಾಗಿದ್ದಾರೆಂದು ಕೇಳುವದಕ್ಕಿಂತ ಹೆಚ್ಚಾದ ಸಂತೋಷವು ನನಗಿಲ್ಲ" (3 ಯೋಹಾನ 4). ಥೆಸಲೋನಿಕದಲ್ಲಿ ಪರಿವರ್ತನೆಗೊಂಡಿದ್ದವರ ಕುರಿತಾಗಿ ಪೌಲನು ಅದೇ ವಿಧದಲ್ಲಿ ಭಾವಿಸಿಕೊಂಡಿದ್ದನು (1 ಥೆಸಲೋನಿಕ 2:19, 20). ನಂಬಿಕೆಯ ವಿಷಯದಲ್ಲಿ ತನಗೆ ಮಕ್ಕಳಾಗಿರುವವರು ಆತನಿಗೆ "ಉತ್ಸಾಹ ಉಂಟಾಗುವದಕ್ಕೆ" ಕಾರಣರೆಂದು ಹೇಳುತ್ತಾನೆ (ಫಿಲಿಪ್ಪಿ 2:16).

ನಮ್ಮ ಹಿರಿಯರು ಯಾರೊಬ್ಬನ ವಿಷಯವಾಗಿಯೂ ಹೀಗೆ ಹೇಳುವದಕ್ಕೆ ಬಯಸುವಂತಾಗುವದು ನಮಗೆ ಇಷ್ಟವಿಲ್ಲ, "ನಮ್ಮನ್ನು ಕ್ಷಮಿಸು ತಂದೆಯೇ, ನಾವು ಮಾಡಿದ ಯಾವ ಪ್ರಯತ್ನಗಳೂ ಅವರನ್ನು ತಿರಿಗಿ ನೆಲೆಗೊಳಿಸುವದಕ್ಕೆ ಸಾಧ್ಯವಾಗಲಿಲ್ಲ."[49] ಅಪನಂಬಿಗಸ್ತ ಕ್ರೈಸ್ತನು **ಪ್ರಯೋಜನಕರವಾದವನಲ್ಲ** ಎಂಬುದು ಬಹುಶಃ ಒಂದು ತಗ್ಗುನುಡಿಯಾಗುತ್ತದೆ (ಇಬ್ರಿಯ 10:31; 12:29 ಪರಿಗಣಿಸಿರಿ). ಫಲಕೊಡದವನು ಮತ್ತು ಅಪನಂಬಿಗಸ್ತನು ಆಗಿರುವವನು ಹಿರಿಯರಿಗೆ ವ್ಯಸನವನ್ನುಂಟು ಮಾಡುತ್ತಾನೆ, ಸಹೋದರರಿಗೆ ಸಂಭಾವ್ಯ ಅಪಾಯವನ್ನು, ಮತ್ತು ತನ್ನ ಮೇಲೆ ನಿತ್ಯವಾದ ನಷ್ಟವನ್ನು ಬರ ಮಾಡುತ್ತಾನೆ.

**ವಚನಗಳು 18, 19.** ಲೇಖಕನು 18ರಿಂದ 21 ವಚನಗಳಲ್ಲಿ **ನಮಗೋಸ್ಕರ** ಮತ್ತು **ನಾವು** ಎಂದು ಮಾತಾಡಿದನು. ಇದೊಂದು ನಿಜವಾಗಿಯೂ ಬಹುವಚನವಾಗಿದ್ದರೆ (ಮತ್ತು ಸಂಪಾದಕೀಯವಾದ "ನಾವು" ಎಂದಾಗಿಲ್ಲವಾದರೆ), ಈ ಪ್ರಕರಣಗ್ರಂಥವನ್ನು ಬರೆಯುವದರಲ್ಲಿ ಬೇರೆಯವರು ಭಾಗಿಯಾಗಿದ್ದರೆಂಬುದನ್ನು ಅದು ತೋರಿಸುತ್ತದೆ. ನಾವು 19 ಮತ್ತು 22 ವಚನಗಳಲ್ಲಿ ಪುನಃ ಪ್ರಥಮ ಪುರುಷ ಏಕವಚನವನ್ನು ಕಾಣುತ್ತೇವೆ. ಇಬ್ರಿಯರಿಗೆ ಪತ್ರಿಕೆಯ ಪ್ರಥಮ ವಾಚಕರು ಲೇಖಕನನ್ನು ಪರಿಚಯವನ್ನು ಹೊಂದಿದ್ದರೆಂಬುದು ಸ್ಪಷ್ಟವಾಗಿರುತ್ತದೆ. ಈತನು ತಿಳಿಯಪಡಿಸಬೇಕೆಂದು ದೇವರು ಬಯಸಿದ ಸಂದೇಶವನ್ನು ಹೇಳಿದವನಾಗಿ, ಈಗ ಲೇಖಕನ ಮನಸ್ಸಾಕ್ಷಿಯು ಶುದ್ಧವಾಗಿತ್ತು. ಆತನು ವಾಚಕರಿಗೆ ಎದುರಾಗಲಿರುವ ಅಪಾಯದ

ಕುರಿತು ಅವರನ್ನು ಪದೇ ಪದೇ ಎಚ್ಚರಿಸಿದನು, ಆದರೆ ಆತನಿಗೆ ಸಹ ಅವರ ಸಹಾಯದ ಅಗತ್ಯವಿತ್ತು.

ವಾಚಕರಿಗೆ ಎರಡು ಸಂಗತಿಗಳ ವಿಷಯದಲ್ಲಿ ಗಮನವನ್ನು ಕೊಡುವಂತೆ ಕರೆಯಲಾಯಿತು. ಮೊದಲನೆಯದಾಗಿ, ಅವರು ಆತನಿಗೋಸ್ಕರ **ಪ್ರಾರ್ಥಿಸ**ಬೇಕು (ಅಥವಾ ಕಾಲರೂಪವು ಪರೋಕ್ಷವಾಗಿ ಸೂಚಿಸುವಂತೆ "ಪ್ರಾರ್ಥಿಸುತ್ತಲಿರಬೇಕು"; ವ. 18) ಎಂದು ಬೇಡಿಕೊಂಡನು. **ಬಹು ವಿಶೇಷವಾಗಿ** (ವ. 19) ಎಂಬುದು ಅವರು ಈಗಾಗಲೆ ಪ್ರಾರ್ಥನೆ ಮಾಡುತ್ತಲಿದ್ದರೆಂಬುದನ್ನು ಸೂಚಿಸುತ್ತದೆ. ಎರಡನೆಯದಾಗಿ, ತನ್ನ **ಮನಸ್ಸಾಕ್ಷಿ**ಯನ್ನು ಗಮನಿಸಿರಿ ಎಂದು ಅವರನ್ನು ಬೇಡಿಕೊಂಡನು, ಆತನು ಅವರೊಂದಿಗೆ ಪ್ರಾಮಾಣಿಕವಾಗಿ ವ್ಯವಹರಿಸಿದ್ದಕ್ಕೆ ಪುರಾವೆಯಾಗಿ ಮುಂದಿಟ್ಟನು (ನೋಡಿರಿ ರೋಮಾ 9:1; 2 ಕೊರಿಂಥ 1:12; 6:3). ಆತನು ಅವರೊಂದಿಗೆ **ಎಲ್ಲಾ ವಿಷಯಗಳಲ್ಲಿ ಸಜ್ಜನ**ನಾಗಿ ನಡೆದುಕೊಂಡಿದ್ದನು, ಆತನು ಅವರ ಪ್ರಾರ್ಥನೆಗಳಿಗೆ ಯೋಗ್ಯನಾಗಿದ್ದನು. ಆತನ ಹೃದಯದಲ್ಲಿ, ತಾನು ತನ್ನ ಕರ್ತವ್ಯವನ್ನು ಮಾಡಿದ್ದೇನೆಂದು ಬಲ್ಲವನಾಗಿದ್ದನು. ಪೌಲನು ಅನೇಕ ಸಾರಿ ತನ್ನ ಪತ್ರಿಕೆಯ ಅಂತ್ಯದಲ್ಲಿ ಪ್ರಾರ್ಥನೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದನು (ರೋಮಾ 15:30; ಎಫೆಸ 6:18, 19; ಕೊಲೊಸ್ಸೆ 4:3; 1 ಥೆಸಲೋನಿಕ 5:25; 2 ಥೆಸಲೋನಿಕ 3:1). ಇದು ನಿಶ್ಚಯವಾಗಿಯೂ ಮೊದಲ ಶತಮಾನದ ದೇವಮನುಷ್ಯನು ಮಾಡಿಕೊಳ್ಳುತ್ತಿದ್ದ ಸ್ವಾಭಾವಿಕವಾದ ಮನವಿಯಾಗಿರುತ್ತಿತ್ತು.

ಲೇಖಕನು ಇಬ್ರಿಯ ಕ್ರೈಸ್ತರ ಕಡೆಗೆ ಕಪಟವನ್ನೇನೂ ಹೊಂದಿರಲಿಲ್ಲ, ಯಾಕೆಂದರೆ ಆತನು ಮುಚ್ಚುಮರೆಯಿಲ್ಲದೆ ಅವರನ್ನು ಬರಲಿರುವ ಅಪಾಯದ ಬಗ್ಗೆ ಎಚ್ಚರಿಸಿದ್ದನು. ಅಲ್ಲದೆ ಆತನು ಅವರಿಗೆ ಯೆಹೂದಿಮತಕ್ಕೆ ಮತ್ತು ಅದರ ಯಜ್ಞಗಳ ವ್ಯವಸ್ಥೆಗೆ ಬರಲಿದ್ದ ಅಂತ್ಯವನ್ನು ಕುರಿತು ಸಹ ತಿಳಿಸಿದ್ದನು. ಮಾತಾಡುವವನ ಸತ್ಯವಂತಿಕೆಯ ಕುರಿತಾಗಿ ಅವರ ಮನಸ್ಸುಗಳಲ್ಲಿ ಒಂದು ವಿಧವಾದ ಸಂಶಯವು ಇದ್ದಿರಬಹುದಾಗಿದೆ, ಇಲ್ಲವಾದರೆ ಆತನು ತನ್ನನ್ನು ಸಮರ್ಥಿಸಿಕೊಂಡು ಮಾತಾಡುವ ಅಗತ್ಯವೂ ಇರುತ್ತಿರಲಿಲ್ಲ.

ಲೇಖಕನು ಈ ಸಹೋದರರಲ್ಲಿ ಮತ್ತು ಅವರ ಪ್ರಾರ್ಥನೆಗಳಲ್ಲಿ ದೃಢವಿಶ್ವಾಸವನ್ನು ವ್ಯಕ್ತಪಡಿಸುತ್ತಾನೆ. ಆತನು ಅವರ ಬಳಿಗೆ **ತಿರಿಗಿ ಬಂದೇನು** ಎಂದು ನಿರೀಕ್ಷೆ ಹೊಂದಿದ್ದನು (ವ. 19). ಆತನು ಸೆರೆಮನೆಯಲ್ಲಿದ್ದನೋ? ಅವರನ್ನು ಭೇಟಿಯಾಗುವಂತೆ ಹಿಂದಿರುಗುವದಕ್ಕೆ ಆತನಿಗೆ ಅಭ್ಯಂತರ ಉಂಟು ಮಾಡಲ್ಪಟ್ಟಿತ್ತೋ — ಬಹುಶಃ ಸೈತಾನನಿಂದ (1 ಥೆಸಲೋನಿಕ 2:18)? ಒಂದು ಸೆರೆವಾಸದ ಕಾಲವು ಸಂಭಾವ್ಯ ವಿವರಣೆಯಂತೆ ತೋರುತ್ತದೆ. ಇಸ್ರಾಯೇಲ್ಯರ ಪ್ರತಿಯೊಬ್ಬ ಮಗುವಿಗೆ, ಯೆರೂಸಲೇಮ್ "ನಿವಾಸ" ಆಗಿತ್ತು, ಅವರ ಕನಸುಗಳ ದೇಶವಾಗಿತ್ತು. ಪೌಲನು ತನ್ನ ಎರಡನೆಯ ಸೆರೆವಾಸದ ವೇಳೆಯಲ್ಲಿ, ತಾನು ರೋಮಾಪುರದಿಂದ ಜೀವಂತವಾಗಿ ಹೊರಡುವದಿಲ್ಲ ಎಂಬುದನ್ನು ಅರಿತುಕೊಳ್ಳುವ ಮುಂಚೆಯೇ, ಅಂತಹ ಹೇಳಿಕೆಯನ್ನು ನೀಡಿರುತ್ತಿದ್ದನು (2 ತಿಮೊಥೆ 4:6-8ರಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿರುವ ಪ್ರಕಾರ). ಆತನು ಗಮಲಿಯೇಲನ ಅಧೀನದಲ್ಲಿ ಯೆರೂಸಲೇಮಿನೊಳಗೆ ಪರಿಪಕ್ವಗೊಂಡಿದ್ದನು, ಆದಾಗ್ಯೂ ಆ ಮಹಾನ್ ಪಟ್ಟಣವು ಆತನಿಗೆ ಒಂದು ಎರಡನೆಯ ನಿವಾಸವಾಗಿತ್ತು.

ಪ್ರಾರ್ಥನೆಗಳನ್ನು ಮಾಡುವಂತೆ ಮನವಿ ಮಾಡಿಕೊಳ್ಳುವದು ಹೊಸ ಒಡಂಬಡಿಕೆಯ ದೇವಜನರ ವಿಷಯದಲ್ಲಿ ನಿಶ್ಚಯವಾಗಿಯೂ ಸಹಜವಾದ ಸಂಭವವಾಗಿರುತ್ತಿತ್ತು, ಆದರೆ ಇದು ಪೌಲನು ಈ ರೂಢಿಯನ್ನು ಅತ್ಯಧಿಕವಾಗಿ ಹೊಂದಿದ್ದನು.[50] ಫಿಲೆಮೋನನ ಪ್ರಾರ್ಥನೆಗಳ ಕಾರಣದಿಂದ ತಾನು ಸಹೋದರರನ್ನು ಶೀಘ್ರದಲ್ಲಿಯೇ ನೋಡುವೆನೆಂದು ಆತನು ನಂಬಿದ್ದನು (ಫಿಲೆಮೋನ 22). ಸ್ಪಷ್ಟವಾಗಿರುವ ಪ್ರಕಾರ, ಆತನಿಗೆ ದೇವರಿಂದ ಅನುಗ್ರಹದ ಕ್ರಿಯೆಯ

ಅಗತ್ಯವಿರುತ್ತಿತ್ತಾದರೂ, ಅದರಲ್ಲಿ ಯಾವದೇ ಅದ್ಭುತವು ಇರಲಿಲ್ಲ. ಇಬ್ರಿಯರಿಗೆ ಪತ್ರಿಕೆಯ ಲೇಖಕನಿಗೆ ಅಪೊಸ್ತಲರ ಕೃತ್ಯಗಳು 12ರಲ್ಲಿ ಪೇತ್ರನು ಮತ್ತು ಅಪೊಸ್ತಲರ ಕೃತ್ಯಗಳು 5:18-21ರಲ್ಲಿ ಅಪೊಸ್ತಲರು ಅದ್ಭುತಕರವಾದ ರೀತಿಯಲ್ಲಿ ಬಿಡುಗಡೆಗೊಳಿಸಲ್ಪಟ್ಟಿದ್ದನ್ನು ಬಲ್ಲವನಾಗಿದ್ದಿರಬೇಕು, ಆದರೆ ತನ್ನ ಅಥವಾ ವಾಚಕರ ಪ್ರಾರ್ಥನೆಗಳಿಗೆ ಆ ವಿಧವಾದ ಒಂದು ಪ್ರತ್ಯುತ್ತರವನ್ನು ಆತನು ಎದುರು ನೋಡಿದನು ಎಂಬುದಕ್ಕೆ ಯಾವದೇ ಪುರಾವೆ ಇರುವದಿಲ್ಲ. ಆತನು ಸೆರೆಗೆ ಹಾಕಲ್ಪಟ್ಟಿರಲಿಲ್ಲ ಮತ್ತು ತಿಮೊಥೆಯನು ಬಿಡುಗಡೆಗೊಳಿಸಲ್ಪಟ್ಟಿದ್ದಾನೆ ಎಂಬುದನ್ನು ತಿಳಿದಿದ್ದನಾದರೆ (ವ. 23), ತಾವಿಬ್ಬರೂ ಈ ಇಬ್ರಿಯ ಸಹೋದರರನ್ನು ಒಟ್ಟಾಗಿ ಭೇಟಿ ಮಾಡಬಹುದೆಂದು ನಿರೀಕ್ಷಿಸಿಕೊಂಡಿರಬಹುದಾಗಿದೆ. ಆತನು ಪತ್ರಿಕೆಯನ್ನು ವೈಯಕ್ತಿಕವಾಗಿ ತಲುಪಿಸುವದಾದರೆ ಅನೇಕ ಕಾರ್ಯಗಳನ್ನು ವಿವರಿಸುವದಕ್ಕೆ ಶಕ್ತನಾಗುತ್ತಿದ್ದನು.

## ದೇವರ ಸಮೀಪಕ್ಕೆ ಬನ್ನಿರಿ ಮತ್ತು ಸಹೋದರರನ್ನ ಸಂಧಿಸಿರಿ (13:20-25)

**20ಶಾಶ್ವತವಾದ ಒಡಂಬಡಿಕೆಯನ್ನು ನಿಶ್ಚಯಪಡಿಸುವದಕ್ಕಾಗಿ ತನ್ನ ರಕ್ತವನ್ನು ಸುರಿಸಿಕೊಂಡು ಸಭೆಯೆಂಬ ಹಿಂಡಿಗೆ ಮಹಾಪಾಲಕನಾಗಿರುವ ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಬರಮಾಡಿದ ಶಾಂತಿದಾಯಕನಾದ ದೇವರು, 21ನೀವು ತನ್ನ ಚಿತ್ತವನ್ನು ನೆರವೇರಿಸುವ ಹಾಗೆ ಸಕಲ ಸತ್ಕಾರ್ಯಗಳಿಗೆ ಬೇಕಾದ ಅನುಕೂಲತೆಯನ್ನು ನಿಮಗೆ ಅನುಗ್ರಹಿಸಲಿ. ಆತನು ಯೇಸು ಕ್ರಿಸ್ತನ ಮೂಲಕ ತನಗೆ ಸಮರ್ಪಕವಾದದ್ದನ್ನು ನಮ್ಮಲ್ಲಿ ನಡಿಸಲಿ. ಯುಗಯುಗಾಂತರಗಳಲ್ಲಿಯೂ ಆತನಿಗೆ ಸ್ತೋತ್ರ. ಆಮೆನ್.**

**22ಸಹೋದರರೇ, ಈ ಎಚ್ಚರಿಕೆಯ ಮಾತನ್ನು ಸಹಿಸಿಕೊಳ್ಳಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ; ನಿಮಗೆ ಸಂಕ್ಷೇಪವಾಗಿ ಬರೆದಿದ್ದೇನೆ.**

**23ನಮ್ಮ ಸಹೋದರನಾದ ತಿಮೊಥೆಯನಿಗೆ ಬಿಡುಗಡೆಯಾಯಿತೆಂಬದು ನಿಮಗೆ ತಿಳಿದಿರಲಿ. ಅವನು ಬೇಗ ಬಂದರೆ ನಾನೂ ಅವನೊಂದಿಗೆ ಬಂದು ನಿಮ್ಮನ್ನು ಕಾಣುವೆನು.**

**24ನಿಮ್ಮ ಸಭಾನಾಯಕರೆಲ್ಲರಿಗೂ ದೇವಜನರೆಲ್ಲರಿಗೂ ವಂದನೆ ಹೇಳಿರಿ. ಇತಾಲ್ಯ ದೇಶದಿಂದ ಬಂದವರು ನಿಮಗೆ ವಂದನೆ ಹೇಳುತ್ತಾರೆ.**

**25ಕೃಪೆಯು ನಿಮ್ಮೆಲ್ಲರೊಂದಿಗೆ ಇರಲಿ.**

ಈ ಲೇಖಕನು ತನ್ನ ವಾಚಕರಿಗೆ ನೀಡಿದ ಅಂತಿಮವಾದ ಮಾತುಗಳಾವವು? ಆತನು ಹಳೆಯ ಮತ್ತು ಹೊಸ ಹಾಗೂ ಸಜೀವ ಧರ್ಮಶಾಸ್ತ್ರಗಳ ನಡುವಿನ ವ್ಯತ್ಯಾಸದ ವಿಷಯದಲ್ಲಿ ಅವರನ್ನು ಒಂದು ಆಳವಾದ ಮತ್ತು ಸಮಗ್ರವಾದ ಅಧ್ಯಯನದಲ್ಲಿ ನಡಿಸಿದ್ದನು. ಈಗ ಅವರಿಗೆ ವಿದಾಯ ಹೇಳುವ ಸಮಯವಾಗಿತ್ತು. ಆತನು ಸ್ತೋತ್ರ, ಬುದ್ಧಿವಾದ, ಮತ್ತು ಸಂತೋಷ ಪಡುವದರೊಂದಿಗೆ ಮುಕ್ತಾಯಗೊಳಿಸುತ್ತಾನೆ.

**ವಚನ 20.** ತನಗೋಸ್ಕರ ಅವರು ಪ್ರಾರ್ಥನೆ ಮಾಡಬೇಕೆಂದು ಕೇಳಿಕೊಂಡ ಬಳಿಕ, ಲೇಖಕನು ಮುಂದೆ, ಅವರಿಗೋಸ್ಕರ ಪ್ರಾರ್ಥನೆ ಮಾಡುತ್ತಾನೆ. ನಿಜವಾದ ಶಾಂತಿಯನ್ನು **ಶಾಂತಿದಾಯಕನಾದ ದೇವರು** ಮಾತ್ರವೇ ಅನುಗ್ರಹಿಸಬಲ್ಲನು. ಆತನು "ಸೈತಾನನನ್ನು ನಿಮ್ಮ ಪಾದಗಳ ಕೆಳಗೆ ಹಾಕಿ ತುಳಿಸಿ ಬಿಡುವ" ದೇವರಾಗಿದ್ದಾನೆ (ರೋಮಾ 16:20). "ಶಾಂತಿದಾಯಕನಾದ ದೇವರು" ಎಂಬುದು ಹೊಸ ಒಡಂಬಡಿಕೆಯೊಳಗೆ ಇನ್ನು ಆರು ಸಾರಿ

ಬಳಸಲ್ಪಟ್ಟಿದ್ದು, ಪ್ರತಿ ಸಾರಿಯೂ ಪೌಲನೇ ಅದನ್ನು ಬಳಸಿದ್ದಾನೆ.[51] ದೇವರನ್ನು ಹೊರಗೆ ಇಡುವದಾದರೆ ಶಾಂತಿ ಇರುವದಕ್ಕೆ ಸಾಧ್ಯವಿಲ್ಲ. ಕ್ರಿಸ್ತನು ಶಿಲುಬೆಯ ಮೇಲೆ ಮರಣಿಸಿದ್ದರ ಕಾರಣದಿಂದ ಶಾಂತಿಯು ನಮಗೆ ಸಿಕ್ಕಿರುತ್ತದೆ (ಎಫೆಸ 2:14-17), ಅದು ರಾಜ್ಯ/ಸಭೆಯಲ್ಲಿ ಯೆಹೂದ್ಯರು ಮತ್ತು ಅನ್ಯಜನರ ಮಧ್ಯದಲ್ಲಿ ಸಹ ಸಮಾಧಾನವನ್ನು ತರಬಲ್ಲದು. ಯೇಸು ಕ್ರಿಸ್ತನಲ್ಲಿನ ನಂಬಿಕೆಯು ಮೂಲಕವಾಗಿ ದೇವರೊಬ್ಬನೇ ಆ ಶಾಂತಿಯನ್ನು ಸಭೆಯೆ ಅನುಗ್ರಹಿಸಬಲ್ಲನು.

ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಟ್ಟಿದ್ದ ಸಭೆಗಳೊಳಗೆ ಪಂಗಡಗಳಿದ್ದಿರ ಬಹುದಾಗಿದೆ. ಇನ್ನು ಸಂಭವಿಸಿರದ, ಅವರ ಸಂಭಾವ್ಯ ಮತಭ್ರಷ್ಟತೆಯು ಕ್ರಿಸ್ತನು ಕೊಡುವದಕ್ಕೆ ಬಂದ ಆ ಸಂಗತಿಯನ್ನೇ – ಶಾಂತಿಯೊಂದಿಗೆ ಕೂಡಿದ ಅವರ ಆತ್ಮಗಳ ರಕ್ಷಣೆ – ನಾಶಗೊಳಿಸುವದಾಗಿತ್ತು. ಇಬ್ರಿಯ ಕ್ರೈಸ್ತರಿಗೆ ತಮ್ಮೊಂದಿಗೆ ಮತ್ತು ದೇವರೊಂದಿಗೆ ಸಮಾಧಾನಗೊಳ್ಳುವದು ಅಗತ್ಯವಿತ್ತು. ಇದನ್ನು ಬರೆದ ಕಾಲದಿಂದ ಮೊದಲ್ಗೊಂಡು ಇನ್ನು ಮುಂದೆ ಯೆರೂಸಲೇಮಿನಲ್ಲಿ ಶಾಂತಿಯು ಇರುತ್ತಿರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ದೇವರ ಗುಣಸ್ವಭಾವದ ತಿರುಳೇ ಶಾಂತಿಯಾಗಿರುತ್ತದೆ.

ಯೇಸುವು **ಮಹಾಪಾಲಕ,** ನಮ್ಮ ಆತ್ಮಗಳಿಗೆ ಏಕೈಕ ಏಕ-ವ್ಯಕ್ತಿ "ಸಭಾಪಾಲಕ" ("ಕುರುಬನು") ಆಗಿದ್ದಾನೆ.[52] ಈ ಸಾದೃಶ್ಯದಲ್ಲಿ ಎಲ್ಲಾ ಸ್ಥಳಗಳಲ್ಲಿರುವ ಎಲ್ಲಾ ಕಾಲದ ಜನರಿಗೆ ಮನಮುಟ್ಟುವ ಕೋಮಲತೆಯು ಇರುತ್ತದೆ. "Jesus, the Loving Shepherd" (ಯೇಸುವು, ಪ್ರೀತಿಸುವ ಕುರುಬನು) ಎಂಬಂತಹ ಸಂಕೀರ್ತನೆಗಳು ನಮ್ಮ ಆತ್ಮಗಳಿಗಾಗಿ ಕಳಕಳಿ ಹೊಂದಿರುವವನಿಗೆ ಪ್ರೀತಿಯಿಂದ ಪ್ರತ್ಯುತ್ತರ ನೀಡುವಂತೆ ಉತ್ತೇಜಿಸುವವು.

20ನೇ ವಚನವು ಇಬ್ರಿಯರಿಗೆ ಪತ್ರಿಕೆಯಲ್ಲಿ ಕ್ರಿಸ್ತನ ಪುನರುತ್ಥಾನವನ್ನು ಸೂಚಿಸುವ ಏಕೈಕ ಉಲ್ಲೇಖನವನ್ನು ಒಳಗೊಂಡಿದೆ, ಆದಾಗ್ಯೂ ಯೇಸು ದೇವರ ಬಲಗಡೆಯಲ್ಲಿದ್ದಾನೆಂದು ಪದೇ ಪದೇ ಹೇಳಲ್ಪಟ್ಟಿರುವಿಕೆಯು ಅದರ ಕಲ್ಪನೆಯನ್ನು ತಿಳಿಸುತ್ತದೆ.[53] ಹೇಗೂ, 6:2 ಮತ್ತು 11:35ರಲ್ಲಿ ಬಳಸಲ್ಪಟ್ಟಿರುವ "ಪುನರುತ್ಥಾನ" (ἀνάστασις, *anastasis*) ಎಂಬ ಪದವು ಈ ವಚನದಲ್ಲಿ ಕಾಣಿಸುವದಿಲ್ಲ. ಬದಲಾಗಿ, ನಾವು ἀνάγω (*anagō*) ಎಂಬ ಪದವನ್ನು ಕಾಣುತ್ತೇವೆ, ಅದರರ್ಥವು **ಬರಮಾಡಿದ** ಅಥವಾ "ನಡಿಸಲ್ಪಟ್ಟ" ಎಂದಾಗಿರುತ್ತದೆ. ಕ್ರಿಸ್ತನು ಎಬ್ಬಿಸಲ್ಪಟ್ಟನು ಮತ್ತು ಬಳಿಕ **ಸತ್ತವರೊಳಗಿಂದ** ಎಬ್ಬಿಸಿ ಪರಲೋಕಕ್ಕೆ "ಬರಮಾಡಲ್ಪಟ್ಟನು." ಯೇಸು ತನ್ನ ರಕ್ತವನ್ನು ಸುರಿಸಿ ಹೊಸ ಒಡಂಬಡಿಕೆಯನ್ನು ಪ್ರತಿಷ್ಠಾಪಿಸಿದ್ದಾನಾದ್ದರಿಂದ ಇದು ಮಾಡಲ್ಪಟ್ಟಿತು. ಅದನ್ನು ಸಾಧಿಸಿದವನಾಗಿ, ಆತನು ಈ ದೇವಜನರನ್ನು "ಸನ್ನದ್ಧ" (ಅನುಕೂಲ ಮಾಡುವಂತೆ) ಮಾಡುವದಕ್ಕೆ (ನೋಡಿರಿ ವ. 21) ಅಥವಾ ಅವರನ್ನು "ಪರಿಪೂರ್ಣ" ಮಾಡುವದಕ್ಕೆ (ASV), ಅಂದರೆ "ಸಂಪೂರ್ಣ" ಮಾಡುವದಕ್ಕೆ ಅವಶ್ಯಕವಾದದ್ದೆಲ್ಲವನ್ನೂ ಮಾಡಲು ಶಕ್ತನಾಗಿದ್ದನು. ದೇವರ ಸಹಾಯದೊಂದಿಗೆ ಅವರು ಮಾಡಬೇಕಾಗಿದ್ದ ಎಲ್ಲವನ್ನೂ ಮಾಡುವದಕ್ಕೆ ಶಕ್ತರಾಗಿದ್ದರು.

ಯೇಸು **ಹಿಂಡಿಗೆ** "ಮಹಾಪಾಲಕ" ಮತ್ತು "ಹಿರೀ ಕುರುಬನು" ಸಹ ಆಗಿದ್ದಾನೆ (1 ಪೇತ್ರ 5:4). ಹಳೆಯ ಒಡಂಬಡಿಕೆಯಲ್ಲಿ, ದೇವರ ಜನರ "ಕುರುಬನು" ಸಾಮಾನ್ಯವಾಗಿ ಸ್ವತಃ ದೇವರೇ ಆಗಿದ್ದನು ಅಥವಾ ಮೋಶೆ ಆಗಿದ್ದನು (ನೋಡಿರಿ ಕೀರ್ತನೆ 77:20; 95:7). ಈ "ಮಹಾಪಾಲಕ"ನಿಗೆ ಸ್ವತಃ ದೈವತ್ವವೇ ಅಲ್ಲದೆ ಬೇರೆ ಯಾರನ್ನೂ ಹೋಲಿಸುವದಕ್ಕೆ ಸಾಧ್ಯವಿಲ್ಲ. ಪ್ರಧಾನ ಕುರುಬನ ಅಧೀನದಲ್ಲಿ ಹಿರಿಯರು "ಕುರುಬರು" ಆಗಿ ಸೇವೆ ಮಾಡುವದನ್ನು ನೋಡಿದ್ದೇವೆ (ಇಬ್ರಿಯ 13:17; 1 ಪೇತ್ರ 5:1, 4).

ಈ ಅಂತಿಮ ಸ್ತೋತ್ರಾರ್ಪಣೆಯು ಪುನಃ **ಶಾಶ್ವತವಾದ ಒಡಂಬಡಿಕೆಯ . . . ರಕ್ತ**ವನ್ನು ಒಳಗೊಂಡಿರುತ್ತದೆ. ಇದು ಇಬ್ರಿಯರಿಗೆ ಪತ್ರಿಕೆಯಲ್ಲಿ ಹೇಳಲ್ಪಟ್ಟಿರುವದೆಲ್ಲದರ, ಕನಿಷ್ಠ ಅತ್ಯಂಥ ಶ್ರೇಷ್ಠವಾದ ಚರ್ಚೆಯಾಂಶದ ಒಂದು ಕ್ಲುಪ್ತವಾದ ಸಾರಾಂಶದಂತೆ ತೋರುತ್ತದೆ. "ಶಾಶ್ವತ" ರಕ್ತದ ಶಕ್ತಿಯು ನಮ್ಮನ್ನು ದೇವರು ಬಯಸುವಂಥದ್ದನ್ನು ಮಾಡುವದಕ್ಕೆ ಸಂಪೂರ್ಣವಾಗಿ ಅರ್ಹರನ್ನಾಗಿ ಮಾಡುತ್ತದೆ. ಇದು ತಾತ್ಕಾಲಿಕ ಸ್ವಭಾವವನ್ನು ಒಳಗೊಂಡ ಹಳೆಯ ಒಡಂಬಡಿಕೆಯ ಮೂಲಕ ಸಾಧಿಸಲ್ಪಡುವದಕ್ಕೆ ಸಾಧ್ಯವಿರಲಿಲ್ಲ. ಯೇಸುವಿನ ರಕ್ತದಿಂದ ಆರಂಭಗೊಂಡ ಒಡಂಬಡಿಕೆಯು (ಮತ್ತಾಯ 26:28) ನಿಜವಾಗಿಯೂ ಸರ್ವ ಕಾಲಕ್ಕಾಗಿ, ಅಥವಾ "ಶಾಶ್ವತ" ಆಗಿತ್ತು.

**ವಚನ 21. ತನ್ನ ಚಿತ್ತವನ್ನು ನೆರವೇರಿಸುವ ಹಾಗೆ ಸಕಲ ಸತ್ಕಾರ್ಯಗಳಿಗೆ ಬೇಕಾದ ಅನುಕೂಲತೆಯನ್ನು** [ನಮಗೆ] **ಅನುಗ್ರಹಿಸುವದು** ಕರ್ತನ ಚಿತ್ತವಾಗಿರುತ್ತದೆ. ನಾವು ವಿಧೇಯರಾಗುವಾಗ, ನಾವು ಏನನ್ನು ಮಾಡುವದಕ್ಕಾಗಿ ಸನ್ನದ್ಧಗೊಳಿಸಲ್ಪಟ್ಟಿದ್ದೇವೋ ಅದನ್ನು ಮಾಡುವಂತೆ ನಮ್ಮಲ್ಲಿ ಕಾರ್ಯಸಾಧಿಸುತ್ತಾನೆ (ನೋಡಿರಿ ಫಿಲಿಪ್ಪಿ 2:12, 13). ಅಲ್ಲದೆ ಶಾಸ್ತ್ರಗಳು ನಮ್ಮನ್ನು "ಸಕಲಸತ್ಕಾರ್ಯಕ್ಕೆ" ಸಹ ಸನ್ನದ್ಧಗೊಳಿಸುತ್ತವೆಂದು ಹೇಳಲಾಗಿರುತ್ತದೆ (2 ತಿಮೊಥೆ 3:16, 17). ನಾವು ಆತನ ಚಿತ್ತದೊಂದಿಗೆ ಸಾಮರಸ್ಯತೆಯಲ್ಲಿ ಏನೇ ಮಾಡಿದರೂ ಅದಕ್ಕಾಗಿ ದೇವರಿಗೆ ಮಹಿಮೆಯನ್ನು ಸಲ್ಲಿಸಬೇಕು. ಈ ಮಹಿಮೆಯು ಸಭೆ ಹಾಗೂ ಯೇಸು ಕ್ರಿಸ್ತನ ಮೂಲಕವಾಗಿ ಸಲ್ಲಿಸಲ್ಪಡುತ್ತದೆ (ಎಫೆಸ 3:21). "ದೇವರ ಕೆಲಸವು ಮನುಷ್ಯನ ಕೆಲಸವನ್ನು ಸಾಧ್ಯವಾಗಿಸುತ್ತದೆ"[54] ಆದರೆ ದೇವರ ಕೃಪೆಗೆ ವಿಧೇಯವಾಗಿ ಮನುಷ್ಯನು ಪ್ರತ್ಯುತ್ತರವನ್ನು ತೋರುವದು ಸಹ ಅಗತ್ಯವಿರುತ್ತದೆ. ನಮ್ಮ ದೇವರು ನಮಗೆ ಅಗತ್ಯವಿರುವ ಸಕಲ "ಒಳ್ಳೇದನ್ನು" ಒದಗಿಸುವನು. ಕೆಟ್ಟ ಮನುಷ್ಯರಿಂದ ದುರುದ್ದೇಶದಿಂದ ಪರಿಸ್ಥಿತಿಗಳು ಸೃಷ್ಟಿಸಲ್ಪಟ್ಟಾಗ್ಯೂ ದೇವರು ಅದನ್ನು "ಹಿತ" (ಒಳ್ಳೇದಕ್ಕೆ) ಆಗುವಂತೆ ಮಾಡುವನು (ರೋಮಾ 8:28).

20 ಮತ್ತು 21 ವಚನಗಳಲ್ಲಿರುವ ಪ್ರಾರ್ಥನೆಯು ನಂಬಿಗಸ್ತಿಕೆಯು ಆತನಿಗೆ **ಯೇಸು ಕ್ರಿಸ್ತನ ಮೂಲಕ** ಮಹಿಮೆಗೊಳಿಸುವಂತೆ ಮಾಡುವದಕ್ಕೆ ಅವಶ್ಯಕವಾದದ್ದೆಲ್ಲವನ್ನೂ ನಮ್ಮಲ್ಲಿ ಮತ್ತು ನಮ್ಮ ಮೂಲಕವಾಗಿ ದೇವರು ಸಾಧಿಸಬೇಕೆಂದು ಮಾಡುವ ಪ್ರಾರ್ಥನೆಯಾಗಿದೆ. ಆದದರಿಂದ, ತಂದೆಯು ಮಹಿಮೆ ಹೊಂದುವಂತೆಯೇ ಮಗನು ಮಹಿಮೆ ಹೊಂದತಕ್ಕದ್ದು (ಯೋಹಾನ 17:5). ಈ ಅಂತಿಮ **ಸ್ತೋತ್ರ** (ಮಹಿಮೆ) ಸಲ್ಲಿಸುವಿಕೆಯು ಕ್ರಿಸ್ತನನ್ನು ಸಂಬೋಧಿಸಿದ ಅಂತಿಮ ಸ್ತೋತ್ರಾರ್ಪಣೆಯನ್ನು ರಚಿಸುತ್ತದೆ. ಎಫೆಸ 3:21ರಲ್ಲಿ ದೇವರಿಗೆ "ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ" ಸ್ತೋತ್ರ ಸಲ್ಲಿಸಬೇಕಾಗಿರುತ್ತದೆ. ಇಲ್ಲಿ ಇಬ್ರಿಯ ಪತ್ರಿಕೆಯೊಳಗೆ ತೋರಿಸಲ್ಪಟ್ಟಿರುವ ಪ್ರಕಾರ, ಕ್ರಿಸ್ತನಿಗೆ ಮಹಿಮೆ ಸಲ್ಲಿಸುವದನ್ನು ನಿಷೇಧಿಸುವದಿಲ್ಲ. **ಆಮೆನ್** ಎಂಬುದು ಅಸಹವಾಗಿರುತ್ತದೆ, ಆದರೆ ಬಹುಶಃ ಇದು ತಿಳಿಸಲ್ಪಟ್ಟಿರುವ ಸತ್ಯಗಳಿಗೆ ಒತ್ತನ್ನು ಸೇರಿಸುವ ಪವಿತ್ರಾತ್ಮನು ವಿಧವಾಗಿರಬಹುದಾಗಿದೆ.[55]

**ವಚನ 22.** ಈ ಪತ್ರಿಕೆಯಲ್ಲಿ ಯೆಹೂದಿಮತದ ವಿಷಯದಲ್ಲಿ ಬಲವಾದ ಹೇಳಿಕೆಗಳನ್ನು ನೀಡಲಾಗಿರುತ್ತದೆ, ಆದ್ದರಿಂದ **ಈ ಎಚ್ಚರಿಕೆಯ ಮಾತನ್ನು ಸಹಿಸಿಕೊಳ್ಳಬೇಕೆಂದು** ವಾಚಕರಿಗೆ ಕೇಳಿಕೊಳ್ಳಲಾಯಿತು. ಇದರ ಅರ್ಥವು ಅವರು ಈ ಪತ್ರಿಕೆಯ ಪ್ರತಿಯೊಂದು ಮಾತಿಗೆ ಕಿವಿಗೊಡಬೇಕು, ಹೊರತು ಕೇವಲ ಅದರ ಸುದೀರ್ಘತೆಯನ್ನು ಸಹಿಸಿಕೊಳ್ಳುವದಷ್ಟೆ ಅಲ್ಲ ಎಂದಾಗಿರುತ್ತದೆ. "ಎಚ್ಚರಿಕೆಯ ಮಾತು" ಎಂಬ ಪದವು ಸಂತೈಸುವಿಕೆ (2 ಕೊರಿಂಥ 1:3-7) ಮತ್ತು ಬುದ್ಧಿವಾದ ("ಪ್ರೋತ್ಸಾಹ"; ಅಪೊಸ್ತಲರ ಕೃತ್ಯಗಳು 15:31) ಎರಡನ್ನೂ

ಒಳಗೊಂಡಿರುತ್ತದೆ. "ಎಚ್ಚರಿಕೆಯ ಮಾತು" (παράκλησις, *paraklēsis*) ಎಂಬ ಪದಗುಚ್ಛವು ಪತ್ರಿಕೆಯನ್ನು ಒಂದು ಪ್ರಸಂಗದ ನಮೂನೆಯಾಗಿ ಚಿತ್ರಿಸುತ್ತದೆ, ಒಂದು ಧರ್ಮಪ್ರವಚನದ ರೀತಿಯಲ್ಲಿ ಚಿತ್ರಿಸುತ್ತದೆ (ಅಪೊಸ್ತಲರ ಕೃತ್ಯಗಳು 13:15). ಇದೇ ಪದವು ಸಾರ್ವಜನಿಕವಾಗಿ ಬೋಧಿಸುವದನ್ನು (1 ಥೆಸಲೋನಿಕ 2:3) ಅಥವಾ ಸಭೆಯೊಳಗೆ ಬೋಧಿಸುವದನ್ನು (ರೋಮಾ 12:8; 1 ತಿಮೊಥೆ 4:13) ಸೂಚಿಸುವದಕ್ಕೆ ಬಳಸಲ್ಪಟ್ಟಿದೆ. ಈ ಪುಸ್ತಕದುದ್ದಕ್ಕೂ ಇರುವ ಬುದ್ಧಿವಾದಗಳು ಈ ಯೋಚನೆಯನ್ನು ಪುಷ್ಠೀಕರಿಸುತ್ತವೆ (ನೋಡಿರಿ 2:1–3; 3:12–14; 4:11, 14; 5:11–6:8; 10:19–25; 13:1–17).

ಈ "ಪತ್ರಿಕೆ"ಯು (**ಬರೆದ** ಸಂದೇಶ, ἐπιστέλλω, *epistellō*), ಅಥವಾ ಪತ್ರವು ಒಂದು ಸಂದೇಶ ಗುಣಸ್ವಭಾವಗಳನ್ನು ಹೊಂದಿದೆ. ಇಬ್ರಿಯರಿಗೆ ಪತ್ರಿಕೆಯು ಒಂದು ರೀತಿಯಲ್ಲಿ ಪತ್ರಿಕೆಯೆಂದೆಣಿಸಲ್ಪಡುವದಕ್ಕೆ ಆಗದಷ್ಟು ಸುದೀರ್ಘವಾಗಿರುತ್ತದೆ,[56] ಹಾಗಿದ್ದರೂ ಇಡೀ ಮೂಲಪಾಠವನ್ನು ಒಂದು ತಾಸಿನಲ್ಲಿ ಗಟ್ಟಿಯಾಗಿ ಓದಿ ಮುಗಿಸಬಹುದಾಗಿದೆ.[57] ಇದು ನಮಗೆ ಪ್ರಥಮ ಶತಮಾನದಲ್ಲಿ ಸಂದೇಶಗಳು ಎಷ್ಟೊಂದು ದೀರ್ಘವಾಗಿರುತ್ತಿದ್ದವೆಂಬ ಬಗ್ಗೆ ಕೆಲ ವಿಷಯವನ್ನು ತಿಳಿಸಬಹುದಾಗಿದೆ. ಇದಕ್ಕೆ ಹೊರತಾಗಿರುವ ಒಂದು ಘಟನೆಯೆಂದರೆ ಪೌಲನು ಅಪೊಸ್ತಲರ ಕೃತ್ಯಗಳು 20ರಲ್ಲಿ ಮಾಡಿದ ಪಾಠವು ಮಧ್ಯರಾತ್ರಿಯ ವರೆಗೂ ಸಾಗಿತ್ತು. ಅದೊಂದು ವಿಶೇಷ ಪ್ರಕರಣವಾಗಿತ್ತು ಯಾಕೆಂದರೆ ತ್ರೋವದಲ್ಲಿನ ಸಹೋದರರಿಗೆ ಇದು ತಾನು ಮಾಡುವ ಕಡೇ ಪ್ರಸಂಗವಾಗಲಿದೆ ಎಂದು ಆತನು ನಂಬಿದ್ದನು.

**ವಚನ 23.** ಪೌಲನ ಪತ್ರಿಕೆಗಳಲ್ಲಿ **ತಿಮೊಥೆಯ**[ನ] ಸೆರೆವಾಸದ ಕುರಿತು ಯಾವದೇ ಪ್ರಸ್ತಾಪಿಸಲ್ಪಟ್ಟಿಡುವಿಕೆಯನ್ನು ನಾವು ಕಾಣುವದಿಲ್ಲ, ಆದರೆ ಅಪೊಸ್ತಲನಿಗೆ ಉಪಚಾರ ಮಾಡುವದರಲ್ಲಿ ಅಷ್ಟೊಂದು ನಿಷ್ಠೆಯಿಂದ ಇದ್ದವನು ಆತನನ್ನು ಸೆರೆಮನೆಯನ್ನು ಭೇಟಿಯಾಗುವದಕ್ಕೆ ಹೋಗುವ ವೇಳೆ ತನ್ನ ಸ್ವಂತ ಸುರಕ್ಷತೆಯನ್ನು ಗಂಡಾಂತರಕ್ಕೆ ಗುರಿಪಡಿಸಿಕೊಂಡನೆಂಬುದರಲ್ಲಿ ಯಾವ ಸಂಶಯವೂ ಇಲ್ಲ. **ಬಿಡುಗಡೆಯಾಯಿತು** (ἀπολύω, *apoluō*) ಎಂಬ ಪದದ ಅರ್ಥವು "ಒಂದು ಕೆಲಸವನ್ನು ನೇರವೇರಿಸುವದಕ್ಕೆ ಹೊರಡುವದು" ಎಂಬದರಲ್ಲಿರುವಂತೆ "ಹೊರಡು," ಅಥವಾ ಒಬ್ಬನಿಗೆ "ಕ್ಷಮಾಪಣೆ" ನೀಡು ಎಂದು ಸಹ ಆಗಿರುತ್ತದೆ (ಮತ್ತಾಯ 18:27; ನೋಡಿರಿ ಲೂಕ 6:37). ಹೇಗೂ, ತಿಮೊಥೆಯನು ಒಂದು ಗೊತ್ತಿರದಂಥ ಸೆರೆವಾಸದಿಂದ ಬಿಡುಗಡೆಗೊಳಿಸಲ್ಪಟ್ಟನು ಎಂಬ ಯೋಚನೆಯು ಸಂಪೂರ್ಣ ಸಾಧ್ಯವಿರುತ್ತದೆ.[58] ಪೌಲನ ಜೊತೆಗಿನ ಒಡನಾಟವು "ತಿಮೊಥೆಯ"ನು ಹೊಸ ಧಾರ್ಮಿಕ "ಪಂಥ"ದ ಸದಸ್ಯನು ಎಂಬದಾಗಿ ಸ್ವಯಂಚಾಲಿತವಾಗಿ ಆರೋಪ ಸಾಭಿತು ಪಡಿಸಲ್ಪಟ್ಟಿರಬಹುದಾಗಿದೆ; ಆದರೆ, ರೋಮನ್ ಪೌರತ್ವವಿಲ್ಲದ ಕಾರಣದಿಂದಾಗಿ ಆತನಿಗೆ ಪೌಲನಿಗಿದ್ದಂಥ ಹಕ್ಕುಗಳಿಲ್ಲದೆ ಹೋಗಿರಬಹುದು. ರೋಮನ್ ಅಧಿಕಾರಿಗಳು ಈತನಿಂದ ಅಪಾಯವಿಲ್ಲವೆಂದು ನಿರ್ಧರಿಸಿ ಬಿಡುಗಡೆಗೊಳಿಸುವ ಮುನ್ನ ಈ ಅಂಜಿಕೆಯುಳ್ಳ ಯುವಕನು ಎಷ್ಟು ಕಾಲ (ನೋಡಿರಿ 2 ತಿಮೊಥೆ 1:7) ಸೆರೆಮನೆಯಲ್ಲಿ ಕಳೆದನು? ನಿಶ್ಚಯವಾಗಿಯೂ, "ಚಳಿಗಾಲಕ್ಕೆ ಮುಂಚೆಯೇ ಬರುವದಕ್ಕೆ ಪ್ರಯತ್ನ ಮಾಡು" ಎಂದು ಪೌಲನು ಮಾಡಿದ ಮನವಿಗೆ ಆತನು ವಿಧೇಯನಾಗಿದ್ದನು (2 ತಿಮೊಥೆ 4:21). ಇಲ್ಲಿ ಕೊಡಲ್ಪಟ್ಟಿರುವ ವೈಯಕ್ತಿಕ ಮಾಹಿತಿಯನ್ನು ಪೌಲನು ಈ ಪತ್ರಿಕೆಯ ಲೇಖಕನು ಎಂದು ವಾದಿಸುವದಕ್ಕೆ ಬಳಸಲಾಗಿರುತ್ತದೆ. ತಿಮೊಥೆಯನಿಗೆ ಪೌಲನಷ್ಟು ನಿಕಟವಾಗಿದ್ದವರು ಬೇರೆ ಇನ್ನಾರೂ ಇರಲಿಲ್ಲ. ಯೆಹೂದಿ ಶ್ರೋತೃಗಳನ್ನು ಹೊಂದಿರುವದು ಈ ಅರೆಯೆಹೂದಿ ಸಹೋದರನ ಮೇಲೆ ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯಲ್ಲಿ ಸುರಿಸಿರುವ ದಾರಾಳವಾದ ಪ್ರಶಂಸೆಗಳ (ಫಿಲಿಪ್ಪಿ 2:19–24) ರೀತಿಯಲ್ಲಿ

ಇಲ್ಲಿ ಮಾಡದಂತೆ ಹಿಂಜರಿಯುವಂತೆ ಪ್ರಚೋದಿಸುವದು. ಇಡೀ ಪತ್ರಿಕೆಯಲ್ಲಿ ಹೆಸರು ಹೇಳಿ ಪ್ರಸ್ತಾಪಿಸಲ್ಪಟ್ಟಿರುವವನು ತಿಮೊಥೆಯನು ಮಾತ್ರವೇ.

**ವಚನ 24.** ಪತ್ರಿಕೆಯನ್ನು ಸಭೆ ಅಥವಾ ಸಭೆಗಳ ಹಿರಿಯರನ್ನು ಉದ್ದೇಶಿಸಿ ಬರೆಯಲಿಲ್ಲ, ಆದರೆ ಅದರ ಸದಸ್ಯರಲ್ಲಿನ ಒಂದು ಘಟಕವನ್ನುದ್ದೇಶಿಸಿ ಬರೆಯಲಾಗಿರುತ್ತದೆ. ಲೇಖಕನು ಅವರನ್ನು ಪುನಃ ಯೆಹೂದಿ ಮತಕ್ಕೆ ಹಿಂಜರಿದು ಹೋಗುವದನ್ನು ತಡೆಯುವದಕ್ಕೆ ಪ್ರಯತ್ನಿಸುತ್ತಿದ್ದನು. ಈ ಸಹೋದರರು ಲೇಖಕನ ಅತ್ಯಂಥ ನಮ್ರತೆಯ ಅಭಿವಂದನೆಗಳ ವಿಷಯದಲ್ಲಿ [ತಮ್ಮ] **ಸಭಾನಾಯಕರೆಲ್ಲರಿಗೂ . . . ವಂದನೆ ಹೇಳ**ಬೇಕಿತ್ತು. ಸಭೆಯೊಳಗಿನ ಗುಂಪು ಮಾಜಿ ಯೆಹೂದಿ ನಾಯಕರನ್ನು ಒಳಗೊಂಡಿದ್ದರೆ (ಅಪೊಸ್ತಲರ ಕೃತ್ಯಗಳು 6:7), ಅವರಿಗೆ ತಮ್ಮಲ್ಲಿ ಸಾಮಾನ್ಯ ಗುಂಪಾಗಿದ್ದ ಹಿರಿಯರನ್ನು ಗೌರಿಸುವದಕ್ಕೆ ಕಷ್ಟಕರವಾಗಿರಬಹುದಾಗಿದೆ. ಅವರು ತಮ್ಮ "ನಾಯಕರಿಗೆ" (ἡγέομαι, *hēgeomai*) "ಅಧೀನರಾಗಿ" ಇರಬೇಕಿತ್ತು, ಅವರ "ಆಳ್ವಿಕೆ"ಯನ್ನು ಒಪ್ಪಿಕೊಳ್ಳುವವರಾಗಬೇಕಿತ್ತು (13:17; ASV). *Hēgeomai* ಎಂಬುದು ನಡಿಸುವದಕ್ಕೆ ಅಥವಾ ಆಜ್ಞಾಪಿಸುವದಕ್ಕೆ ಇರುವ ಅಧಿಕಾರವನ್ನು ಸೂಚಿಸುತ್ತದೆ. ಅಂಥ ಅಧಿಕಾರಕ್ಕೆ ತಮ್ಮನ್ನು ಅಧೀನಪಡಿಸಿಕೊಳ್ಳುವದು ಕುಲೀನ ವರ್ಗಕ್ಕೆ ಸೇರಿದ್ದ ಯಾಜಕರಿಗೆ ಕಷ್ಟಕರವೆನ್ನಿಸಿರಬಹುದು. ಅವರು ಕೆಲವೊಂದು "ನಾಯಕರಿಗೆ" ಮತ್ತು ಬೇರೆ ವ್ಯಕ್ತಿಗಳಿಗೆ "ವಂದನೆ" (ἀσπάζομαι, *aspazomai*) ಹೇಳಬೇಕಿತ್ತು. ಇದರಲ್ಲಿ "ಸಭಾನಾಯಕರನ್ನು" ಅಪ್ಪಿಕೊಳ್ಳುವದು ಅಹ ಸೇರಿರಬಹುದಾಗಿತ್ತು. ಸಭೆಯಲ್ಲಿ ಮೇಲ್ವಿಚಾರಕರಾಗಿರುವವರಿಗೆ ಅಧೀನರಾಗಿ ಅವರನ್ನು ಅನುಸರಿಸುವದು ನಿಜವಾದ ದೀನ ಮನಸ್ಸನ್ನು ಮತ್ತು ಕ್ರಿಸ್ತನಿಗೆ ನಿಜಕ್ಕೂ ಪರಿವರ್ತನೆಗೊಂಡಿದ್ದಾರೆಂಬುದನ್ನು ತೋರ್ಪಡಿಸುವದಾಗಿತ್ತು.

ಅಲ್ಲದೆ ಅವರು ರೋಮಾ 16:16ರಲ್ಲಿ ಪೌಲನು ಬರೆದಿರುವ ಪ್ರಕಾರ **ದೇವಜನರೆಲ್ಲರಿಗೂ** – ಅಂದರೆ, ಕ್ರೈಸ್ತರಿಗೆ – ವಂದನೆ ಹೇಳಬೇಕಿತ್ತು. ಆತನು ಅಂಥ ವಂದನೆಗಳನ್ನು "ಕ್ರಿಸ್ತನ ಸಭೆಗಳೆಲ್ಲಾ" ತಿಳಿಸುತ್ತವೆಂದು ಹೇಳಿದನು. ದೇವಜನರು ಬದುಕಿದ್ದ ಜನರಾಗಿದ್ದರು, ಹೊರತು ಸತ್ತು ಬಹಳ ವರ್ಷಗಳಾಗಿದ್ದ ವ್ಯಕ್ತಿಗಳಲ್ಲ ಎಂಬುದು ಸ್ಪಷ್ಟವಾಗಿರುತ್ತದೆ. ಕ್ರೈಸ್ತರು ದೇವಜನರಿಗೆ (ಸಂತರಿಗೆ) ಅಥವಾ ಅವರ ಮುಖಾಂತರ ಪ್ರಾರ್ಥನೆ ಮಾಡುವದಿಲ್ಲ.

**ಇತಾಲ್ಯ ದೇಶದಿಂದ** ಎಂಬುದು "ಇತಾಲ್ಯದಲ್ಲಿರುವವರು" ಅಥವಾ "ಇತಾಲ್ಯದವರು" ಎಂಬರ್ಥವಾಗಬಹುದಾಗಿದೆ, ಇವರು ಬೇರೆ ಯಾವದೋ ಸ್ಥಳದಲ್ಲಿ ಲೇಖಕನ ಜೊತೆಯಲ್ಲಿದ್ದರು. ಈ ಪದಗುಚ್ಛದ ಮೂಲಕ ಲೇಖಕನು ಯಾವ ಸ್ಥಳದಲ್ಲಿದ್ದನೆಂಬುದನ್ನು ಖಚಿತವಾಗಿ ನಿರ್ಧರಿಸಲ್ಪಡುವದಕ್ಕೆ ಸಾಧ್ಯವಿಲ್ಲ; ಆದದರಿಂದ, ಬಹುಪಾಲು ಅನುವಾದಗಳು ಮೂಲವಾಕ್ಯದ ರೀತಿಯಲ್ಲಿಯೇ ದ್ವಂದ್ವಾರ್ಥದಿಂದ ಕೂಡಿರುತ್ತವೆ.[59] ಇದು ತಮ್ಮ ಸ್ವದೇಶದಲ್ಲಿದ್ದುಕೊಂಡು ಹೊರದೇಶದವರಿಗೆ ವಂದನೆಗಳನ್ನು ಹೇಳಿದ ಇತಾಲ್ಯದವರನ್ನು ಸೂಚಿಸುವದಕ್ಕೆ ಒಂದು ಸೂಕ್ತವಾದ ಬಿರುದು ಆಗುವದು. ಈ ಮಾತು ಬಹು ದೂರದಲ್ಲಿದ್ದ ಪತ್ರಿಕೆಯನ್ನು ಸ್ವೀಕರಿಸಿಕೊಂಡವರಿಗೆ ಇತಾಲ್ಯದ ಸಹೋದರರು ತಿಳಿಸಿದ ವಂದನೆಗಳನ್ನು ಸೂಚಿಸುವ ಸಾಧ್ಯತೆಯು ಅಧಿಕವಾಗಿರುತ್ತದೆ; ಎರಡು ಗುಂಪುಗಳವರು ಎಂದಿಗೂ ಮುಖಾಮುಖಿ ಭೇಟಿಯಾಗದೆ ಇದ್ದಿರಬಹುದಾಗಿದೆ.

**ವಚನ 25. ಕೃಪೆ** ಎಂಬುದಕ್ಕಿರುವ ಪದವು χάρις (*charis*). ಕ್ರೈಸ್ತೀಯ ಪತ್ರ ವ್ಯವಹಾರದಲ್ಲಿ ಇದೊಂದು ಸಾಮಾನ್ಯವಾಗಿರುತ್ತಿದ್ದ ಅಂತ್ಯಾಶೀರ್ವಾದ ಆಗಿರುತ್ತದೆ, ಮತ್ತು ಇದು ವೈಶಿಷ್ಟ್ಯವಾಗಿ ಪೌಲನಿಂದ ಬಳಸಲ್ಪಡುತ್ತಿದ್ದ ವಂದನೆ ಹೇಳುವಿಕೆ ಆಗಿತ್ತು.[60] ಇದು

ಪತ್ರಿಕೆಯನ್ನು ಸ್ವೀಕರಿಸಿಕೊಳ್ಳುವ ವ್ಯಕ್ತಿಯ ಮೇಲೆ ದೈವಿಕ ಆಶೀರ್ವಾದವನ್ನು ಬರಮಾಡುವ ಬಯಕೆಯನ್ನು ಸೂಚಿಸುತ್ತದೆ. ಕೇವಲ ವಾಡಿಕೆಯ ವಂದನೆಯನ್ನು ಹೇಳುವದಕ್ಕಿಂತ ಹೆಚ್ಚಾಗಿ, ಆಶೀರ್ವಾದವು ಅನೇಕ ಸಾರಿ ಅಪೊಸ್ತಲಿಕ ಅಧಿಕಾರದಿಂದ ಬರುತ್ತಿತ್ತು. ಎಲ್ಲರಿಗೂ ಬಹಳ ಅಗತ್ಯವಿರುವದೆಂದರೆ ದೇವರ ಕೃಪೆಯೇ ಆಗಿದೆ. ಯೂದಾಯದ ಕ್ರೈಸ್ತರ ಮುಂದೆ ಸಂಕಷ್ಟ ಇದ್ದ ವೇಳೆ, ಈ ಆಶೀರ್ವಾದವು ವಿಶೇಷವಾಗಿ ಅಗತ್ಯವಾಗಿತ್ತು.

# ಅನ್ವಯಿಸುವಿಕೆ

## ನಮ್ಮ ಸಹೋದದರು ಹಾಗೂ ಸಹೋದರಿಯರಿಗಾಗಿ ಪ್ರೀತಿಯನ್ನು ಅಭ್ಯಾಸ ಮಾಡುವದು (13:1)

"ಯಾರು ನನ್ನ ಸಹೋದರನು?" ಎಂಬುದು ಒಂದು ಅನೈತಿಕ, ಕಾನೂನುಬಾಹಿರ, ಅಥವಾ ಅಸಮರ್ಪಕವಾದ ಪ್ರಶ್ನೆಯಲ್ಲ. ಯೇಸು ತನಗೆ ಒಬ್ಬ ಧರ್ಮೋಪದೇಶಕನು ಕೇಳಿದ "ನನ್ನ ನೆರೆಯವರನು ಯಾರು?" ಎಂಬ ಪ್ರಶ್ನೆಗೆ ಉತ್ತರ ನೀಡಿದನು (ಲೂಕ 10:29-37), ಅದರೆ ಆತನು ಅದಕ್ಕಿಂತಲೂ ಎಷ್ಟೋ ಹೆಚ್ಚಿನದನ್ನು ಮಾಡಿದನು. ಆತನು ಆ ಮನುಷ್ಯನಿಗೆ ತಾನು ಕೇಳಿರಬಹುದಾಗಿದ್ದ ಪ್ರಶ್ನೆಗೆ ಉತ್ತರವನ್ನು ತೋರಿಸಿ ಕೊಟ್ಟನು: "ನಾನು ಯಾರಿಗೆ ಒಬ್ಬ *ಸಹೋದರನು* ಆಗಿರಬೇಕು?" ಅದಕ್ಕೆ ಉತ್ತರವು "ಇಡೀ ಮಾನವ ಕುಲವು, ನೀವು ಅಸಹ್ಯಿಸುವ, ಸಮಾರ್ಯದಂತಹ ಜನರು ಸಹ." ಸಹೋದರ ಪ್ರೀತಿಯು ನೆರೆಯವನಾಗಿರುವದನ್ನು ಮೀರಿ ಹೋಗುತ್ತದೆ; ಇದು ಕ್ರಿಸ್ತನಲ್ಲಿ ನಂಬಿಗಸ್ತರಾಗಿರುವ ತನ್ನ ಎಲ್ಲಾ ಸಹೋದರರ ಕಡೆಗೆ ಒಬ್ಬನು ಹೊಂದಿರಬೇಕಾದ ವಿಶೇಷವಾದ ಒಂದು ಪ್ರೀತಿಯಾಗಿದೆ.

ನಾವು ಸಮರ್ಪಕವಾದ ಪ್ರೀತಿಯನ್ನು ಆಚರಿಸುವದಾದರೆ, ಎಲ್ಲಾ ಸಹೋದರರು ಹಾಗೂ ಸಹೋದರರಿಯರನ್ನು ಕ್ರಿಸ್ತನಿಗೆ ನಂಬಿಗಸ್ತರಾಗಿರುವವರೆಂದು ನೋಡುವವರಾಗುತ್ತೇವೆ, ಅವರೇ ತಮ್ಮನ್ನು ನಂಬಿಗಸ್ತರಲ್ಲವೆಂದು ಸಾಭಿತುಪಡಿಸಿಕೊಳ್ಳುವ ಹೊರತು ಅವರನ್ನು ನಂಬಿಗಸ್ತರೆಂದು ಕಾಣುತ್ತೇವೆ. ಮತ್ತೊಬ್ಬನನ್ನು ಒಬ್ಬ ನಂಬಿಗಸ್ತ ಸಹೋದರನೆಂದು ಎಣಿಸುವದನ್ನು ನಿಲ್ಲಿಸುವದರಲ್ಲಿ, ನಾವು ಜಾಗ್ರತೆಯಿಂದ ಮತ್ತು ಇಚ್ಛಾಪೂರ್ವಕವಾಗಿ ಯೋಚಿಸಬೇಕು. ನಾವು "ಆತನು ದುರ್ಬಲ ಸಹೋದರನೋ?" ಎಂದು ಕೇಳಿಕೊಳ್ಳಬೇಕು. ಹಾಗಿರುವದಾದಲ್ಲಿ, ಆತನು ನಂಬಿಕೆಯಿಂದ ತಪ್ಪಿ ಹೋಗುವದರಲ್ಲಿ ಪಾತ್ರವನ್ನು ವಹಿಸುವವರಾಗದಂತೆ ಆತನಿಗೆ ನೋವುಂಟು ಮಾಡದಂತೆ ಮತ್ತು ಅಡ್ಡಿಯನ್ನುಂಟು ಮಾಡದಂತೆ ಆತನ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು (1 ಕೊರಿಂಥ 8:12, 13).

ಕ್ರಿಸ್ತನ ದೇಹದಲ್ಲಿ ಭೇದ ಹುಟ್ಟಿಸುವ ರೀತಿಯಲ್ಲಿ ತನ್ನ ಅಭಿಪ್ರಾಯವನ್ನೇ ಮಾಣ್ಯ ಮಾಡಬೇಕೆಂದು ವಾದಿಸುವವನಿಂದ ದೂರವಿರಬೇಕೆಂದು ಶಾಸ್ತ್ರಗಳು ಕಲಿಸುತ್ತವೆ (ತೀತನಿಗೆ 3:10, 11; 2 ಥೆಸಲೋನಿಕ 3:6). ತೀತನಿಗೆ 3:10ರಲ್ಲಿ "ಭೇದಹುಟ್ಟಿಸುವ ಮನುಷ್ಯನು" ಎಂಬುದಕ್ಕೆ ಇರುವ ಪದವು αἱρετίκος (*hairetikos*, "ಪಾಷಂಡಿ"), ಇದು ಗುಂಪುಗಾರಿಕೆಗಳನ್ನು ಅಥವಾ ವಿಭಜನೆಗಳನ್ನು ಉಂಟು ಮಾಡುವವನನ್ನು ಸೂಚಿಸುತ್ತದೆ. ಯಾಕೆಂದರೆ ತನ್ನ ಅಭಿಪ್ರಾಯವನ್ನು ಬೇರೆಯವರ ಮೇಲೆ ಕಡ್ಡಾಯಗೊಳಿಸುವವನು ಸಹೋದರ ಅನ್ಯೋನ್ಯತೆಯನ್ನು ಅಂತ್ಯಕ್ಕೆ ತರುವನು. ಸಹೋದರ ಪ್ರೀತಿಯನ್ನು ಅಭ್ಯಾಸಿಸುವದಕ್ಕೆ ಬಯಸುವ ಒಂದು ದೇಹದಲ್ಲಿ ಅಂಥ ವ್ಯಕ್ತಿಯನ್ನು ಸಹಿಸಿಕೊಳ್ಳು ಸಾಧ್ಯವಿಲ್ಲ.

## ಸೆರೆವಾಸಿಗಳೊಂದಿಗೆ ಗುರುತಿಸಿಕೊಳ್ಳುವದು (13:3)

ಸೆರೆಯಲ್ಲಿರುವವನ್ನು ಭೇಟಿ ಮಾಡುವದು ಒಂದು ಸಂತೋಷಕರವಾದ ಕೆಲಸವಾಗಿರದೆ ಇರಬಹುದು, ಆದರೆ ಹಾಗೆ ಮಾಡಬೇಕೆಂದು ಕರ್ತನಿಂದ ಆಜ್ಞಾಪಿಸಲ್ಪಟ್ಟಿರುತ್ತದೆ (ಮತ್ತಾಯ 25:36, 43). ನಮ್ಮಲ್ಲಿ ಕೆಲವರು ಹೀಗೆ ಯೋಚಿಸಿಕೊಳ್ಳಬಹುದು, "ಕಾನೂನನ್ನು ಉಲ್ಲಂಘಿಸಿದವರ ಸಹವಾಸದಲ್ಲಿ ತೊಡಗಿಸಿಕೊಳ್ಳದೆಯೇ ನನಗೆ ಸಾಕಷ್ಟು ಸಮಸ್ಯೆಗಳು ಇರುತ್ತವೆ." ನಮ್ಮ ಸ್ವಂತ ಸಮಸ್ಯೆಗಳನ್ನು ಜಯಿಸುವದಕ್ಕೆ ಇರುವ ಅತ್ಯುತ್ತಮ ದಾರಿಗಳಲ್ಲೊಂದೆಂದರೆ ಬೇರೆಯವರಿಗೆ ಸಹಾಯವನ್ನು ಮಾಡುವದೇ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ನಾನು ಸೇವೆ ಮಾಡುವ ಸಭೆಯು ಸುತ್ತಮುತ್ತಲಿನ ಸೆರೆಮನೆಗಳಲ್ಲಿ ಸುಮಾರು ಒಂದು ಸಾವಿರ ಜನರಿಗೆ ದೀಕ್ಷಾಸ್ನಾನ ಮಾಡಿಸಿರುತ್ತದೆ. ಪಟ್ಟಣದ ಹೊರಗಷ್ಟೆ ಇರುವ ಒಂದು ಬೃಹತ್ ಸೆರೆಮನೆಯಲ್ಲಿ, ಈ ಸೇವೆಯು ಅಂದಾಜಿನಲ್ಲಿ ವಾರಕ್ಕೆ ಎರಡು ಅಥವಾ ಮೂರು ದೀಕ್ಷಾಸ್ನಾನಗಳನ್ನು ಮಾಡಿಸುತ್ತದೆ, ಮತ್ತು ಒಂದೇ ಭಾನುವಾರದಂದು ಹನ್ನೆರಡು ಜನರು ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಾರೆಂಬುದನ್ನು ಕೇಳುವದು ಅತ್ಯಾಶ್ಚರ್ಯಕರವೇನಲ್ಲ. ನಾನು ಆ ಸಹೋದರರಿಗಾಗಿ ಪರಾನುಭೂತಿ ಹೊಂದಿರುವದಕ್ಕೆ ಪ್ರಯತ್ನಿಸುತ್ತೇನೆ; ಆದರೆ ಅವರು ಹಿಂದಕ್ಕೆ ಉಳಿಯಲೇ ಬೇಕಾಗುತ್ತದೆ, ನಾನಾದರೋ ಭಾನುವಾರ ಮಧ್ಯಾಹ್ನದ ಆರಾಧನೆಯ ಬಳಿಕ ಹೊರಟು ಹೋಗಬಲ್ಲೆನು. "ಸೆರೆಯವರ ಸಂಗಡ ಸೆರೆಯವರೆಂದು ಭಾವಿಸಿಕೊಂಡು" ಅವರನ್ನು ಜ್ಞಾಪಕ ಮಾಡಿಕೊಳ್ಳುವದು ಎಷ್ಟು ಕಷ್ಟಕರವಾಗಿರುತ್ತದೆ!

## ದಾಂಪತ್ಯವು ದೇವರಿಂದ ನೇಮಿತವಾದದ್ದು (13:4)

ಸ್ವತಃ ದೇವರು ದಾಂಪತ್ಯವನ್ನು ನೇಮಿತಗೊಳಿಸಿದನು (ಆದಿಕಾಂಡ 2:20–24). ಸೃಷ್ಟಿಸಲ್ಪಟ್ಟದ್ದು ಆದರೆ ದೇವರಿಂದ "ಒಳ್ಳೇದಲ್ಲ" ಎಂದು ಪರಿಗಣಿಸಲ್ಪಟ್ಟ ಒಂದೇ ಒಂದು ಸಂಗತಿಯೆಂದರೆ ಮನುಷ್ಯನು ಒಬ್ಬಂಟಿಗನಾಗಿರುವದು (ಆದಿಕಾಂಡ 2:18), ಮತ್ತು ಆತನು ಸೂಕ್ತವಾದ ಸಹಕಾರಿಯನ್ನು ರೂಪಿಸಿದನು. "ಸಹಕಾರಿ" (עֵזֶר, *'ezer*) ಎಂಬ ಪದವು ಒಬ್ಬ ಸಂಗಾತಿ ಎಂಬುದಕ್ಕಿಂತಲೂ ಹೆಚ್ಚಿನದನ್ನು ಸೂಚಿಸುತ್ತದೆ; ಅದರರ್ಥವು ಪುರುಷನಲ್ಲಿ ಕೊರತೆಯಾಗಿರುವದನ್ನು ಸ್ತ್ರೀಯು ಪೂರೈಸುತ್ತಾಳೆ ಎಂದಾಗಿರುತ್ತದೆ. ಪುರುಷ ಹಾಗೂ ಸ್ತ್ರೀಯನ್ನು ಒಂದಾಗಿ ಕೂಡಿಸುವ ಮೂಲಕ ತಾನೇನು ಮಾಡುತ್ತಿದ್ದೇನೆಂಬುದು ದೇವರಿಗೆ ಗೊತ್ತಿತ್ತು; ಯಾಕೆಂದರೆ ಇಬ್ಬರೂ ಅನೇಕ ಸಾರಿ ಬೇರೆ ಬೇರೆ ಕುಶಲತೆಗಳನ್ನು ಹೊಂದಿರುತ್ತಾರೆ, ಮತ್ತು ಅವರ ಭಾಗಗಳು ಸಂಪೂರ್ಣವಾಗಿಸುತ್ತವೆ (ಕೇವಲ ಶಾರೀರಿಕ ಅರ್ಥದಲ್ಲಿ "ಒಂದೇ ಶರೀರ" ಎಂದಷ್ಟೇ ಅಲ್ಲ).

ಇಬ್ಬರು ಪುರುಷರು ಅಥವಾ ಇಬ್ಬರು ಸ್ತ್ರೀಯರು ಒಂದಾಗಿ ಪರಸ್ಪರರ ಮನೋಶಾಸ್ತ್ರೀಕ ಹಾಗೂ ಶಾರೀರ ವೈಜ್ಞಾನಿಕವಾದ ಅಗತ್ಯತೆಗಳನ್ನು ಸಂಧಿಸಬಲ್ಲರು ಎಂಬುದು ಹಾಸ್ಯಾಸ್ಪದವಾದದ್ದು. ಖಂಡಿತವಾಗಿಯೂ, ಅವರು ಮಕ್ಕಳನ್ನು ಹೇರುವದಕ್ಕೆ ಅಥವಾ ಮಗುವಿನ ಅಗತ್ಯತೆಗಳನ್ನು ಸಂಧಿಸುವದಕ್ಕೆ ಸಾಧ್ಯವಿಲ್ಲ. ಸಲಿಂಗಕಾಮಿಗಳ ಐಕ್ಯವನ್ನು "ಮದುವೆ" ಎಂದು ಕರೆಯುವದು ಯುಗಯುಗಳಿಂದ ಬಂದ ಜ್ಞಾನಕ್ಕೆ ವಿರುದ್ಧವಾಗಿ ಸಾಗುತ್ತದೆ ಮತ್ತು ಅದು ಕ್ರಮೇಣದಲ್ಲಿ ತನ್ನ ಮೂರ್ಖತನದಿಂದಲೇ ವಿಫಲಗೊಳ್ಳುವದು. ಪ್ರಾಚೀನ ಜಗತ್ತಿನಲ್ಲಿ ಸೊದೋಮ್ ಪಟ್ಟಣದೊಳಗಿನ ಅನೈತಿಕೆಯ ಫಲಿತವಾಗಿ ಆ ಪಟ್ಟಣ ಹಾಗೂ ಅದರ ನಿವಾಸಿಗಳ ಸರ್ವನಾಶನಗೊಳ್ಳುವಂತಾಯಿತು. ಸಲಿಂಗಕಾಮದ ಒಲವುಗಳು ಹುಟ್ಟಿನಿಂದಲೇ

ಬಂದಿರುತ್ತವೋ ಅಥವಾ ಬೆಳೆಸಿಕೊಳ್ಳಲ್ಪಡುತ್ತವೋ ಎಂಬ ಪ್ರಶ್ನೆಯ ಬಗ್ಗೆ ಚರ್ಚಿಸುವದಿಲ್ಲ; ಅಂಥದ್ದನ್ನು ಆಚರಿಸುವದು ಪಾಪವಾಗಿದೆ ಎಂದಷ್ಟೇ ಅದು ಹೇಳುತ್ತದೆ. ಸಲಿಂಗಕಾಮಿಗಳಿಗೆ ಮತ್ತು ವಿರುದ್ಧಲಿಂಗದವರಿಗೆ ಇರುವ ಸಮಸ್ಯೆಯೆಂದರೆ ಸ್ವ-ನಿಗ್ರಹತೆಯು ಇಲ್ಲದಿರುವಿಕೆಯೇ.

ಕೆಲವರು ಆತ್ಮೀಕ ಉದ್ದೇಶಕ್ಕಾಗಿ ಅಥವಾ ವಿವಿಧ ಕಾರಣಗಳಿಗೋಸ್ಕರ ಒಂಟಿಯಾಗಿ ಉಳಿದುಕೊಳ್ಳಲು ನಿರ್ಣಯಿಸಿಕೊಳ್ಳುತ್ತಾರೆ. ಏಕಾಂಗಿಯಾಗಿರುವ ಮನುಷ್ಯನು ದೇವರ ಹಾಗೂ ಮಾನವರ ಸೇವೆ ಮಾಡುವದರಲ್ಲಿ ಮಹಾನ್ ಸಾರ್ಥಕತೆಯನ್ನು ಕಂಡುಕೊಳ್ಳಬಲ್ಲನು. ಎಷ್ಟೊಂದು ಪ್ರಮಾಣದಲ್ಲಿ ದಾಂಪತ್ಯಗಳು ಮುರಿದು ಬಿದ್ದಿರುತ್ತವೆಂಬ ದುಃಖಕರವಾದ ಸ್ಥಿತಿಯು ದೇವರು ಉದ್ದೇಶಿಸಿದ್ದ ರೀತಿಯಂತೆ ವಿವಾಹದಲ್ಲಿ ಅದ್ಭುತವಾದ ಸಂತೋಷವನ್ನು ಸೋಲಿಸುವದಿಲ್ಲ, ಅಥವಾ ಅದು ಈಗಲೂ ದೇವರ ಯೋಜನೆಯಾಗಿರುತ್ತದೆಂಬದನ್ನು ಯಾವನೂ ಅಲ್ಲಗಳೆಯುವದಕ್ಕೆ ಸಾಧ್ಯವೂ ಇರುವದಿಲ್ಲ. ದಾಂಪತ್ಯವನ್ನು ಒಂದು ರೀತಿಯಲ್ಲಿ ಬಂಧನವೆಂದು ಕಾಣುವವನು ದೇವರು ಒಬ್ಬ ಪುರುಷನು ಹಾಗೂ ಒಬ್ಬ ಸ್ತ್ರೀಯ ನಡುವೆ ವಿನ್ಯಾಶಿಸಿರುವ ಪ್ರೀತಿಯುಳ್ಳ, ಪರಸ್ಪರ ಪರಿಗಣಿಸುವ ಸಂಬಂಧವನ್ನು ಎಂದಿಗೂ ಗಮನವಿಟ್ಟು ನೋಡಿದವನಲ್ಲ. ಅದೇ ವೇಳೆಯಲ್ಲಿ, ಪ್ರೀತಿಯಿರುವ ದಾಂಪತ್ಯವು ಸ್ವಯಂಚಾಲಿತವಾಗಿ ಪರಿಪೂರ್ಣವಾಗಿರುತ್ತದೆಂದು ಯಾವನಾದರೂ ಯೋಚಿಸುವದಾದರೆ ಅದು ಆತನ ತಪ್ಪು ಯೋಚನೆಯಾಗಿದೆ. ಬಹಳಷ್ಟು ಕೆಲಸವು ಮಾಡಲ್ಪಡಬೇಕಾಗುತ್ತದೆ – ದೇವರ ಯೋಜನೆಯ ವಿಷಯದಲ್ಲಿ ಅಲ್ಲ, ಆದರೆ ಭಾಗಿಯಾಗಿರುವ ಇಬ್ಬರು ವ್ಯಕ್ತಿಗಳ ಬೆಳವಣಿಗೆಯ ವಿಷಯದಲ್ಲಿಯೇ. ಅವರು ಸ್ವಾಭಾವಿಕವಾದ ಸ್ವಾರ್ಥತೆಯ ಪ್ರಕಾರವಾಗಿ ನಡೆಯುವ ಬದಲಾಗಿ ಪರಸ್ಪರರ ಅಗತ್ಯತೆಗಳಿಗೆ ತಕ್ಕಂತೆ ಹೊಂದಿಸಿಕೊಳ್ಳಬೇಕು. ಮುರಿದು ಬಿದ್ದಿರುವ ವಿವಾಹಗಳಿಗೆ ಸ್ವಾರ್ಥವೇ ಕಾರಣವಾಗಿರುತ್ತದೆ.

ದಾಂಪತ್ಯವು ವಿಚ್ಛೇದನದಿಂದಾಗಿ ಅಮಾನ್ಯತೆಗೊಳಿಸಲ್ಪಡುತ್ತದೆ. ದೇವರ ದೃಷ್ಟಿಯಲ್ಲಾದರೋ, ಮರಣವು ಹೊರತಾಗಿ ಬೇರೆ ಇನ್ನಾವದೂ ದಾಂಪತ್ಯವನ್ನು ಅಂತ್ಯಗೊಳಿಸಬಾರದು. ಗಂಡಂದಿರಿಗೆ ತಮ್ಮ ಹೆಂಡತಿಯರನ್ನು ಪ್ರೀತಿಸಬೇಕೆಂದು ಆಜ್ಞಾಪಿಸಲಾಗಿರುತ್ತದೆ, ಮತ್ತು ಹೆಂಡತಿಯರಿಗೆ ತಮ್ಮ ಗಂಡಂದಿರನ್ನು ಪ್ರೀತಿಸಬೇಕೆಂದು ಆಜ್ಞಾಪಿಸಲಾಗಿರುತ್ತದೆ (ಎಫೆಸ 5:25; ತೀತನಿಗೆ 2:3, 4). ದಾಂಪತ್ಯವನ್ನು ಗೌರವದಿಂದ ಕಾಣುವಂಥ ದೇವರಿಗಾಗಿ ಮರ್ಯಾದೆಯನ್ನು ಹೊಂದಿರುವದು ಒಂದು ಭಕ್ತಿಯುಳ್ಳ ದಾಂಪತ್ಯವನ್ನು ಶ್ರದ್ಧೆಯಿಂದ ಕಾಪಾಡಿಕೊಂಡು ಹೋಗುವದಕ್ಕೆ ಸಾಕಾದಂಥ ಕಾರಣವಾಗಿರತಕ್ಕದ್ದು.

### ದೇವರು ಜಾರರಿಗೂ ವ್ಯಭಿಚಾರಿಗಳಿಗೂ ನ್ಯಾಯತೀರಿಸುವನು (13:4)

ದಾಂಪತ್ಯವು "ಮಾನ್ಯವಾದದ್ದೆಂದು ಎಣಿಸಲ್ಪಡಲರ್ಹ," ಅಂದರೆ ಅದು ಗೌರವದಿಂದ ಕಾಣತಕ್ಕದ್ದೆಂದು, ಅತ್ಯಂಥ ಬೆಲೆಯುಳ್ಳದ್ದೆಂದು, ಮತ್ತು ದೇವರಿಗೆ ಸಹ ಅಮೂಲ್ಯವೆಂದು ಅರ್ಥವಾಗುತ್ತದೆ. ಅದಕ್ಕೆ ತದ್ವಿರುದ್ಧವಾಗಿ, ದಾಂಪತ್ಯದ ಪ್ರಯೋಜನವಿಲ್ಲದೆ ಲೈಂಗಿಕವಾಗಿ ಜೊತೆಯಲ್ಲಿ ವಾಸಿಸುವದನ್ನು ಶಾಸ್ತ್ರಗಳು ಯಾವದೇ ವಿಧದಲ್ಲಿಯೂ ಯೋಗ್ಯವಾದದ್ದೆಂದು ಪರಿಗಣಿಸುವದಿಲ್ಲ. ಆದದರಿಂದ, ಅಂಥ ಜೀವಿತವು ಕ್ರೈಸ್ತರಿಂದ ಗೌರವದಿಂದ ಕಾಣಕೂಡದು ಎಂದು ಭಾವಿಸಿಕೊಳ್ಳುತ್ತೇವೆ. ಅಂಥ ಒಂದು ಸಂಬಂಧವು ಹಾನಿಕಾರಕ, ಮತ್ತು ಜೀವನಶೈಲಿಯು ದೇವರಿಗೆ ಅಮೂಲ್ಯವೆಂದೆಣಿಸಲ್ಪಡುವದಕ್ಕೆ ಕಷ್ಟಸಾಧ್ಯವಾದ ಮಾತು; ವಾಸ್ತವದಲ್ಲಿ, ಅದು 1 ಥೆಸಲೋನಿಕ 4:1-8ರಲ್ಲಿ ಖಂಡಿಸಲ್ಪಟ್ಟಿರುತ್ತದೆ. ಉನ್ನತವಾದ ನೈತಿಕ

ಮಾನದಂಡಗಳು ಆದಿ ಸಭೆಯನ್ನು ಸಾಮಾನ್ಯವಾದ ಸಮಾಜದಿಂದ ಭಿನ್ನಗೊಳಿಸಿತ್ತು.

ಬಾಧೆಯು – ದೈಹಿಕ ಮತ್ತು ಮಾನಸಿಕ ಎರಡೂ – ಲೈಂಗಿಕ ಪಾಪಗಳ ಸ್ವಾಭಾವಿಕವಾದ ಪರಿಣಾಮಗಳಾಗಿರಬಲ್ಲವು. ನಾವು ಸತ್ಯತೆಯುಳ್ಳವಾಗಿ ಜೀವಿಸುವೆವು ಮತ್ತು ಅನೈತಿಕವಾಗಿರುವದಿಲ್ಲ ಎಂಬ ಉದ್ದೇಶದೊಂದಿಗೆ ದೇವರು ನಮ್ಮನ್ನು ಸೃಷ್ಟಿಸಿದನು. ದೈಹಿಕವಾಗಿ ಮಾಡಿದ ಪ್ರತಿಯೊಂದು ಪಾಪ ಫಲಿತವಾಗಿ ಯಾವದೋ ಒಂದು ರೀತಿಯ ಬಾಧೆಯನ್ನು ತರುತ್ತದೆ.

ಉದಾಹರಣೆಗೆ, ಧೂಮಪಾನವು ಶ್ವಾಸಕೋಶಗಳಿಗೆ ಅಥವಾ ಹೃದಯಕ್ಕೆ ಹಾನಿಯನ್ನುಂಟು ಮಾಡಬಲ್ಲದು, ಗಡುಸಾದ ಮದ್ಯಪಾನವು ಯಕೃತ್ತಿಗೆ ಸಂಬಂಧಿಸಿದ ವ್ಯಾಧಿಗಳಿಗೆ ದಾರಿ ಮಾಡಿಕೊಡಬಲ್ಲದು, ಮತ್ತು ಹಾದರತನವು syphilis (ಮೇಹರೋಗ) ಅಥವಾ gonorrhea (ಶುಕ್ಲಮೇಹರೋಗ) ಕಾರಣದಿಂದಾಗಿ ಒಬ್ಬನ ಜನನಾಂಗಗಳಿಗೆ ಹಾನಿಯನ್ನುಂಟು ಮಾಡಬಹುದಾಗಿದೆ. ವ್ಯಕ್ತಿಗಳು ಪ್ರಕೃತಿಯಿಂದಾಗುವ ಪ್ರತಿಕ್ರಿಯೆಯ ನಿಮಿತ್ತವಾಗಿ ಹಾನಿಕಾರಕ ದುಷ್ಪರಿಣಾಮಗಳನ್ನು ಅನುಭವಿಸಬಹುದು. ದೇವರು ಇವುಗಳನ್ನು ಒಬ್ಬನು "ತನ್ನ ಶರೀರಭಾವವನ್ನು ಕುರಿತು ಬಿತ್ತುವದರ" ಫಲಿತವನ್ನಾಗಿ ಮಾಡಿದ್ದಾನೆ (ಗಲಾತ್ಯ 6:7, 8). ನಿಶ್ಚಯವಾಗಿಯೂ, ಒಬ್ಬ ಮನುಷ್ಯನು ಹಾದರವನ್ನು ಮಾಡುವಾಗ ತನ್ನ ಸ್ವದೇಹ ಸ್ವಭಾವದ ವಿರುದ್ಧವಾಗಿಯೇ ಪಾಪವನ್ನು ಮಾಡುವವನಾಗುತ್ತಾನೆ (1 ಕೊರಿಂಥ 6:18). ದೇಹವು ಒಬ್ಬರಾದ ಮೇಲೊಬ್ಬರಂತೆ ಬಹುಮಂದಿ ಲೈಂಗಿಕ ಸಂಗಾತಿಗಳನ್ನಿಟ್ಟುಕೊಳ್ಳುವ ರೀತಿಯಲ್ಲಿ, ಕೆಲವು ಧಾರ್ಮಿಕ ಗುಂಪುಗಳಿಂದ ಆಚರಿಸಲ್ಪಡುವ ಬಹುಪತ್ನಿತ್ವಕ್ಕಾಗಿ ಆಗಲಿ ರಚಿಸಲ್ಪಟ್ಟಿರುವದಿಲ್ಲ. ಅಂಥದ್ದು ಶಾಶ್ವತವಾಗಿರುವ ಸಂತೋಷವನ್ನು ತರಲಾರದು.

## ಕರ್ತನು ನಮ್ಮನ್ನು ಕೈಬಿಡುವದಿಲ್ಲ (13:5, 6)

ಕರ್ತನು ನಮ್ಮನ್ನು ಎಂದಿಗೂ ಕೈಬಿಡುವದಿಲ್ಲ ಎಂಬ ಹೇಳಿಕೆಯು ಆದಿಕಾಂಡ 28:15; ಧರ್ಮೋಪದೇಶಕಾಂಡ 31:6; ಯೆಹೋಶುವ 1:5; ಮತ್ತು 1 ಪೂರ್ವಕಾಲವೃತ್ತಾಂತ 28:20ರ ಮೇಲೆ ಆಧಾರವಾಗಿರುತ್ತದೆ. ನಾವು ಕೆಲವು ಸಾರಿ ನಮ್ಮ ಜೀವಿತಗಳು ಛಿದ್ರಗೊಳ್ಳುತ್ತಿವೆಯೆಂದು ಭಾವಿಸಿಕೊಳ್ಳುತ್ತೇವೆ. ಸಮಸ್ಯೆಯು ಕುಂದಿಹೋಗುವಂತೆ ಮಾಡುವಷ್ಟು ಬೆಟ್ಟದಂತೆ ಕಾಣುವಾಗ, ನಾವು ಅನಾವಶ್ಯಕವಾದ ಅಪರಾಧಿತ್ವವನ್ನು ಅಥವಾ ಘೋರವಾದ ಹತಾಶೆಯನ್ನು ಅನುಭವಿಸುವಾಗ, ಜೀವನವು ಕತ್ತಲಿನಂತೆ ತೋರಬಹುದು ಮತ್ತು ನಿರಾಶೆಯುಳ್ಳದ್ದಾಗಿ ಕಾಣಿಸಬಹುದು. ಈ ಸಮಯವು ಕ್ರೈಸ್ತ ಮಿತ್ರರು ಭೇಟಿ ಕೊಟ್ಟು, ಸಮಾಲೋಚನೆ, ಮತ್ತು ಸಹಾಯವನ್ನು ಮಾಡುವದಕ್ಕೆ ಸೂಕ್ತವಾಗಿರುತ್ತದೆ. ಕರ್ತನು ಅಂಥ ಮಿತ್ರರ ಮೂಲಕವಾಗಿ ಕಾರ್ಯ ಮಾಡಬಲ್ಲನು.

ದೇವರು ನಿಮ್ಮ ಸಂಗಡ ಇಲ್ಲವೆಂದು ನಿಮಗೆ *ಅನ್ನಿಸುವಾಗ*, ಆತನು ಅತ್ಯಂತ ಸಮೀಪದಲ್ಲಿರಬಹುದಾಗಿದೆ. ಆತನು ಈಗ ನಿಮಗೆ ಊಹಿಸಿಕೊಳ್ಳುವದಕ್ಕೆ ಸಾಧ್ಯವಿಲ್ಲದಂಥ ರೀತಿಯಲ್ಲಿ ನಿಮ್ಮ ಪರಿಸ್ಥಿತಿಗಳನ್ನು ನಿಭಾಯಿಸುತ್ತಿರಬಹುದಾಗಿದೆ. ಭಾವಗಳು ಅನೇಕ ಸಾರಿ ತಪ್ಪಾಗಿರುತ್ತವೆ. ನಾವು ಹೋರಾಟದಲ್ಲಿರುವಾಗ, ನಾವು ಭರವಸವುಳ್ಳ ನಂಬಿಕೆಯಲ್ಲಿ, ಇಬ್ರಿಯ 13:5, 6ನ್ನು ನಂಬುವವರಾಗಿ, ಮತ್ತು ಸಹಾಯಕ್ಕಾಗಿ ಅತ್ಯಾಸಕ್ತಿಯಿಂದ ಪ್ರಾರ್ಥಿಸುವವರಾಗಿ ಮುಂದಕ್ಕೆ ಸಾಗಬೇಕು.

ಕಠಿಣ ಸಮಯಗಳಿಗೋಸ್ಕರ ಸಿದ್ಧತೆ ಮಾಡಿಕೊಳ್ಳಲು, ನಾವು ಈ ವಿಧವಾದ ಶಾಸ್ತ್ರಗಳ ವಾಕ್ಯಗಳನ್ನು ಕಂಠಪಾಠ ಮಾಡಿಕೊಳ್ಳುವದಕ್ಕೆ ಒಪ್ಪಿಸಿಕೊಳ್ಳಬೇಕು:

ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ;
ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು.
ಆದದರಿಂದ ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದಲ್ಲಿ ಮುಣುಗಿಹೋದರೂ
ನಮಗೇನೂ ಭಯವಿಲ್ಲ (ಕೀರ್ತನೆ 46:1, 2).

## ಭಯವಿಲ್ಲದ ದೃಢವಿಶ್ವಾಸ (13:6)

ನಂಬಿಕೆಯಿಂದ ಒದಗಿಸಲ್ಪಟ್ಟಿರುವ ದೃಢವಿಶ್ವಾಸದೊಂದಿಗೆ, ಒಬ್ಬನು ಹೀಗೆ ಕೇಳಬಹುದು, "ಮನುಷ್ಯನು ನನಗೆ ಏನು ಮಾಡಾನು?" (ಕೀರ್ತನೆ 118:6). ಯಾವನೂ ನಮಗೆ ಶಾಶ್ವತವಾಗಿರುವ ಹಾನಿಯನ್ನು ಮಾಡುವದಕ್ಕೆ ಸಾಧ್ಯವಿಲ್ಲ, ಯಾಕೆಂದರೆ ದೇವರು ನಮ್ಮ ಸಂಗಡ ನಿಲ್ಲುತ್ತಾನೆ. ಆ ಸತ್ಯದಲ್ಲಿ ನಂಬಿಕೆಯನ್ನಿಟ್ಟವರಾಗಿ, ಮನುಷ್ಯನು ಮಾಡಬಹುದಾದದ್ದರ ಬಗ್ಗೆ ಇರುವ ಭಯವನ್ನು ನಾವು ಜಯಿಸಬಲ್ಲೆವು. ಶಾಸ್ತ್ರಗಳಲ್ಲಿ ಕಲಿಸಲ್ಪಟ್ಟಿರುವದರ ಮೂಲಕವಾಗಿ ತನ್ನ ಜೀವನವನ್ನು ಆಳುವಂತೆ ದೇವರಿಗೆ ಅನುಮತಿಯನ್ನು ಕೊಡುವವನಿಗೆ ದೇವರ ಶಾಂತಿ ಮತ್ತು ಶಕ್ತಿ ಲಭ್ಯವಿರುತ್ತವೆ.

## ಕೆಲಸವು ಮುಂದುವರೆಯುತ್ತಲೇ ಇರುವದು (13:7)

ಸಭೆಗೆ ಯಾವಾಗಲೂ ಸೇವೆ ಮಾಡಿ ನಡಿಸುವಂತಹ ಒಳ್ಳೇಯ, ದೀನತೆಯುಳ್ಳ ಮನುಷ್ಯರ ಅಗತ್ಯತೆಯು ಇದ್ದೇ ಇರುತ್ತದೆ. Westminster Abbeyಯಲ್ಲಿನ ಒಂದು ಸ್ಮಾರಕ ಫಲಕದಲ್ಲಿ John Wesleyಯ ಗೌರವಾರ್ಥವಾಗಿ ಈ ಮಾತುಗಳು ಇರುತ್ತವೆ: "ದೇವರು ತನ್ನ ಕೆಲಸಗಾರರನ್ನು ಹೂಣಿಡುತ್ತಾನೆ, ಆದರೆ ಆತನ ಕೆಲಸವನ್ನು ಮುಂದುವರೆಸುತ್ತಾನೆ." ನಮ್ಮ ಬಾಲ್ಯದ ದಿನಗಳಿಂದ ಘನವಾದ ಪುರುಷರ ಹಾಗೂ ಸ್ತ್ರೀಯರ ಮಾದರಿಗಳನ್ನು ಅನುಸರಿಸುವದು ನಮ್ಮನ್ನು ಉತ್ತಮವಾದ ಪ್ರಾಯಸ್ಥರನ್ನಾಗಿ ಮಾಡಬಲ್ಲದು. ನನ್ನ ತಂದೆತಾಯಿಗಳು ಯಾವಾಗಲೂ ನಮ್ಮ ಸಭೆಯ ಹಿರಿಯರು ಮತ್ತು ಬೋಧಕರಂಥ ಗೌರವಾನ್ವಿತ ವ್ಯಕ್ತಿಗಳನ್ನು ನನ್ನ ಮುಂದೆ ಮಾದರಿಯಾಗಿ ತೋರಿಸಿದರು. ಹೇಗೂ, ಮಾನವರು ಕೆಲವು ಸಾರಿ ನಮಗೆ ನಿರಾಶೆಯುಂಟು ಮಾಡಬಲ್ಲರು. ಸಭಾನಾಯಕರುಗಳು ಸಹ ನಂಬಿಕೆಯನ್ನು ಅರ್ಧದಲ್ಲಿ ಕೈ ಬಿಟ್ಟಿರುತ್ತಾರೆ. ಮಾನವ ನೂತ್ಯತೆಗಳಿಂದ ನಿರಾಶೆಗೊಳ್ಳುವಂತೆ ನಮ್ಮನ್ನು ಬಿಟ್ಟುಕೊಳ್ಳಬಾರದು. 8ನೇ ವಚನವು ನಮ್ಮನ್ನು ಎಲ್ಲರಿಗಿಂತ ಶ್ರೇಷ್ಠವಾದ ಮಾರಿಯಾಗಿರುವ ಯೇಸು ಕ್ರಿಸ್ತನ ಕಡೆಗೆ ತಿರುಗಿಸುತ್ತದೆ, ಆತನು ನಮ್ಮನ್ನು ಎಂದಿಗೂ ಆಶಾಭಂಗಗೊಳಿಸುವದಿಲ್ಲ ಅಥವಾ ತನ್ನ ತತ್ವಗಳನ್ನು ಕೈಬಿಡುವದಿಲ್ಲ.

## "ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (13:8)

"ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (ವ. 8). ಕೆಲವರು ಈ ಸತ್ಯವನ್ನು ಬಳಸಿಕೊಂಡು ಹೀಗೆ ವಾದ ಮಾಡುತ್ತಾರೆ, "ಆತನು ಬೈಬಲಿನ ಕಾಲದಲ್ಲಿ ಅದ್ಭುತಗಳನ್ನು ನಡಿಸಿದನು; ಆತನು ಈಗಲೂ ಏಕರೀತಿಯಾಗಿಯೇ ಇರುವದಾದರೆ, ಆತನು ಈ ದಿನದಲ್ಲಿಯೂ ಹಾಗೆಯೇ ಮಾಡಬೇಕು." ಇದು ಊರ್ಜಿತವಲ್ಲದ ತರ್ಕವಾಗಿರುತ್ತದೆ ಯಾಕೆಂದರೆ ಆತನು ಇಂದು ಅದೇ ವ್ಯಕ್ತಿಯಾಗಿದ್ದಾನೆ, ಅದೇ ಸ್ವಭಾವವುಳ್ಳವನು ಎಂದಷ್ಟೇ ಈ ವಾಕ್ಯಭಾಗವು ಕಲಿಸುತ್ತದೆ. ಆತನು ನಮ್ಮ ಹಿತಾಸಕ್ತಿಯಲ್ಲಿ ಅದೇ ಬಯಕೆಯನ್ನು ಮತ್ತು ನಮ್ಮ ಆತ್ಮಗಳನ್ನು ರಕ್ಷಿಸುವದಕ್ಕೆ ಅದೇ

ಶಕ್ತಿಯನ್ನು ಹೊಂದಿದ್ದಾನೆ. ಆತನು ತನ್ನ ಭೂಲೋಕದ ಸೇವೆಯ ವೇಳೆ ನಡೆದುಕೊಂಡ ರೀತಿಯಲ್ಲಿಯೇ ಇಂದು ಸಹ ನಡೆದುಕೊಳ್ಳುವನೆಂಬುದನ್ನು ಈ ಹೇಳಿಕೆಯೂ ಯಾವ ರೀತಿಯಲ್ಲಿಯೂ ಸೂಚಿಸುವದಿಲ್ಲ.

ಯೇಸು ಈಗ ಕೆಲವು ಮೀನುಗಳನ್ನು ಮತ್ತು ರೊಟ್ಟಿಗಳನ್ನು ತೆಗೆದುಕೊಂಡು ಲೋಕದಲ್ಲಿ ಹಸಿವೆಯಿಂದ ಬಳಲುತ್ತಿರುವ ಲಕ್ಷಾಂತರ ಜನರಿಗೆ ಊಟ ಮಾಡಿಸುವದಕ್ಕಾಗಿ ತಕ್ಷಣದಲ್ಲೇ ಅವುಗಳನ್ನು ಆಹಾರವನ್ನಾಗಿ ಮಾರ್ಪಡಿಸುವನೋ? (ನೋಡಿರಿ ಮತ್ತಾಯ 14:15-21; ಮಾರ್ಕ 6:34-44; ಯೋಹಾನ 6:5-13.) ಆತನು ಈಗ ನೀರನ್ನು ಒಂದು ಕ್ಷಣದಲ್ಲಿಯೇ ದ್ರಾಕ್ಷಾ ರಸವನ್ನಾಗಿ ಮಾರ್ಪಡಿಸುವನೋ (ಯೋಹಾನ 2:1-10)? ಆತನು ಇಂದು ಕೇವಲ ಮಾತನ್ನು ಹೇಳುವ ಮೂಲಕ ಮಣ್ಣಿನಿಂದ ಮನುಷ್ಯರನ್ನು ಸೃಷ್ಟಿಸುವನೋ (ಆದಿಕಾಂಡ 2:7)? ಆತನು ವ್ಯಕ್ತಿಗಳನ್ನು ಸತ್ತವರೊಳಗಿಂದ ಎಬ್ಬಿಸುವನೋ? (ನೋಡಿರಿ ಲೂಕ 7:11-15; 8:49-55.) ಸ್ಪಷ್ಟವಾಗಿರುವಂತೆ, ಯೇಸು ಭೂಮಿಯ ಮೇಲಿದ್ದ ವೇಳೆಯಲ್ಲಿ ನಡಕೊಂಡ ಅದೇ ರೀತಿಯಲ್ಲಿಯೇ ಇಂದು ನಡಕೊಳ್ಳುವದಿಲ್ಲ.

## ಸತ್ಯವಾದ ಸಿದ್ಧಾಂತವನ್ನು ನಂಬುವದಕ್ಕೆ ಪ್ರತಿಯೊಬ್ಬನು ಜವಾಬ್ದಾರನಾಗಿದ್ದಾನೆ (13:9)

ಪ್ರತಿಯೊಬ್ಬ ಕ್ರೈಸ್ತನಿಗೆ ತನ್ನ ಹೃದಯವನ್ನು ನಂಬಿಕೆಯಲ್ಲಿ ಅಚಲವಾಗಿಟ್ಟುಕೊಳ್ಳುವ ಜವಾಬ್ದಾರಿಯನ್ನು ಹೊಂದಿದ್ದಾನೆ. ಇಬ್ರಿಯರು ತಮಗೆ ಬಹಳವಾದ ಹಾನಿಯನ್ನುಂಟು ಮಾಡಬಲ್ಲ ಉಪದೇಶಗಳಿಗೆ ಕಿವಿಗೊಡುತ್ತಿದ್ದಿರಬಹುದಾಗಿದೆ. ಸುಳ್ಳು ಬೋಧಕರು ಶಾಪಗ್ರಸ್ಥರು (ಗಲಾತ್ಯ 1:8, 9), ಆದರೆ ಪ್ರತಿಯೊಂದು ಹೊಸ ಬೋಧನೆಗಳನ್ನು ದೇವರ ವಾಕ್ಯದ ಬೆಳಕಿನಲ್ಲಿ ಪರೀಕ್ಷಿಸುವದು ಕೇಳಿಸಿಕೊಳ್ಳುವವನ ಕೆಲಸವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 17:11; ನೋಡಿರಿ 2 ತಿಮೊಥೆ 2:15). ನಾವು ಇದನ್ನು ಮಾಡುವದಕ್ಕೆ ವಿಫಲರಾಗುವದಾದರೆ, ನಾವು "ಕೃಪೆಯನ್ನು ಆತುಕೊಂಡು ಮನಸ್ಸನ್ನು ದೃಡಮಾಡಿಕೊಳ್ಳುವದಕ್ಕೆ" ಸಾಧ್ಯವಾಗುವದಿಲ್ಲ (ವ. 9). ಆತ್ಮೀಕವಾಗಿ ಪರಿಪಕ್ವಗೊಳ್ಳುವದಕ್ಕೆ, ಇದೊಂದು ಅವಶ್ಯಕತೆಯಾಗಿರುತ್ತದೆ. ನಾವು ಬೆಳೆದುದಾರಿ ತಪ್ಪಿಸಲ್ಪಡದಂತಾಗಲು ವಾಕ್ಯವನ್ನು ಕಲಿಯುವದು ನಮ್ಮ ಕರ್ತವ್ಯವಾಗಿರುತ್ತದೆ (1 ಪೇತ್ರ 2:1-3; 2 ಪೇತ್ರ 3:18).

## ಅನ್ಯೋನ್ಯತೆ (13:9)

ಯೆಹೂದಿಕರಣಗೊಳಿಸುವವರಲ್ಲಿ ಕೆಲವರು ಯೆರೂಸಲೇಮಿನಿಂದ ಬರುವ ತನಕ ಪೇತ್ರನು ಅನ್ಯಜನಾಂಗದವರ ಸಂಗಡ ಕುಳಿತು ಊಟ ಮಾಡುತ್ತಿದ್ದನು, ಮತ್ತು ನಂತರ ಆತನು ಅವರನ್ನು ಬಿಟ್ಟು ಹಿಂದಕ್ಕೆ ಸರಿದನು. ಆತನು ತನ್ನ ಕಪಟತನಕ್ಕಾಗಿ ದೋಷಿಯಾಗಿದ್ದಾನೆಂದು ಪೌಲನು ಹೇಳಿದನು (ಗಲಾತ್ಯ 2:11-21). "ಶುದ್ಧ" ಆಹಾರವನ್ನು ಮಾತ್ರವೇ ತಿನ್ನಬೇಕೆಂಬ ಯೋಚನೆಯು ಯೆಹೂದಿ ಉಪದೇಶದಲ್ಲಿ ಎಷ್ಟೊಂದು ಸ್ವಭಾವರೂಢವಾಗಿತ್ತೆಂದರೆ ತನ್ನ ನಡವಳಿಕೆಯಿಂದ ಸಹೋದರರಿಗೆ ಆಘಾತವಾಗುವದೆಂದು ಪೇತ್ರನಿಗೆ ಗೊತ್ತಿತ್ತು; ಅವರು ಕೊರ್ನೇಲ್ಯನ ಪರಿವರ್ತನೆಯ ಸಮಯದ ವರೆಗೂ ಹೊರಗೆ ಬಂದು ಅನ್ಯಜನರೊಳಗೆ ಹೊಕ್ಕುಬಳಕೆಯಾಗಿರಲಿಲ್ಲ (ಅಪೊಸ್ತಲರ ಕೃತ್ಯಗಳು 10:1-11:18). ಅನ್ಯಜನಾಂಗದಿಂದ ಹೊಸದಾಗಿ ಪರಿವರ್ತನೆಗೊಂಡವರಿಗೆ ಪೇತ್ರನ ನಡವಳಿಕೆಯು ಎಷ್ಟು ವಿನಾಶಕರವಾಗಬಹುದು ಎಂಬುದು ಪೌಲನಿಗೆ ಗೊತ್ತಿತ್ತು, ಆದ್ದರಿಂದ ಈ ರೀತಿಯಾಗಿ ರಾಜಿ ಮಾಡಿಕೊಂಡಿದ್ದಕ್ಕಾಗಿ ಪೇತ್ರನನ್ನು ಆತನು ಕಠೋರವಾಗಿ ಖಂಡಿಸಿದ್ದನು. ಆತನು ಸ್ಥಿರತೆಯಿಂದಿದ್ದಿದ್ದರೆ, ಆತನು ಈ

ಯೆಹೂದಿಕರಣಗೊಳಿಸುವವರನ್ನು ತಡೆಯುವದರಲ್ಲಿ ಶಕ್ತಿಶಾಲಿಯಾದ ಪ್ರಭಾವವಾಗಿ ಇರುತ್ತಿದ್ದನು. ಅವರು ಹೀಗೆ ಹೇಳಿರಬಹುದಾಗಿತ್ತು, "ಕರ್ತನ ಪ್ರಧಾನ ವಕ್ತಾರನಾಗಿರುವ ಪೇತ್ರನು, ಈಗ 'ಅಶುದ್ಧ' ಆಹಾರವನ್ನು ತಿನ್ನುವದಾದರೆ ಮತ್ತು ಅನ್ಯಜನರು ಸಹ ಹಾಗೆಯೇ ತಿನ್ನುವದಾದರೆ, ಬಹುಶಃ ನಾವೂ ಬದಲಾಗಬೇಕು." 9:10ರಲ್ಲಿ ನಾವು ಆಹಾರ ಮತ್ತು ಪಾನದ ಕುರಿತಾದ ನಿಯಮಗಳು "ತಿದ್ದುಪಾಟಿನ ಕಾಲದ ವರೆಗೆ ಮಾತ್ರವೇ" ಇದ್ದವೆಂಬುದನ್ನು ಓದುತ್ತೇವೆ. ಸಭೆಯಲ್ಲಿರುವ ಯೆಹೂದ್ಯರಿಗೆ ಆ ಕಾಲವು ಈಗ ಬಂದಿತ್ತು.

ನಿಧಾನವಾಗಿ ಹೋಗುವ ಸಮಯಗಳು ಇರಬಹುದು ಮತ್ತು ಇನ್ನು ಕೆಲವು ಸಮಯಗಳಲ್ಲಿ ನಮ್ಮ ಸಹೋದರರ ಆತ್ಮಗಳಿಗೆ ನಿರ್ಣಾಯಕವಾಗಿರಬಹುದು. ಈಗ ಕ್ರೈಸ್ತರು ಎಡವಿ ಬಿದ್ದು ಹೋಗಬಹುದಾದರೂ, ಪರಿಪಕ್ವವುಳ್ಳವರು ಹಾಗೆ ಮಾಡುವ ಸಾಧ್ಯತೆಯು ಕಡಿಮೆಯಾಗಿರುತ್ತದೆ. ನಾವು ಹೊಸ ಕ್ರೈಸ್ತರೊಂದಿಗೆ ಅನ್ಯೋನ್ಯತೆಯನ್ನು ಏರ್ಪಡಿಸಿಕೊಳ್ಳಲು ವಿಶೇಷ ಪರಿಶ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಅವರೊಂದಿಗೆ ಊಟವನ್ನು ಹಂಚಿಕೊಳ್ಳಬೇಕು. ದೀರ್ಘಕಾಲದಿಂದಲೂ ಒಟ್ಟಾಗಿ ಊಟ ಮಾಡುವದು ಪೂರ್ಣ ಅನ್ಯೋನ್ಯತೆಗೆ ಮತ್ತು ಅಂಗೀಕಾರಕ್ಕೆ ಒಂದು ಸಂಕೇತವಾಗಿರುತ್ತದೆ.

## "[ನಮ್ಮ] ತುಟಿಗಳ ಫಲ"ದ ಪರಿಣಾಮಗಳು (13:15)

ದೇವರಿಗೆ ನಾವು ಸಮರ್ಪಿಸುವ ಸ್ತೋತ್ರದ ಯಜ್ಞವು "ತುಟಿಗಳ ಫಲ" ಆಗಿರುತ್ತದೆ (ವ. 15). ಮಾನವ "ತುಟಿಗಳಿಂದ" ಬರುವಂತದ್ದು ಹೃದಯದೊಳಗಿಂದ ಉಗಮಗೊಳ್ಳುತ್ತದೆ; ಇದು ಮಾನವ ಕಲ್ಪಿತವಾದ ಯಾಂತ್ರಿಕ ಸಾಧನದಿಂದ ರಚಿಸಲ್ಪಡಬಲ್ಲ ಮಾತಾಗಿರುವದಿಲ್ಲ. ಅನೇಕರು ತಮಗೆ ದೇವರು ತಲಾಂತುಗಳನ್ನು (ಪ್ರತಿಭೆಗಳನ್ನು) ಕೊಟ್ಟಿದ್ದು ಆತನನ್ನು ಸ್ತುತಿಸುವದಕ್ಕಾಗಿ ಅವುಗಳನ್ನು ಬಳಸಬೇಕೆಂದು ಹೇಳಿಕೊಳ್ಳುತ್ತಾರೆ. ಒಬ್ಬನ "ಪ್ರತಿಭೆ"ಯನ್ನು (ದೇವರು ಕೊಟ್ಟಿರುವದಾಗಲಿ ಅಥವಾ ಸ್ವಾಭಾವಿಕವಾಗಿ ಅಭಿವೃದ್ಧಿಪಡಿಸಿಕೊಂಡದ್ದಾದರೂ ಸರಿಯೇ) ತೋರ್ಪಡಿಸಿಕೊಳ್ಳುವದು ತಮ್ಮನ್ನೇ ಘನಪಡಿಸಿಕೊಳ್ಳುವ ಒಲವು ಆಗಿರುತ್ತದೆ. ಕ್ರಿಸ್ತನ ದೇಹದ ಎಲ್ಲಾ ಸದಸ್ಯರನ್ನು ಗಾನಮಾಡಿರಿ ಎಂದು ಬೇಡಿಕೊಳ್ಳಲಾಗಿರುತ್ತದೆ – ದೇವರನ್ನು ಸ್ತುತಿಸುವದು ಮಾತ್ರವೇ ಅಲ್ಲ, ಆದರೆ "ಒಬ್ಬರಿಗೊಬ್ಬರು ಉಪದೇಶಮಾಡಿಕೊಳ್ಳಿರಿ, ಬುದ್ಧಿಹೇಳಿಕೊಳ್ಳಿರಿ" ಎಂದು ಸಹ ಬೇಡಿಕೊಳ್ಳಲಾಗಿರುತ್ತದೆ (ಕೊಲೊಸ್ಸೆ 3:16). ಈ "ತುಟಿಗಳ ಫಲ"ವು ಕೇವಲ ಕೆಲವು ಗಣ್ಯರಿಂದ ಮಾತ್ರವಲ್ಲದೆ, ಸಕಲ ಕ್ರೈಸ್ತರಿಂದಲೂ ಬರತಕ್ಕದ್ದು.

ಈ ಎರಡು ವಾಕ್ಯಭಾಗಗಳು ದೇವರಿಗೆ ಸ್ತೋತ್ರ ಯಜ್ಞಗಳನ್ನು ಅರ್ಪಿಸುವಂತೆ ಪ್ರತಿಯೊಬ್ಬ ಕ್ರೈಸ್ತನಿಗೆ ಆಜ್ಞಾಪಿಸುತ್ತವೆ. ಎಫೆಸದವರಿಗೆ ಮತ್ತು ಕೊಲೊಸ್ಸೆಯವರಿಗೆ ಪತ್ರಿಕೆಗಳಲ್ಲಿರುವ ವಾಕ್ಯಭಾಗಗಳು ಖಚಿತವಾಗಿಯೂ, ಅತ್ಯುನ್ನತ ಹಾಡುಗಾರರಾಗಿದ್ದರೂ ಸರಿಯೇ ಅಥವಾ ಕಳಪೆ ಹಾಡುಗಾರರಾಗಿದ್ದರೂ ಸರಿಯೇ ಆಜ್ಞಾರ್ಥಕ ಕ್ರಿಯೆಯಲ್ಲಿ ಎಲ್ಲರೂ ಭಾಗಿಯಾಗಬಹುದಾದ ಸಭೆಯಾಗಿ ಹಾಡುವಿಕೆಯನ್ನು ಸೂಚಿಸುತ್ತವೆ. ಸಾರ್ವಜಕನಿಕವಾದ ಆರಾಧನೆಯಲ್ಲಿ "ನಾವು" ಭಾಗಿಯಾಗಬೇಕಾಗಿರುತ್ತದೆ (ವ. 15) ಮತ್ತು ಇಲ್ಲಿ "[ನಮ್ಮ] ತುಟಿಗಳ ಫಲ"ದ ಅಗತ್ಯವಿರುತ್ತದೆ.

## ಕ್ರೈಸ್ತೀಯ ಯಜ್ಞ (13:15, 16)

ಮೋಶೆಯ ಕಾಲದ ಯಜ್ಞಗಳು ಅಗತ್ಯವು ಈಗ ಅವಶ್ಯವಿಲ್ಲದ್ದು ಎಂಬುದನ್ನು ಇಬ್ರಿಯರಿಗೆ ಪತ್ರಿಕೆಯು ಖಂಡಿತವಾಗಿ ಕಲಿಸುತ್ತದೆ. ಹಳೆಯ ವ್ಯವಸ್ಥೆಯು ಗತಿಸಿ ಹೋಗುವದು. ಅದು ಎಂದಿಗೂ ಮಾನವನನ್ನು ನಿಜವಾಗಿಯೂ ದೇವರ ಬಳಿಗೆ ಕರೆದು ತರಲಾರದು, ಯಾಕೆಂದರೆ

ಪಾಪಗಳನ್ನು ನಿಜಕ್ಕೂ ಪೂರ್ಣವಾಗಿ ಎಂದಿಗೂ ಕ್ಷಮಿಸುವದಕ್ಕಾಗಲಿಲ್ಲ. ಹೊಸ ಒಡಂಬಡಿಕೆಯಲ್ಲಿ ಯಜ್ಞಗಳನ್ನು ದೇವರಿಗೆ ಮತ್ತು ಕ್ರಿಸ್ತನಿಗೆ ಸಲ್ಲಿಸುವ ಸ್ತೋತ್ರಗಳ ರೂಪದಲ್ಲಿ ಸಮರ್ಪಿಸಲಾಗುತ್ತದೆ. ನಮ್ಮ ಇಡೀ ಆರಾಧನೆಯು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನ ಮೂಲಕವೇ ಆಗಿದೆ; ನಾವು ಆತನ ನಾಮದ ಮುಖಾಂತರವಾಗಿ ಮಾತ್ರವೇ ದೇವರ ಸಮೀಪಕ್ಕೆ ಬರಬಲ್ಲೆವು. ನಾವು ಇದನ್ನು ಪ್ರತಿ ಹಾಡಿನಲ್ಲಿಯೂ ಇದನ್ನು ನಿರ್ದಿಷ್ಟವಾಗಿ ಹೆಸರಿಸುತ್ತೇವೋ ಇಲ್ಲವೋ, ನಾವು ಆತನ "ನಾಮ"ದಿಂದ ಒಂದಾಗಿ ಕಟ್ಟಲ್ಪಟ್ಟಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳತಕ್ಕದ್ದು, ಅದು ಆತನ ಅಧಿಕಾರದಿಂದ ಆಳಲ್ಪಡಬೇಕು ಎಂದರ್ಥವಾಗಿರುತ್ತದೆ (ಕೊಲೊಸ್ಸೆ 3:17).

ಕ್ರೈಸ್ತರಿಗೆ ಹೀಗೆ ಅಪ್ಪಣೆ ಮಾಡಲಾಗಿರುತ್ತದೆ, "ದೇವರಿಗೆ ಸ್ತೋತ್ರ*ಯಜ್ಞ*ವನ್ನು ಎಡೆಬಿಡದೆ ಸಮರ್ಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆ ಮಾಡುವದೇ [ತುಟಿಗಳ ಫಲ] ನಾವು ಅರ್ಪಿಸುವ ಯಜ್ಞವಾಗಿದೆ" (ವ. 15; ಒತ್ತಿ ಹೇಳಿದ್ದು ನನ್ನದು). ಜೀವನದಲ್ಲಿ ಆಶೀರ್ವಾದವನ್ನು ಪಡೆದುಕೊಳ್ಳುವ ಮತ್ತು ಸ್ತೋತ್ರವನ್ನು ಸಮರ್ಪಿಸುವದಕ್ಕೆ (ಓದಿರಿ ರೋಮಾ 1:21). ಯಾರನ್ನೂ ಹೊಂದಿಲ್ಲದೆ ಇರುವದು ನಾಸ್ತಿಕನೊಬ್ಬನಿಗೆ ಎಷ್ಟೊಂದು ಶೋಚನೀಯ! ಕೃತಜ್ಞತಾಸ್ತುತಿ ಮತ್ತು ಸ್ತೋತ್ರಗಳು ನಮ್ಮ ಜೀವಿತದಲ್ಲಿ ಫಲವನ್ನು ಕೊಡುತ್ತವೆ.

ಒಬ್ಬ ಕ್ರೈಸ್ತನು ಬೇರೆಯವರೊಂದಿಗೆ "ಹಂಚಿಕೊಳ್ಳುವ" ಹೊಣೆಗಾರಿಕೆ ಹೊಂದಿರುತ್ತಾನೆ, ಯಾಕೆಂದರೆ ಅದೇ 16ನೇ ವಚನದಲ್ಲಿರುವ *koinonia* ಯೋಚನೆಯಾಗಿರುತ್ತದೆ. ನಾವು ಮನಃಪೂರ್ವಕವಾದ ಧರ್ಮಕಾರ್ಯಗಳಿಂದ ತುಂಬಿರಬೇಕು, ಅದು "ಸಜೀವ ಯಜ್ಞಗಳನ್ನು" ಒಳಗೊಂಡಿರುತ್ತದೆ (ನೋಡಿರಿ ರೋಮಾ 12:1, 2). ನಮ್ಮ ವಾಕ್ಯಭಾಗದ 16ನೇ ವಚನದ ಪ್ರಕಾರವಾಗಿ, ಒಳ್ಳೇದನ್ನು ಮಾಡುವದು ಸಹ ಒಂದು "ಯಜ್ಞ" ಆಗಿದೆ.

ಬಹುಶಃ ನಾವು ಸಮರ್ಪಿಸಬಹುದಾದ ಎಲ್ಲಾ ಯಜ್ಞಗಳಿಗಿಂತಲೂ ಶ್ರೇಷ್ಠವಾದದ್ದೆಂದರೆ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ದಯೆಯುಳ್ಳ ಮತ್ತು ಪ್ರೀತಿಯ ಕ್ರಿಯೆಯೇ ಆಗಿದೆ. ಯಾಕೋಬನು ಅಭಿಪ್ರಾಯ ಪಟ್ಟಿದ್ದೇನೆಂದರೆ, "ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ [ಧರ್ಮ]" (ಯಾಕೋಬ 1:27; NEB). NRSV ತರ್ಜುಮೆಯಲ್ಲಿ "ಸಂಕಷ್ಟದಲ್ಲಿರುವ ಅನಾಥರನ್ನು ಮತ್ತು ವಿಧವೆಯರನ್ನು ಆರೈಕೆ ಮಾಡುವದು, ಮತ್ತು ತನ್ನನ್ನು ಪ್ರಪಂಚದಿಂದ ಕೇಡಿಸಲ್ಪಡದಂತೆ ಕಾಪಾಡಿಕೊಳ್ಳುವದು" ಎಂದಿರುತ್ತದೆ. ಈ ವಿಧವಾದ ಯಜ್ಞವನ್ನು ಮಾಡುವಲ್ಲಿ, ನಾವು ಯೇಸುವನ್ನು ಅನುಕರಣ ಮಾಡುವವರಾಗಿದ್ದೇವೆ, ಆತನು ಒಳ್ಳೇದನ್ನು ಮಾಡುತ್ತಾ ತಿರುಗಾಡಿದನು (ಅಪೊಸ್ತಲರ ಕೃತ್ಯಗಳು 10:38). ಇದೊಂದು ಪರೀಕ್ಷೆಯಾಗಿದ್ದು ಇದರ ಮೂಲಕ ನಾವು ನ್ಯಾಯತೀರಿಸಲ್ಪಡುವೆವು (ಮತ್ತಾಯ 25:34-46). ನಾವು ರಾಜವಂಶದ ಯಾಜಕರಾಗಿ ಸಮರ್ಪಿಸುವ "ಆತ್ಮೀಕ ಯಜ್ಞಗಳಲ್ಲಿ" ನಮ್ಮ ಸತ್ಕಾರ್ಯಗಳು ಭಾಗವಾಗಿರುತ್ತವೆ (1 ಪೇತ್ರ 2:5).

## ಹಿರಿಯರ ಕೆಲಸವೇನು? (13:17)

ಹಿರಿಯತ್ವವು ಸಭೆಯಲ್ಲಿ ದೇವರು ನೇಮಿಸಿರುವ ಅಧಿಕಾರವಾಗಿರುತ್ತದೆ. ಇದು ವರೆಗೂ ಕೆಲವು ಸಭೆಗಳಲ್ಲಿ ಹಿರಿಯರ ಸ್ಥಾನವು ಅಪವಾದಕ್ಕಿಡು ಮಾಡಲ್ಪಟ್ಟಿದೆ ಮತ್ತು ಕಳಂಕಿತಗೊಳಿಸಲ್ಪಟ್ಟಿದ್ದು ಹಿರಿಯರು ಕೇವಲ ಮತದೇಣಿಕೆ ಮಾಡುವವರಾಗಿ "ಕರ್ತನು ಹೀಗನ್ನುತ್ತಾನೆ" ಎಂಬುದಕ್ಕೆ ಸ್ವಲ್ಪವೂ ಮರ್ಯಾದೆ ಹೊಂದಿರದವರಾಗಿದ್ದಾರೆ. ದೇವರ ವಾಕ್ಯವು

ಎಲ್ಲಿ ನಿರ್ದೇಶನಗಳನ್ನು ಹೆಸರಿಟ್ಟು ಹೇಳಿದೆಯೋ, ಅವರು ಕರ್ತನ ಚಿತ್ತವನ್ನು ಕಾರ್ಯರೂಪಕ್ಕೆ ತರುವ ಹೊಣೆಗಾರಿಕೆ ಹೊಂದಿದ್ದಾರೆ.

ಹಿರಿಯರ ಕೆಲಸವು ರಕ್ಷಿಸಲ್ಪಟ್ಟವರನ್ನು ರಕ್ಷಿಸಲ್ಪಟ್ಟವರಾಗಿ ಕಾಪಾಡಿಕೊಳ್ಳುವದು ಆಗಿರುತ್ತದೆ. ಆತ್ಮಗಳನ್ನು ಆರೈಕೆ ಮಾಡುವದು ಹಿರಿಯರ ಪ್ರಾಥಮಿಕ ಕೆಲಸವಾಗಿತ್ತು ಮತ್ತು ಅಪೊಸ್ತಲರ ಎರಡನೆಯ ಕೆಲಸವಾಗಿತ್ತು. ಅಪೊಸ್ತಲರು ಸ್ವಲ್ಪ ಕಾಲದ ವರೆಗೂ ಹಿರಿಯರ ಮತ್ತು ಸಭಾಸೇವಕರ ಕೆಲಸವನ್ನು ಮಾಡಿರುವಂತೆ ತೋರಿದಾಗ್ಯೂ, ಕೆಲವು ಕೆಲಸಗಳನ್ನು ಅರ್ಹರಾದ ವ್ಯಕ್ತಿಗಳಿಗೆ ವಹಿಸಿ ಕೊಡಲಾಯಿತು ಮತ್ತು ಸ್ಥಳೀಯ ನಾಯಕತ್ವವು ಸ್ಥಾಪಿಸಲ್ಪಟ್ಟಿತು. ಅಪೊಸ್ತಲರ ಕೃತ್ಯಗಳು 6:1-7ರಲ್ಲಿ, ಅಪೊಸ್ತಲರು ವಾಕ್ಯವನ್ನು ನಿರಂತರವಾಗಿ ಸಾರುವಂತಹ ಇತರ ಕೆಲಸಗಳನ್ನು ಮಾಡುವಂತಾಗಲು ಸಭೆಯ ಚಟುವಟಿಕೆಗಳ ಮೇಲ್ವಿಚಾರಣೆಯನ್ನು ವಹಿಸಿಕೊಳ್ಳಲು ವ್ಯಕ್ತಿಗಳನ್ನು ನೇಮಕ ಮಾಡಿದರು. (ಅಪೊಸ್ತಲರು ಸುವಾರ್ತಿಕರು ಸಹ ಆಗಿದ್ದರು.) ಸಭೆಯು ಆರಿಸಿಕೊಂಡ ಏಳು ಮಂದಿಯನ್ನು ಅಪೊಸ್ತಲರು ಬಳಿಕ ಸೇವೆಯ ಕೆಲಸವನ್ನು ನಡಿಸುವಂತೆ ನೇಮಕಗೊಳಿಸಲ್ಪಟ್ಟರು. ನಿಶ್ಚಯವಾಗಿಯೂ, ಇದು ಹಿರಿಯರು ಏನು ಮಾಡಬೇಕು ಎಂಬುದಕ್ಕೆ ಮಾದರಿ ತೋರಿಸುತ್ತದೆ: ಅವರು ಆತ್ಮಗಳನ್ನು ನೋಡಿಕೊಳ್ಳಬೇಕು ಮತ್ತು ಬಾಧೆಗೊಳಗಾಗುವವರಿಗೆ ಹಸಿವೆಯಲ್ಲಿರುವವರಿಗೆ ಒದಗಿಸುವಂತಹ ಕೆಲಸಗಳನ್ನು ಮಾಡುವದನ್ನು ಬೇರೆಯವರಿಗೆ ಬಿಡತಕ್ಕದ್ದು.

ತಮ್ಮ ವಶದಲ್ಲಿರುವವರಿಗೆ ಬೋಧನೆಯಿಂದಾಗಲಿ ಅಥವಾ ಅದು ಸಮರ್ಪಕವಾಗಿ ನಡೆಸಲ್ಪಡುವಂತೆ ಜಾಗ್ರತೆ ವಹಿಸುವ ಮೂಲಕವಾಗಲಿ ಉಪದೇಶವನ್ನು ನೀಡುವ ಕೆಲಸವು ಹಿರಿಯರಿಗಿರುತ್ತದೆ (1 ತಿಮೊಥೆ 5:17). ಅವರು ನಮಗೆ ಉಪದೇಶಿಸುವದಾದರೆ, ನಾವು ಅವರ ಉಪದೇಶವನ್ನು ಸ್ವೀಕರಿಸಿಕೊಳ್ಳಬೇಕು. ಆಳುವದು ಅವರ ಕರ್ತವ್ಯವಾಗಿದೆ ಮತ್ತು ಆ ಆಳ್ವಿಕೆಗೆ ನಮ್ಮನ್ನು ಅಧೀನಪಡಿಸಿಕೊಳ್ಳುವದು ನಮ್ಮ ಕರ್ತವ್ಯವಾಗಿದೆ.[61]

ಹಿರಿಯರಿಗಾಗಿರುವ ನಮ್ಮ ಗೌರವವು ಅವರು ಸಭೆಗೆ ಮಾಡುವ ಸೇವೆಯ ನಿಮಿತ್ತವಾಗಿ ಆಗಿರಬೇಕು, ಹೊರತು ಕೇವಲ ಅವರಿಗಿರುವ "ಹುದ್ದೆ" ಕಾರಣದಿಂದಲ್ಲ.[62] ನಾವು "ಅವರ ಕೆಲಸದ ನಿಮಿತ್ತ ಅವರನ್ನು ಪ್ರೀತಿಯಿಂದ ಬಹಳವಾಗಿ ಸನ್ಮಾನಮಾಡಬೇಕು" (1 ಥೆಸಲೋನಿಕ 5:12, 13). ಅವರದ್ದು ಭಯಭರಿತ ಜವಾಬ್ದಾರಿಯಾಗಿದ್ದು ಅದರಲ್ಲಿ ಅಪಾಯದ ಕುರಿತು ಸಭೆಯನ್ನು ಎಚ್ಚರಿಸುವದು ಮತ್ತು ಭೇದಗಳನ್ನು ಅಥವಾ ಮತಭ್ರಷ್ಟತೆಯು ಸಂಭವಿಸದಂತೆ ತಡೆಯುವದು ಸೇರಿರುತ್ತದೆ.

## ಒಬ್ಬ ಹಿರಿಯನನ್ನು ಹೊಂದಿರುವದು ಅನುಮತಿಸಲರ್ಹವೋ? (13:17)

"ಹಿರಿಯ," "ಸಭಾಧ್ಯಕ್ಷ," "ಮೇಲ್ವಿಚಾರಕ," "ಕುರುಬ," ಮತ್ತು "ಸಭಾಪಾಲಕ" ಎಂಬ ಪದಗಳು ಹೊಸ ಒಡಂಬಡಿಕೆಯ ಸಭೆಯಲ್ಲಿ ಒಂದೇ ಸ್ಥಾನವನ್ನು ಸೂಚಿಸುತ್ತದೆ. ಇಂದು ಸಹ ಅದೇ ಸತ್ಯವಾಗಿರತಕ್ಕದ್ದು. ಒಬ್ಬನೇ "ಸಭಾಪಾಲಕ"ನನ್ನು ಹೊಂದಿರುವ ಸಭೆಗಳು ಮನುಷ್ಯನ ಸಂಪ್ರದಾಯಿಕ ಬಯಕೆ ಅಥವಾ ಆಚಾರ ಪರವಾಗಿ ಬೈಬಲಿನ ಅಧಿಕಾರವನ್ನು ಅಸಡ್ಡೆ ಮಾಡುತ್ತಿವೆ. ಹೊಸ ಒಡಂಬಡಿಕೆಯಲ್ಲಿ ಸಭಾಪಾಲಕರು ಎಂಬುದು ಯಾವಾಗಲೂ ಬಹುವಚನದಲ್ಲಿರುತ್ತದೆ (ಓದಿರಿ ಅಪೊಸ್ತಲರ ಕೃತ್ಯಗಳು 14:23; ಫಿಲಿಪ್ಪಿ 1:1; 1 ತಿಮೊಥೆ 4:14; ತೀತನಿಗೆ 1:5). ಒಬ್ಬ ನಿರಂಕುಶವಾದಿಯು ಕಾರ್ಯಗಳನ್ನು ಹೆಚ್ಚು ವೇಗವಾಗಿ ಸಾಧಿಸಿಕೊಳ್ಳಬಹುದು, ಆದರೆ ಅಂಥ ವ್ಯವಸ್ಥೆಯು ಒಬ್ಬರಿಗೊಬ್ಬರು ಪೂರಕವಾಗಿರುವ ಹಲವಾರು ಮಂದಿಯ ವಿವೇಚನೆಗೆ ಅನುಮತಿಯನ್ನು ನೀಡುವದಿಲ್ಲ. ಕೆಲವು ವ್ಯಕ್ತಿಗಳ ಗುಂಪು

ಸಭೆಯನ್ನು ಕಾಪಾಡುವದರಲ್ಲಿ ಹಂಚಿಕೊಳ್ಳಬಹುದಾದ ವಿವೇಚನೆ ಹಾಗೂ ಜ್ಞಾನವನ್ನು ಒಬ್ಬ ಮನುಷ್ಯನು ಹೊಂದಿರುವದಕ್ಕೆ ಸಾಧ್ಯವಿಲ್ಲ ಅನ್ನಿಸುತ್ತದೆ. ಒಬ್ಬ-ವ್ಯಕ್ತಿ ಸಭಾಪಾಲಕ ವ್ಯವಸ್ಥೆಯನ್ನು ಹೊಂದಿರುವದು ದೈವಿಕ ಅಧಿಕಾರವನ್ನು ಉಲ್ಲಂಘಿಸುವದಾಗಿದೆ; ಹೊಸ ಒಡಂಬಡಿಕೆಯ ಸಭೆಯಲ್ಲಿ ಅಂತಹ ಯಾವದೇ ಉದಾಹರಣೆಯು ಸಿಕ್ಕುವದಿಲ್ಲ.

## ಸುವಾರ್ತೆಯ ಬೋಧಕರಿಗೋಸ್ಕರ ಮತ್ತು ಸಭೆಗೋಸ್ಕರ ಪ್ರಾರ್ಥಿಸುವದು (13:20, 21)

ಪೌಲನು ತನಗೋಸ್ಕರ ಪ್ರಾರ್ಥಿಸಬೇಕೆಂದು ಸಭೆಯಿಂದ ಪ್ರಾರ್ಥನೆಗಳನ್ನು ಕೇಳಿಕೊಂಡನು. ಆತನು ಸಭೆಯ ಪ್ರಾರ್ಥನೆಯಲ್ಲಿನ ಶಕ್ತಿಯನ್ನು ನಂಬಿದ್ದನು, ಮತ್ತು ಆತನು ಅನೇಕ ಸಾರಿ ಪ್ರತಿಯಾಗಿ ಸಹೋದರರಿಗೋಸ್ಕರ ಪ್ರಾರ್ಥಿಸುವವನಾಗಿದ್ದನು.

ಸಭೆಯು ತನ್ನಲ್ಲಿರುವ ವಾಕ್ಯದ ಸಾರುವವರಿಗೋಸ್ಕರ ಪ್ರತಿ ದಿನವೂ ಪ್ರಾರ್ಥಿಸಬೇಕು ಯಾಕೆಂದರೆ ಅನೇಕ ಸದಸ್ಯರು ಒಂದು ಕಾಲದಲ್ಲಿ ಹೊಂದಿದ್ದ ಬೈಬಲ್ ಮೌಲ್ಯಗಳನ್ನು ಹಿಡಿದುಕೊಂಡಿರುವದಿಲ್ಲ. ಅವರು ಉದ್ಯೋಗ ಅಥವಾ ಸಮಾಜದ ನಿಮಿತ್ತವಾಗಿ ರಾಜಿ ಮಾಡಿಕೊಳ್ಳುವಂತೆ ಶೋಧನೆಗೊಳಾಗಿದ್ದಾರೆ. ಶ್ರೋತೃಗಳಿಗೆ ಕೇಳಿಸಿಕೊಳ್ಳಲು ಕಷ್ಟವಾಗುತ್ತದೆಂಬ ಒಂದೇ ಕಾರಣಕ್ಕಾಗಿ ಸತ್ಯವನ್ನು ತಿಳಿಸದೆ ಎಂದಿಗೂ ಹಿಡಿದಿಟ್ಟುಕೊಳ್ಳದ ಬೋಧಕರ ಅಗತ್ಯವು ನಮಗಿರುತ್ತದೆ. ಬೈಬಲಿನ ಎಲ್ಲಾ ತತ್ವಗಳನ್ನು ಬೋಧಿಸುವದರಲ್ಲಿ ಸ್ಥಿರವಾಗಿ ನಿಂತುಕೊಳ್ಳುವಂತಹ ವ್ಯಕ್ತಿಗಳು ನಮಗೆ ಅಗತ್ಯವಿದ್ದಾರೆ.

## ಇಬ್ರಿಯರಿಗಾಗಿ ಒಂದು ಪ್ರಾರ್ಥನೆ (13:20, 21)

ಇಬ್ರಿಯರಿಗೆ ಪತ್ರಿಕೆಯ ಅಂತಿಮ ವಿಭಾಗವು ಈ ಪತ್ರಿಕೆಯನ್ನು ಸ್ವೀಕರಿಸಿಕೊಂಡವರಿಗಾಗಿ ಒಂದು ಪ್ರಾರ್ಥನೆ ಹಾಗೂ ಅದರ ಇಡೀ ಸಂದೇಶದ ಒಂದು ಸಾರಾಂಶವನ್ನು ಒಳಗೊಂಡಿರುತ್ತದೆ. ಕ್ರೈಸ್ತರು ಏನಾಗಿರತಕ್ಕದ್ದು ಮತ್ತು ಆ ವಿಧದಲ್ಲಿ ಹೇಗೆ ಇರತಕ್ಕದ್ದು ಎಂಬುದನ್ನು ಲೇಖಕನು ಪುನರಾವಲೋಕನ ಮಾಡುತ್ತಾನೆ. ಈ ವಿಭಾಗದಲ್ಲಿ 20 ಮತ್ತು 21 ವಚನಗಳಲ್ಲಿನ ಹೇಳಿಕೆಯು ಮುಖ್ಯವಾಗಿರುತ್ತದೆ, ನಮಗೆ ಒದಗಿಸುವಂತೆ ಶಾಂತಿದಾಯಕನಾದ ದೇವರಿಗೆ, ಹಿಂಡಿನ ಮಹಾಪಾಲಕನಿಗೆ ಅವಕಾಶವನ್ನು ಕೊಡಬೇಕು ಎಂಬುದನ್ನು ಸೂಚಿಸುತ್ತದೆ. ನಾವು ಒದಗಿಸುವ ದಾರಿಗಳನ್ನು ಯಾವಾಗಲೂ ಅರ್ಥಮಾಡಿಕೊಳ್ಳದೆ ಇರಬಹುದಾದರೂ, ನಾವು ಅನಂತರ ಹಿಂದಿರುಗಿ ನೋಡುವದಾದರೆ ನಮಗೆ ಸಂಭವಿಸಿದ ಎಲ್ಲದರಲ್ಲಿಯೂ ಆತನ ಹಸ್ತವನ್ನು ಕಾಣುವೆವು.

ಈ ಪ್ರಕ್ರಿಯೆಯ ಮಧ್ಯದಲ್ಲಿ, ನಾವು ಬೇರೆಯವರಿಂದ ಪ್ರಾರ್ಥನೆಗಳನ್ನು ಕೇಳಿಕೊಳ್ಳಬೇಕು (13:18, 19), ಯಾಕೆಂದರೆ ಅದು ನಾವು ಗ್ರಹಿಸಿಕೊಳ್ಳುವದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾಗಿರುತ್ತದೆ. ಲೇಖಕನು ತನ್ನ ಶ್ರೋತೃಗಳಲ್ಲಿ ಕೆಲವು ಸದಸ್ಯರನ್ನು "ಆತ್ಮೀಕವಾಗಿ ಕೂಸುಗಳೆಂದು" ಕರೆದನಾದರೂ (5:11-14), ಆತನು ಆಗಲೂ ಅವರ ಪ್ರಾರ್ಥನೆಗಳನ್ನು ಅಮೂಲ್ಯವೆಂದು ಎಣಿಸಿದನು. ನಮಗೋಸ್ಕರ ಪ್ರಾರ್ಥಿಸುವ ಯಾರೊಬ್ಬರ ಪ್ರಾರ್ಥನೆಗಳನ್ನಾಗಲಿ ಸಹ ಬೆಲೆಯಿಲ್ಲದವುಗಳೆಂದು ಎಣಿಸಬಾರದು.

ದೇವರು ಹೇಗೆ ಪ್ರಾರ್ಥನೆಗಳಿಗೆ ಉತ್ತರಿಸುತ್ತಾನೆಂಬುದು ಮನುಷ್ಯನ ಜ್ಞಾನಕ್ಕೆ ಮೀರಿದ ವಿಷಯವಾಗಿದೆ, ಆದರೆ ಆತನು ಉತ್ತರಿಸುತ್ತಾನೆಂಬುದನ್ನು ದೃಢವಿಶ್ವಾಸದಿಂದ ನಂಬಬಲ್ಲೆವು. "ಶಾಂತಿದಾಯಕನಾದ ದೇವರು" ನಮಗೆ "ಶಾಶ್ವತವಾದ ಒಡಂಬಡಿಕೆಯ . . . ರಕ್ತದ" ಮೂಲಕ ಒದಗಿಸಿರುತ್ತಾನೆ. ಮನುಷ್ಯರಿಂದ ಮಾಡಲ್ಪಡುವ ಒಪ್ಪಂದಗಳು (ಒಡಂಬಡಿಕೆಗಳು) ಮರೆತು

ಹೋಗಲ್ಪಡುವವು, ಆದರೆ ನಮ್ಮೊಂದಿಗೆ ದೇವರು ಮಾಡಿರುವ ಒಡಂಬಡಿಕೆಯು ಶಾಶ್ವತವಾಗಿ ನಿಲ್ಲುವದು. ಈ ಒಡಂಬಡಿಕೆಯು ಸುರಿಸಲ್ಪಟ್ಟ ಕ್ರಿಸ್ತನ ರಕ್ತದಿಂದ ಮಾತ್ರವೇ ಅಲ್ಲ, ಆದರೆ ಆತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟದರ ಮೂಲಕವಾಗಿ ಸಹ ದೃಢೀಕರಿಸಲ್ಪಟ್ಟಿತು. "ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಕೊಂಡವರು" (ಗಲಾತ್ಯ 3:26, 27) ಮತ್ತು ಆತನಿಗೆ ನಂಬಿಗಸ್ತರಾಗಿ ಉಳಿಯುವವರಿಗೆ ನಿತ್ಯವಾದ ರಕ್ಷಣೆಯ ನಿಶ್ಚಯತ್ವವು ಇರುತ್ತದೆ.

ದೇವರು ನಮ್ಮನ್ನು ಆತನ ಚಿತ್ತ ಮಾಡುವಂತೆ "ಸನ್ನದ್ಧಗೊಳಿಸುವನು." ಬಳಸಲ್ಪಟ್ಟಿರುವ ಪದವು "ಪರಿಪೂರ್ಣತೆ" (τέλειος, *teleios*) ಸೂಚಿಸುವದಿಲ್ಲ; ಬದಲಾಗಿ, ಅದು καταρτίζω, *katartizō* ಎಂದಾಗಿದ್ದು, ಅದರರ್ಥವು "ಮುರಿಯಲ್ಪಟ್ಟ ಮೂಳೆಯು ಪುನಃ ಹೊಂದಾಣಿಕೆಗೆ ತಕ್ಕಂತೆ ಗುಣವಾಗುಂತೆ ಅದನ್ನು ಜೋಡಿಸು" ಎಂದಾಗಬಲ್ಲದಾಗಿದೆ. ಈ ಹೊಂದಾಣಿಕೆಯು ಯೇಸು ಕ್ರಿಸ್ತನ ಮೂಲಕ ಸಂಭವಿಸುತ್ತದೆ ಹೊರತು ನಮ್ಮ ಸ್ವಂತ ಕಾರ್ಯಪ್ರವರ್ತನೆಯಿಂದಾಗಲಿ ಅಥವಾ ಶಕ್ತಿಯಿಂದಾಗಲಿ ಆಗುವದಿಲ್ಲ. ನಮಗೆ ಅಗತ್ಯವಾಗಿರುವ ನಂಬಿಕೆಯನ್ನು ನಾವು ಹೊಂದಿರುವ ವೇಳೆ, ದೇವರು ನಮ್ಮಲ್ಲಿ ಮತ್ತು ನಮ್ಮ ಮೂಲಕ ಲೋಕದಲ್ಲಿ ತನ್ನ ಚಿತ್ತವನ್ನು ಸಾಧಿಸುವದಕ್ಕೆ ಕಾರ್ಯ ಮಾಡುವನು (ಫಿಲಿಪ್ಪಿ 2:12, 13).

ಇಬ್ರಿಯರಿಗೆ ಪತ್ರಿಕೆಯ ಲೇಖಕನು ಅಂತ್ಯದಲ್ಲಿ ಕರ್ತನು ಏನು ಮಾಡಿದ್ದಾನೆ ಮತ್ತು ಏನು ಮಾಡುತ್ತಿದ್ದಾನೆಂಬುದಕ್ಕಾಗಿ ಒಂದು ಸ್ತೋತ್ರವನ್ನು ಅರ್ಪಿಸದೆ (ಒಂದು "ಅಂತಿಮ ಸ್ತೋತ್ರಾರ್ಪಣೆ") ಮುಕ್ತಾಯಗೊಳಿಸುವದಕ್ಕಾಗಲಿಲ್ಲ. ನಾವು ಆಶೀರ್ವಾದಗಳನ್ನು ಪಡೆದುಕೊಂಡಿರುವಾಗ ಮಾತ್ರವೇ ಅಲ್ಲ, ಆದರೆ ಎಲ್ಲಾ ಕಾಲಗಳಲ್ಲಿಯೂ ಆತನನ್ನು ನಾವು ಸ್ತುತಿಸತಕ್ಕದ್ದು. ನಾನು ಯುವಕನಾಗಿದ್ದ ವೇಳೆ, Hugo Allmondನು ತನ್ನ ಬೈಬಲ್ ತರಗತಿಗಳನ್ನು ಕಲಿಸುತ್ತಿದ್ದನು, "ದೇವರಿಗೆ ಸ್ತೋತ್ರ ಸಲ್ಲಿಸದೆ ಎಂದಿಗೂ ಪ್ರಾರ್ಥನೆ ಮಾಡದಿರಿ." ನಾನು ಪ್ರಾರ್ಥನೆಯಲ್ಲಿ ಮೊದಲು ಸ್ತೋತ್ರ ಮಾಡುವದಕ್ಕೆ ಆದ್ಯತೆ ಕೊಡುವ ಮೂಲಕ ಆ ನಿಯಮವನ್ನು ಕೈಕೊಂಡು ನಡೆಯಲು ಪ್ರಯತ್ನಿಸುತ್ತೇನೆ.

## ಈ ಪ್ರಸಂಗವನ್ನು ಸಹಿಸಿಕೊಳ್ಳಿರಿ (13:22)

"ಎಚ್ಚರಿಕೆಯ ಮಾತು" ಎಂಬುದು ಒಂದು ಪ್ರಸಂಗ ಎಂದು ಸೂಚಿಸುವ ಪದವಾಗಿತ್ತು (ನೋಡಿರಿ [ಅಪೊಸ್ತಲರ ಕೃತ್ಯಗಳು] 13:15). ಇಲ್ಲಿರುವ "ಎಚ್ಚರಿಕೆಯ ಮಾತು" ಎಂಬುದಕ್ಕಿರುವ ಗ್ರೀಕ್ ಪದವು 3:13ರಲ್ಲಿರುವ "ಎಚ್ಚರಿಸಿರಿ (ಪ್ರೋತ್ಸಾಹಿಸಿರಿ)" ಎಂಬ ಅದೇ ಮಾತಾಗಿರುತ್ತದೆ, ಅಲ್ಲಿ ಇದನ್ನು ಅನುದಿನವೂ ಒಬ್ಬರಿಗೊಬ್ಬರು ಮಾಡಬೇಕೆಂದು ನಮಗೆ ಬುದ್ಧಿವಾದ ಹೇಳಲಾಗಿರುತ್ತದೆ.

ಉತ್ತಮವಾಗಿ ಜೀವಿಸುವಂತೆ ಮತ್ತು ಉನ್ನತವಾದ ಸೇವೆಯನ್ನು ಮಾಡುವಂತೆ ನಮ್ಮನ್ನು ಬೇಡಿಕೊಳ್ಳುವ ಉದ್ದೇಶವುಳ್ಳ ಈ ಪಾಠಗಳನ್ನು ಸಹಿಸಿಕೊಳ್ಳುವದು ಎಷ್ಟು ಕಷ್ಟಕರ! ನಾವು ಗದರಿಸಲ್ಪಡುವದಕ್ಕೆ ಬಯಸುವದಿಲ್ಲ. ಕೆಲವು ಸಾರಿ ನಾವು ಹೀಗೆ ಹೇಳಿಕೊಳ್ಳುತ್ತೇವೆ, "ನನಗೆ ಬೋಧನೆ ಮಾಡಬೇಡ!" ತಾನು ಅವರನ್ನು ಗದರಿಸುತ್ತಿದ್ದಾನೆಂದು ಕೆಲವು ವಾಚಕರು ಭಾವಿಸಿಕೊಳ್ಳುವರೆಂಬುದು ಬಹುಶಃ ಲೇಖಕನಿಗೆ ಗೊತ್ತಿತ್ತು, ಆದ್ದರಿಂದ ಆತನು ಅವರನ್ನು ತಾಳ್ಮೆಯಿಂದಿದ್ದು ಕಲಿಸಲ್ಪಟ್ಟಿರುವದನ್ನು ಅಭ್ಯಾಸ ಮಾಡಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿರಬೇಕೆಂದು ಬೇಡಿಕೊಳ್ಳುತ್ತಾನೆ. ಇಬ್ರಿಯರಿಗೆ ಕೇವಲ ಒಂದು ಯೋಚಿಸುವ ಪುಸ್ತಕವಷ್ಟೇ ಅಲ್ಲ; ಅದಕ್ಕೆ ಕೆಲಸವು ಅಗತ್ಯವಿರುತ್ತದೆ. "ಇಬ್ರಿಯರಿಗೆ ಪುಸ್ತಕವು ಕಾರ್ಯ

ಮಾಡುವಂತೆ ದೇವರು ನೀಡುವ ಕಹಳೆಯ ಕರೆ ಆಗಿದೆ."[63]

## ಅಡಿಟಿಪ್ಪಣಿಗಳು

[1]ಈ ವಿವರಣೆಯು Craig R. Koester, *Hebrews: A New Translation with Introduction and Commentary*, The Anchor Bible, vol. 36 (New York: Doubleday, 2001), 554-56, n. 453ರ ಮೇಲೆ ಆಧಾರಿತವಾಗಿರುತ್ತದೆ. [2]Ibid., 556. [3]ಈ ಪ್ರೀತಿಯು φιλέω (*phileō*; ಒಂದು ಸ್ವಾಭಾವಿಕ ಪ್ರೀತಿ) ಆಗಿದ್ದು ಅದರ ಜೊತೆಯಲ್ಲಿ ἀδελφός (*adelphos*, "ಸಹೋದರ") ನ್ನು ಹೊಂದಿರುತ್ತದೆ. *Agapē* (ἀγάπη) ಪ್ರೀತಿಯು ಒಂದು ಸ್ವತ್ಯಾಗ ಮಾಡುವ, ದೇವರಂತಹ ಪ್ರೀತಿಯಾಗಿದೆ. ಇದು ಅಷ್ಟೊಂದು ಸ್ವಾಭಾವಿಕವಲ್ಲ, ಯಾಕೆಂದರೆ ಇದು ತತ್ವದ ಮೇಲೆ ಆಧಾರವಾಗಿದೆ (1 ಯೋಹಾನ 4:19). ಹೇಗೂ, LXXನಲ್ಲಿ *phileō* ಮತ್ತು *agapē* ಗಳು ಒಂದಕ್ಕೊಂದು ಪರ್ಯಾಯವಾಗಿ ಬಳಸಲ್ಪಟ್ಟಿರುತ್ತವೆ. [4]Donald Guthrie, *The Letter to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1983), 268. [5]Clement of Rome *Epistle to the Corinthians* 10.7; 11.1. [6]"ಅಪರಿಚಿತರು ಅವರ ಬಾಗಲುಗಳ ಬಳಿಗೆ ಸೇವೆಗೋಸ್ಕರ ಬರಬಹುದು, ಆದರೆ ಸೆರೆಯಲ್ಲಿರುವವರನ್ನು ಹುಡುಕಬೇಕಿತ್ತು ಮತ್ತು ಅವರಿಗಾಗಿ ಕಾಯಬೇಕಿತ್ತು." ಯೇಸು ಸಹ ಸೆರೆಯಲ್ಲಿರುವಾಗ ಭೇಟಿ ಮಾಡಲ್ಪಟ್ಟ ಬಗ್ಗೆ ಮಾತಾಡಿದನು (ಮತ್ತಾಯ 25:36). (Neil R. Lightfoot, *Jesus Christ Today: A Commentary on the Book of Hebrews* [Grand Rapids, Mich.: Baker Book House, 1976], 247.) ಆ ದಿನಗಳಲ್ಲಿ ಸೆರೆಮನೆಯೊಳಗಿನ ಬಾಧೆಯು ಭಯಂಕರವಾಗಿರುತ್ತಿತ್ತು. ಕೋಣೆಗಳು ಕಕ್ಕಿರಿದು ತುಂಬಿರುತ್ತಿದ್ದವು, ಕೊಳೆಯಿಂದ ಮತ್ತು ಗದ್ದಲದಿಂದ ಕೂಡಿರುತ್ತಿದ್ದವು; ಮತ್ತು ಕೇವಲ ರೊಟ್ಟಿ ಹಾಗೂ ನೀರು ಮಾತ್ರವೇ ಒದಗಿಸಲ್ಪಡುತ್ತಿದ್ದವು; ಮತ್ತು ಸೆರೆವಾಸದ ಅವದಿಗಳನ್ನು ಕಾರಣವಿಲ್ಲದೆಯೇ ಹೆಚ್ಚಿಸಲಾಗುತ್ತಿತ್ತು. ಆದಿ ದೇವಜನರು ಸೆರೆಯಾಳುಗಳಿಗೆ ಭೇಟಿ ಕೊಡುವಾಗ ಸ್ವತಃ ಬಂಧನಕ್ಕೊಳಗಾಗುವ ಗಂಡಾತರಕ್ಕೆ ಗುರಿ ಪಡಿಸಿಕೊಳ್ಳುತ್ತಿದ್ದರು. ಈ ಕೆಲವೊಂದು ಪರಿಸ್ಥಿತಗಳು Arthur W. Pink, *An Exposition of Hebrews* (Grand Rapids, Mich.: Baker Book House, 1954), 1121ರಲ್ಲಿ ಬಣ್ಣಿಸಲ್ಪಟ್ಟಿರುತ್ತವೆ. [7]F. F. Bruce, *The Epistle to the Hebrews*, The New International Commentary on the New Testament (Grand Rapids, Mich.: Wm. B. Eerdmans Publishing Co., 1964), 392. [8]ಒಂದು ದೇಶದ ನ್ಯಾಯಾಲಯವು ಸಲಿಂಗಿ "ವಿವಾಹ" ವನ್ನು ಅಂಗೀಕರಿಸಿಕೊಳ್ಳುವದಕ್ಕೆ ನಿರ್ಣಯಿಸಿಕೊಂಡರೂ, ಅದು ದೇವರ ದೃಷ್ಟಿಯಲ್ಲಿ ಎಂದಿಗೂ ಅಂಗೀಕರಿಸಿಕೊಳ್ಳಲ್ಪಡುವದಿಲ್ಲ. [9]Jimmy Allen, *Survey of Hebrews*, 2d ed. (Searcy, Ark.: by the author, 1984), 155. [10]Thomas Hewitt, *The Epistle to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 206.

[11]Bruce, 393, n. 36. ನೋಡಿರಿ 1 ಥೆಸಲೋನಿಕ 4:6, ಅಲ್ಲಿ πλεονεκτέω (*pleonekteō*) ಎಂಬುದು "ವಂಚಿಸಿ" ಎಂದು ಅನುವಾದಿಸಲ್ಪಟ್ಟಿದೆ. ಆ ಪದದ ಅರ್ಥವು "ದುರುಪಯೋಗಪಡಿಸಿಕೋ" ಎಂದಾಗಿರುತ್ತದೆ ಮತ್ತು ಲೈಂಗಿಕ ಚಟುವಟಿಕೆಯನ್ನು ಒಳಗೊಂಡಿರಬಲ್ಲದು. [12]ಲೋಭವು ಒಬ್ಬ ಮನುಷ್ಯನನ್ನು ಹಿರಿಯನಾಗಿ ಸೇವೆ ಮಾಡುವದಕ್ಕೆ ಅನರ್ಹಗೊಳಿಸುತ್ತದೆ. (ನೋಡಿರಿ 1 ತಿಮೊಥೆ 3:3; 6:10.) ಕೊಲೊಸ್ಸೆ 3:5ನೇ ವಚನವು ಲೋಭವನ್ನು "ವಿಗ್ರಹಾರಾಧನೆ" ಎಂದು ಸೂಚಿಸುತ್ತದೆ. [13]Bruce, 393. [14]Kenneth Samuel Wuest*, Hebrews in the Greek New Testament for the English Reader* (Grand Rapids, Mich.: Wm. B. Eerdmans Publishing Co., 1951), 233. [15]ಇಮ್ಮಡಿ ನಕಾರಾತ್ಮಕವು ಗ್ರೀಕ್‌ನಲ್ಲಿ ಒತ್ತನ್ನು ಸೇರ್ಪಡೆಗೊಳಿಸುತ್ತದೆ. [16]ಹಳೆಯ ಒಡಂಬಡಿಕೆಯಲ್ಲಿ ಯಾವ ವಾಕ್ಯಭಾಗವೂ ಈ ಉಲ್ಲೇಖನವನ್ನು ಯಥಾಃರೀತಿಯಲ್ಲಿಯೇ ಹೊಂದಿರುವದಿಲ್ಲ. ಹೇಗೂ, ಭಾಷೆಗಳು ತಾರುಮಾರುಗೊಳಿಸಲ್ಪಡುವ ವಿಷಯವಾಗಿ ಇದು Philo *On the Confusion of Tongues* 32ದಲ್ಲಿ ಅದೇ ರೂಪದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಬಹುಶಃ ಇಬ್ಬರೂ ಒಂದು ಜನಪ್ರಿಯ ಹೇಳಿಕೆಯನ್ನು ಉಲ್ಲೇಖಿಸಿದರು ಅಥವಾ ಈಗ ಅಸ್ತಿತ್ವದಲ್ಲಿರದಂಥ LXXನ ಬೇರೊಂದು ಸಂಪುಟದಿಂದ ಉಲ್ಲೇಖಿಸಿರಬಹುದು. (Gareth L. Reese, *A Critical and Exegetical Commentary on the Epistle to the Hebrews* [Moberly, Mo.: Scripture Exposition Books, 1992], 236, n. 13.) [17]Pink, 1151. [18]Wuest, 234. [19]ಯೋಹಾನ 10:27-29 ನಾವು ನಮಗೆ ಏನನ್ನು ಮಾಡಿಕೊಳ್ಳುವಂತೆ ಮಾಡಬಲ್ಲೆವೆಂಬುದನ್ನು ಸೂಚಿಸುವದಿಲ್ಲ; ಬೇರೆ ಯಾವ ವ್ಯಕ್ತಿಯೂ ನಮ್ಮನ್ನು ಕರ್ತನ ಕೈಯಿಂದ ಕಸಿದುಕೊಳ್ಳಲಾರನು ಎಂಬುದು ಅದರ ಅರ್ಥವಾಗಿರುತ್ತದೆ. [20]ಕೀರ್ತನೆ 118 ಒಂದು ಪ್ರಸಿದ್ಧ ಯೆಹೂದಿ ಕೃತಜ್ಞತಾಸ್ತುತಿ ಅರ್ಪಣೆಯ ಕೀರ್ತನೆಯಾಗಿದ್ದು ಹಬ್ಬಗಳಲ್ಲಿ ನಿಯತಕ್ರಮವಾಗಿ ಬಳಸಲ್ಪಡುತ್ತಿತ್ತು. (Guthrie, 270.)

[21]Lightfoot, 248. [22]ಹೇಬೆಲನು ಕೊಲ್ಲಲ್ಪಟ್ಟನು (11:4), ಇಸ್ರಾಯೇಲ್ಯರನ್ನು ಗುಲಾಮರಾಗಿ ಕೆಟ್ಟ ರೀತಿಯಲ್ಲಿ

ನಡಿಸಿಕೊಳ್ಳಲಾಯಿತು (11:25), ನೀತಿವಂತರು ಕೊಲ್ಲಲ್ಪಟ್ಟರು (11:35-38), ಯೇಸುವು ಶಿಲುಗೆಬೆ ಹಾಕಲ್ಪಟ್ಟನು (12:1-4). (Craig R. Koester, *Hebrews: A New Translation with Introduction and Commentary*, The Anchor Bible, vol. 36 [New York: Doubleday, 2001], 566.) [23]ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ಹೊತ್ತಿಗೆ ಯೋಹಾನನು ಯೂದಾಯವನ್ನು ತೊರೆದಿದ್ದನು. ಆತನು ಇನ್ನೂ ಬದುಕಿದವನಾಗಿದ್ದಾನಾದರೂ ಆತನಿಗೆ ಏನಾಯಿತೆಂಬುದು ವಾಚಕರಿಗೆ ತಿಳಿದಿರದೆ ಇದ್ದಿರಬಹುದಾಗಿದೆ. [24]Lightfoot, 249. [25]Pinkನು ಹೊಸ ಒಡಂಬಡಿಕೆಯಲ್ಲಿ "ನಂಬಿಕೆ" ಎಂಬ ಪದವು ಬಳಸಲ್ಪಟ್ಟಿರುವ ನಾಲ್ಕು ವಿಧಗಳನ್ನು ದೃಷ್ಟಾಂತಪಡಿಸುತ್ತಾನೆ: "ವಿಶ್ವಾಸ" ಎಂಬದಾಗಿ (ಮತ್ತಾಯ 9:22); ನಂಬಬೇಕಾದ ಸಂಗತಿಯಾಗಿ (ಅಪೊಸ್ತಲರ ಕೃತ್ಯಗಳು 14:22; ರೋಮಾ 10:8; ಯೂದನು 3); ನಂಬಿಕೆಯ ಫಲಗಳು ಮತ್ತು ಕ್ರಿಯೆಗಳು (1 ಥೆಸಲೋನಿಕ 3:6; ಯಾಕೋಬ 2:18); ಮತ್ತು ನಂಬಿಕೆಗೆ ನಿಷ್ಠೆ (ಮತ್ತಾಯ 23:23; ರೋಮಾ 3:3). (Pink, 1186.) [26]ಈ ಪದಗುಚ್ಛವು Edward Fudge, *Our Man in Heaven: An Exposition of the Epistle to the Hebrews* (Athens, Ala.: C. E. I. Publishing Co., 1973)ರಿಂದ ತೆಗೆದುಕೊಳ್ಳಲ್ಪಟ್ಟದ್ದು. [27]ಪ್ರಕಟನೆ 5 ಮತ್ತು 6 ರಲ್ಲಿ ಮುದ್ರೆಗಳ ಒಡೆಯುವಿಕೆಯು ಸೂಚಿಸುವದೇನೆಂದರೆ ದೇವರ ಕುರಿಮರಿಯು ಈಗ ಇದನ್ನು ಬಲ್ಲವನಾಗಿರುತ್ತಾನೆ ಎಂಬದೆ. ಆತನು ಭವಿಷ್ಯದ ಜ್ಞಾನ ಮತ್ತು ತಿಳುವಳಿಕೆಯನ್ನು ಹೊಂದಿರುವದಕ್ಕೆ ಯೋಗ್ಯನಾಗಿದ್ದಾನೆ (5:12). [28]ಹೊಸ ಒಡಂಬಡಿಕೆಯಲ್ಲಿ ಅದೇ ರೀತಿಯ ಅನೇಕ ಎಚ್ಚರಿಕೆಗಳು ಕೊಡಲ್ಪಟ್ಟಿವೆ. ನೋಡಿರಿ ರೋಮಾ 16:17, 18; 1 ತಿಮೊಥೆ 6:20, 21; ತೀತನಿಗೆ 3:9-11; 2 ಪೇತ್ರ 3:16. [29]"ಸಿದ್ಧಾಂತ" ಎಂಬುದು "ಬೋಧನೆ" ಎಂಬಂತೆಯೇ ಆಗಿರುತ್ತದೆ. (See the KJV.) [30]Raymond Brown, *The Message of Hebrews: Christ Above All*, The Bible Speaks Today (Downers Grove, Ill.: Inter-Varsity Press, 1982), 257.

[31]ಮೊದಲ ಶತಮಾನದ ಕ್ರೈಸ್ತತ್ವಕ್ಕಿದ್ದ ಒಂದು ಸಾಮಾನ್ಯವಾದ ಆಕ್ಷೇಪಣೆಯು ಏನೆಂದರೆ ಶಾರೀರಿಕ ಯಜ್ಞಗಳು ಅಥವಾ ಯಜ್ಞವೇದಿಯ ಇಲ್ಲದಿರುವಿಕೆಯ ಕಾರಣದಿಂದ ತಿರುಳಿಲ್ಲದ್ದಾಗಿದೆ ಎಂಬುದು. ಕ್ರೈಸ್ತರು ಬಹಳಷ್ಟು ಸಾರಿ ಧರ್ಮದೊಂದಿಗೆ ಸಂಬಂಧಿಸಿರುವ ಕಣ್ಣಿಗೆ ಕಾಣುವ ಸಾಮಗ್ರಿಗಳನ್ನು ಹೊಂದಿರಲಿಲ್ಲವಾದ್ದರಿಂದ, ಅವರಿಗೆ ಯಾವ ದೇವರೂ ಇರುವದಿಲ್ಲ ಎಂಬ – ನಾಸ್ತಿಕರು – ಎಂದು ಆರೋಪವನ್ನು ಹೊರಿಸಲಾಗುತ್ತಿತ್ತು. ದೇವಾಲಯ, ವೇದಿ, ಯಜ್ಞಗಳು, ಯಾಜಕರು, ಮತ್ತು ಧಾರ್ಮಿಕ ಆಚಾರಗಳಂತಹ ಭೌತಿಕ ಆಕರ್ಷಕಗಳು ಸಭೆಗೆ ಅನಾವಶ್ಯಕವಾಗಿದ್ದವು. ನಮ್ಮ ಯಜ್ಞವು ಉತ್ತಮವಾದದ್ದು ಯಾಕೆಂದರೆ ಅದು ಸ್ವತಃ ಕ್ರಿಸ್ತನ ಯಜ್ಞವಾಗಿರುತ್ತದೆ. [32]Robert Milligan, *A Commentary on the Epistle to the Hebrews,* New Testament Commentaries (Cincinnati: Chase and Hall, 1876; reprint, Nashville: Gospel Advocate Co., 1975), 489. [33]10ರಿಂದ 13 ವಚನಗಳು ಕರ್ತನ ಭೋಜನದೊಂದಿಗೆ ಯಾವದೇ ನೇರವಾದ ಸಂಬಂಧ ಹೊಂದಿರುವದಿಲ್ಲ. ಅಲ್ಲದೆ ಯೋಹಾನ 6:51, 53, 54 ರೊಂದಿಗೆ ಆಗಲಿ ಯಾವದೇ ಅಕ್ಷರಶಃ ಸಂಬಂಧವಿರುವದಿಲ್ಲ ಅದು "ಜೀವವುಳ್ಳ ರೊಟ್ಟಿಯ" ಕುರಿತು ಮಾತಾಡುತ್ತವೆ. ಯೇಸು ಆ ಹೇಳಿಕೆಗಳನ್ನು ನೀಡಿದ ಬಳಿಕ, "ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ" ಎಂದು ಗಮನಕ್ಕೆ ತಂದನು (ಯೋಹಾನ 6:63). ನಾವು ವಾಸ್ತವಲ್ಲಿ ಕ್ರಿಸ್ತನ ಮಾಂಸವನ್ನು ತಿಂದು ಆತನ ರಕ್ತವನ್ನು ಅಕ್ಷರಶಃ ಕುಡಿದಾಗ್ಯೂ, ಅದು ನಮಗೆ ಆತ್ಮೀಕವಾಗಿ ಯಾವ ಪ್ರಯೋಜನವೂ ಇರುವದಿಲ್ಲ. ನಾವು ಆತನ ಶರೀರವನ್ನು ತಿನ್ನುವ ಮೂಲಕ ಕ್ರಿಸ್ತನಲ್ಲಿ ಪಾಲುಗಾರರಾಗುವದಿಲ್ಲ, ಆದರೆ ಆತನ ವಾಕ್ಯಗಳಿಗೆ ಕಿವಿಗೊಡುವ ಮೂಲಕವೇ ಆಗಿದೆ. ಯೋಹಾನ 6:53, 54, 63ರ ಅರ್ಥವು ಅದೇ ಆಗಿದೆ. "ತಿನ್ನುವ" ಕುರಿತು ಆತನು ಮಾತಾಡಿದಾಗ, ಯೇಸು ತನ್ನ ಉಪದೇಶದ ಆತ್ಮೀಕ ಸ್ವಭಾವದ ಬಗ್ಗೆ ಮಾತಾಡುತ್ತಿದ್ದಾನೆ; ಅದು ಪೂರ್ಣವಾಗಿ "ನುಂಗಲ್ಪಡಬೇಕು," "ಜೀರ್ಣಿಸಿಕೊಳ್ಳಲ್ಪಡಬೇಕು," ಮತ್ತು ಕ್ರೈಸ್ತೀಯ ಜೀವದ ಭಾಗವಾಗಿ ಮಾಡಿಕೊಳ್ಳಲ್ಪಡಬೇಕು. ಒಬ್ಬನು ಶಾರೀರಿಕವಾಗಿ ಏನು ತಿನ್ನುತ್ತಾನೆ ಅಥವಾ ತಿನ್ನುವದಿಲ್ಲವೋ ಅದು ಆತನ ಆತ್ಮವನ್ನು ರಕ್ಷಿಸುವದಿಲ್ಲ ಅಥವಾ ನಾಶನಕ್ಕೆ ಗುರಿಪಡಿಸುವದಿಲ್ಲ. [34]Bruce, 399-400. [35]ಹಳೆಯ ಒಡಂಬಡಿಕೆಯಲ್ಲಿ ಕೆಲವು ಜನರು ಮತ್ತು ಪ್ರಾಣಿಗಳು ಪಾಳೆಯದ ಆಚೆ ಒಯ್ಯಲ್ಪಡುತ್ತಿದ್ದರು: ನಾದಾಬ್ ಮತ್ತು ಅಬೀಹುರ ದೇಹಗಳು (ಯಾಜಕಕಾಂಡ 10:4, 5); ಕಲ್ಲೆಸೆಯಲ್ಪಡಬೇಕಿದ್ದ ಒಬ್ಬ ದೈವದೂಷಣೆ ಮಾಡಿದವನನ್ನು (ಯಾಜಕಕಾಂಡ 24:14, 23); ಕುಷ್ಠರೋಗಿಯಾಗಿದ್ದ ವೇಳೆ ಮಿರ್ಯಾಮಳು ಏಳು ದಿನಗಳ ಕಾಲ ಪಾಳೆಯ ಹೊರಗೆ ಇರಬೇಕಾಗಿತ್ತು (ಯಾಜಕಕಾಂಡ 12:14, 15); ಮತ್ತು ಬಲೀಪಶು (ಯಾಜಕಕಾಂಡ 16:20-22). [36]ಹಳೆಯ ಪಟ್ಟಣದಲ್ಲಿದ್ದ ಗೋಡೆಯು ಪ್ರಥಮ ಶತಮಾನದ ಗೋಡೆಯು ಇದ್ದ ಅದೇ ಸ್ಥಳದಲ್ಲಿರುವದಿಲ್ಲ. [37]ಶೀಘ್ರದಲ್ಲಿಯೇ "ಇಲ್ಲದಂತಾಗುವ" ಕಾರ್ಯದ ವಿಷಯದಲ್ಲಿ, 8:13ರ ಮೇಲಿನ ವ್ಯಾಖ್ಯೆಗಳನ್ನು ಪುನರಾವಲೋಕನ ಮಾಡಿರಿ. [38]Bruce, 402. [39]Koester, 577. [40]7:12-14ರ ಮೇಲಿನ ವ್ಯಾಖ್ಯೆಗಳನ್ನು ಪುನರಾವಲೋಕನ ಮಾಡಿರಿ.

[41]Lightfoot, 252. [42]ಈ ಬಿರುದು ರೋಮಾಪುರಕ್ಕೆ ಅನ್ವಯಿಸಲ್ಪಟ್ಟಿದೆ, ಯಾಕೆಂದರೆ ಆ ಪಟ್ಟಣವು ಮತ್ತು ವ್ಯಾಟಿಕನ್ ಎರಡೂ ಅನೇಕರ ದೃಷ್ಟಿಯಲ್ಲಿ "ಏಕ ಸಭೆ"ಯನ್ನು ಪ್ರತಿನಿಧಿಸುತ್ತವೆ. ಖಂಡಿತವಾಗಿಯೂ, ಕರ್ತನ ಸಭೆಯು ನಿತ್ಯವಾದದ್ದು (ನೋಡಿರಿ ದಾನಿಯೇಲ 2:44; ಮತ್ತಾಯ 16:18). [43]Bruce, 404. [44]Hewitt, 210. [45]Wuest, 239. ಯಜ್ಞಗಳು ಮೌಖಿಕ ಆಗಿರಬಲ್ಲವು ಎಂಬುದನ್ನು ಕೀರ್ತನೆಗಾರನು (ರು) ಒಪ್ಪಿಕೊಳ್ಳುತ್ತಾರೆ (ಕೀರ್ತನೆ 50:14, 23; 51:15-17; 107:22). [46]Reese, 244. [47]Koester, 572. [48]Bruce, 407-8. "ಕಾಯುವವರಾಗಿದ್ದಾರೆ" ಎಂಬುದು ಯೆಹೆಜ್ಕೇಲ

3:18-21ರ ಬುದ್ಧಿವಾದವನ್ನು ಸೂಚಿಸುತ್ತದೆ. [49]ಅಂಥ ವರದಿಗಳು ಅಂತಿಮ ನ್ಯಾಯತೀರ್ಪಿನ ವೇಳೆ ಕೊಡಲ್ಪಡಬಹುದು, ಆದರೆ "ಮಾಡುವಂತೆ" ಎಂಬದನ್ನು ಅನುವಾದಿಸಿರುವ ಪದವು ಒಂದು ನಿರಂತರವಾಗಿ ನಡೆಯುವ ಕ್ರಿಯೆಯನ್ನು ಸೂಚಿಸುತ್ತದೆ. [50]ನೋಡಿರಿ ರೋಮಾ 15:30; 2 ಕೊರಿಂಥ 1:8-11; ಎಫೆಸ 6:19; ಕೊಲೊಸ್ಸೆ 4:3; 1 ಥೆಸಲೋನಿಕ 5:25; 2 ಥೆಸಲೋನಿಕ 3:1.

[51]ರೋಮಾ 15:33; 16:20; ನೋಡಿರಿ 1 ಕೊರಿಂಥ 14:33; 2 ಕೊರಿಂಥ 13:11; ಫಿಲಿಪ್ಪಿ 4:9; 1 ಥೆಸಲೋನಿಕ 5:23. ಆತನು 2 ಥೆಸಲೋನಿಕ 3:16 "ಶಾಂತಿದಾಯಕನಾದ ಕರ್ತನು" ಎಂದು ಕರೆಯಲ್ಪಟ್ಟಿದ್ದಾನೆ. [52]ಯೇಸು "ಕುರುಬನು" ಎಂದು ಕರೆಯಲ್ಪಟ್ಟಿರುವ ಈ ಪತ್ರಿಕೆಯಲ್ಲಿ ಇದೊಂದೇ ಸ್ಥಳದಲ್ಲಿಯಾಗಿರುತ್ತದೆ. ಈ ಉಲ್ಲೇಖನವು ಯೆಶಾಯ 63:11ರಿಂದ ತೆಗೆದುಕೊಳ್ಳಲ್ಪಟ್ಟಿರುತ್ತದೆ (LXX). [53]"ಸತ್ತವರೊಳಗಿಂದ ಪುನರುತ್ಥಾನ"ದ ಪ್ರಾಥಮಿಕ ಸಿದ್ಧಾಂತವು ಬೇರೆ ಯಾರಾದರೂ ಎಬ್ಬಿಸಲ್ಪಡುವಿಕೆಗೆ ಯೇಸು ಕ್ರಿಸ್ತನ ಪುನರುತ್ಥಾನವು ಒಂದು ಪೂರ್ವಸೂಚನೆಯಾಗುತ್ತದೆ (6:2). [54]Brooke Foss Westcott, *The Epistle to the Hebrews: The Greek Text with Notes and Essays* (London: Macmillan & Co., 1889; reprint, Grand Rapids, Mich.: Wm. B. Eerdmans Publishing Co., 1973), 449. [55]"Amen" ಎಂಬುದಕ್ಕಿರುವ ಪದವು LXX ನಲ್ಲಿ ಅನೇಕ ಸಾರಿ *genoito* ("ಹಾಗೆಯೇ ಆಗಲಿ") ಎಂದು ಅನುವಾದಿಸಲ್ಪಟ್ಟಿದೆ, ಆದರೆ ಈ ವಾಕ್ಯಭಾಗವು ಪದವು ಹೇಗೆ ಇಬ್ರಿಯ ಭಾಷೆಯಿಂದ ಗ್ರೀಕ್ ಭಾಷೆಯಲ್ಲಿ "ಲಿಪ್ಯಂತರಣ ಮಾಡಲ್ಪಟ್ಟಿತು ಮತ್ತು ಆದಿ ಸಭೆಯಲ್ಲಿ ಹೇಗೆ ವ್ಯಾಪಕವಾಗಿ ಬಳಸಲ್ಪಡುತ್ತಿತ್ತು" ಎಂಬುದರ ಪ್ರತಿಬಿಂಬವಾಗಿರುತ್ತದೆ. (Koester, 574.) [56]Apocryphal (ಪ್ರೇರಿತವಲ್ಲದ) ಪುಸ್ತಕಗಳಾದ 2 Maccabees ಮತ್ತು Barnabasನ ಪತ್ರಿಕೆಗಳು ಇಬ್ರಿಯರಿಗೆ ಪತ್ರಿಕೆಗಿಂತಲೂ ದೀರ್ಘವಾಗಿದ್ದಾಗ್ಯೂ ಅವುಗಳನ್ನು ಕ್ಲುಪ್ತವಾದವವುಗಳೆಂದು ಎಣಿಸಲಾಗಿತ್ತು. ಈ ಕೃತ್ಯಗಳ ಧೈರ್ಯವಂತಿಕೆಯು 2 Maccabees 2:31, 32; Barnabasನ ಪತ್ರಿಕೆ 1:5ರಲ್ಲಿ ತಿಳಿಸಲಾಗಿರುತ್ತದೆ. [57]Raymond Brownನು ತಾನು ಅದನ್ನು ಸುಮಾರು ಆ ಕಾಲದಲ್ಲಿ ಓದಿದನೆಂದು ಹೇಳುತ್ತಾನೆ. (Brown, 270.) [58]Lightfoot, 255-56, n. 10. [59]"ಇತಾಲ್ಯದಿಂದ" (NASB; NIV) ಎಂಬುದು ಒಂದು ಅರ್ಥನಿರೂಪಣೆಯಾಗಿದ್ದು ರೋಮಿನಿಂದ ದೂರವಾಗಿದ್ದ ಇತಾಲ್ಯದ ಜೀವನದ ಕಡೆಗೆ ಅರ್ಥವನ್ನು ವಾಲಿಸುತ್ತದೆ. [60]ನೋಡಿರಿ ರೋಮಾ 16:24; 1 ಕೊರಿಂಥ 16:23; 2 ಕೊರಿಂಥ 13:14; ಗಲಾತ್ಯ 6:18; ಎಫೆಸ 6:24; ಫಿಲಿಪ್ಪಿ 4:23; ಕೊಲೊಸ್ಸೆ 4:18; 1 ಥೆಸಲೋನಿಕ 5:28; 2 ಥೆಸಲೋನಿಕ 3:18; 1 ತಿಮೊಥೆ 6:21; 2 ತಿಮೊಥೆ 4:22; ತೀತನಿಗೆ 3:15; ಫಿಲೆಮೋನ 25.

[61]Milligan, 493. [62]James Thompson, *The Letter to the Hebrews*, The Living Word Commentary (Austin, Tex.: R. B. Sweet Co., 1971), 182. [63]James T. Draper, Jr., *Hebrews, the Life That Pleases God* (Wheaton, Ill.: Tyndale House Publishers, 1976), 392.